UNIVERSAL
LIBRARY
OU_198292
UNIVERSAL
LIBRARY

# ಬಿನ್ನಹ

ಈ ಪುಸ್ತಕ ಭಾಷಾಂತರವಾಗಿ ಮೂರು ವರ್ಷದ ಮೇಲಾಯಿತು. ಕಾರಣಾಂತರಗಳಿಂದ ಬೆಳಕು ಕಂಡಿರಲಿಲ್ಲ. ಈಗ ಅದು ಪ್ರಕಟವಾಗುವಂತೆ ಎಲ್ಲ ಸಹಾಯವನ್ನೂ ನೀಡಿದ್ದಕ್ಕಾಗಿ ಬೆಂಗಳೂರಿನ ರೇಶ್ಮೆ ವರ್ತಕರೂ, ಮಾಜಿ ಪೌರಸಭಾ ಸದಸ್ಯರೂ ಆದ ಶ್ರೀ ಗಂಗಾಧರ ಸ್ವಾಮಿಗಳಿಗೆ ನಾನು ತುಂಬಾ ಋಣಿಯಾಗಿದೇನೆ.

ಡಾ. ಪಟ್ಟಾಭಿ ಬಲು ಚುರುಕಾದ ಬರೆಹಗಾರರು. ಆ ಬರೆವಣಿಗೆಯಲ್ಲಿ ತಿರುವು, ಮೊನೆ ಹೆಚ್ಚು. ಸಾಧ್ಯವಿದ್ದ ಮಟ್ಟಿಗೂ ಆ ವೇಗವನ್ನು ಇಲ್ಲಿ ತರಲು ಪ್ರಯತ್ನ ಮಾಡಿದೇನೆ.

೧೦—೨—೪೪ ಸಿದ್ದವನಹಳ್ಳಿ ಕೃಷ್ಣಶರ್ಮ

ಪ್ರಭಾತ ಸಾಹಿತ್ಯ ೫

ಸಂಪಾದಕ : ಸಿದ್ಧವನಹಳ್ಳಿ ಕೃಷ್ಣಶರ್ಮ

# ಹಿಂದೂ ಕುಟುಂಬ ಪುನರ್ದರ್ಶನ

ಡಾ. ಪಟ್ಟಾಭಿ ಸೀತಾರಾಮಯ್ಯ

ಅನುವಾದಕರು

ಸಿದ್ಧವನಹಳ್ಳಿ ಕೃಷ್ಣಶರ್ಮ

ಬಾಳಿಗೊಂದು ರೂಪು
ಸ್ವಭಾವಕ್ಕೊಂದು ಕಾವು
ಕೊಟ್ಟ ನನ್ನ ತಂದೆ ತಾಯಿ
**ಸಿದ್ದವನಹಳ್ಳಿ ರಂಗಾಚಾರ್ಯರಿಗೆ**
**ಶೇಷಮ್ಮನವರಿಗೆ**

೧

# ಹಿಂದೂ ಕುಟುಂಬ - ಪುನರ್ದರ್ಶನ

ರಾಜಕೀಯದಲ್ಲಿ ಮುಳುಗೇಳುತ್ತ, ದಾಸ್ಯಕ್ಕಾಗಿ ಕಿಡಿಕಾರುತ್ತ ಇರುವ ಹಿಂದುಸ್ತಾನಕ್ಕೆ ತನ್ನ ಸಮಾಜ ಶಾಸನಗಳನ್ನು, ಕುಟುಂಬ ರಚನೆಯನ್ನು ಪರಿಶೀಲಿಸಲು ವೇಳೆಯೇ ಇಲ್ಲದಾಗಿದೆ. ಇಂಗ್ಲೀಷು ಪತ್ರಿಕೆಗಳು ತಮ್ಮ ಗೃಹಕೃತ್ಯ, ಕುಟುಂಬ ವಿಷಯಗಳಿಗೆ ಎಷ್ಟೋ ಸ್ಥಳ ವನ್ನು ಕೊಡುತ್ತವೆ. ನಮ್ಮ ಪತ್ರಿಕೆಗಳೋ ಅತ್ತ ಕಡೆ ಗಮನವನ್ನೇ ಕೊಡುವುದಿಲ್ಲ. ಇದಕ್ಕಿಂತಲೂ ಸಂಕಟಕರವಾದುದು ನಮ್ಮ ವಿದ್ಯಾವಂ ತರು ಪರಪ್ರತ್ಯಯನೇಯ ಬುದ್ಧಿಗಳಾಗಿ ಪ್ರವಾಸಿಗಳು, ಮಿಷನರಿಗಳು, ರಾಜಕೀಯ ವಿರೋಧಿಗಳು, ಬಿಳಿಯ ಅಧಿಕಾರಿಗಳು ನಮ್ಮ ಸಂಪ್ರ ದಾಯ ಶೀಲಗಳ ಬಗ್ಗೆ ಆಡಿದ ಅಭಿಪ್ರಾಯಗಳನ್ನೇ ಪರಮ ಪ್ರಮಾಣ ವೆಂದು ಒಪ್ಪಿ, ಗಿಳಿಯಂತೆ ಅದನ್ನೇ ತಾವೂ ಆಡುತ್ತಿರುವ ಸನ್ನಿವೇಶ. ಇವರಿಗೆ ತಮ್ಮ ಮನೆಯಲ್ಲಿ ರುಚಿಯಿಲ್ಲ. ಈ ಅರುಚಿ ಗುಪ್ತವಾಗಿಲ್ಲ. ಸರ್ ಜಾರ್ಜ್ ಬರ್ಡ್‌ವುಡ್ ಕಂಡು ಸ್ಪಷ್ಟವಾಗಿ ಹೇಳಿಯೇ ಬಿಟ್ಟ: ಹಿಂದುಸ್ಥಾನದಲ್ಲಿ ಇಂಗ್ಲೀಷು ಓದಿದವರಿಗೆ ತಮ್ಮ ಮನೆಯೇ ಅಸಹ್ಯ, ತಾಯಿ ತಂಗಿ ಹೆಂಡತಿ ಬಳಗ – ಎಲ್ಲವೂ ಬೇಸರ. ಇದೇ ನಮ್ಮ ವಿದ್ಯೆಯ ಫಲವಾದರೆ ನಮ್ಮ ಓದು ಅಂಥ ಪ್ರತಿಷ್ಠೆಯ ಮಾತೇ ನಲ್ಲ. ಬರೀ ಓದೇ ಅಲ್ಲ, ಎರಡು ಸಂಸ್ಕೃತಿಗಳು ಸಂಧಿಸಿದಾಗ ಅದ ರಲ್ಲೂ ಒಂದು ಮೇಲಾಗಿ ಒಂದು ಅಡಿಯಾಗಿ ಕಲೆತಾಗ, ಆಗುವ ಪರಿ ಣಾಮ ಇದು. ರಾಜ್ಯವಾಳುವ ಜಾತಿಯ ನಡೆನುಡಿ ಪ್ರಜಾವರ್ಗಕ್ಕೆ ಮಾದರಿಯಾಗುತ್ತದೆ; ಅವರ ವಿಲಾಸ ವಿನೋದಗಳನ್ನು ಇವರು ಶಿರಸಾವಹಿಸಬೇಕಾಗುತ್ತದೆ.

**ರಾಜ - ಸಮಾಜದ ಅಧಿನಾಯಕ? ನಾಸ್ತಿ.**

ಸ್ವತಂತ್ರವಾದ ರಾಜ್ಯದಲ್ಲಿ ರಾಜನು ಬರೀ ರಾಜಕೀಯಾಧಿಕಾರಿಯಲ್ಲ, ಸಮಾಜ ಅಧಿನಾಯಕ. ಸಿಂಹಾಸನಾಧೀಶನಷ್ಟೇ ಅಲ್ಲ, 'ರಾಷ್ಟ್ರಪತಿ.' ರಾಜನ ಪ್ರಜೆಗಳು ಅವನ ಆಸ್ಥಾನದ ಉಡಿಗೆತೊಡಿಗೆಗಳನ್ನೂ ಆಸ್ಥಾನ ಮರ್ಯಾದೆಗಳನ್ನೂ ಅನುಕರಿಸುತ್ತಾರೆ. ಯಾವುದಾದರೂ ಸಂಪ್ರದಾಯಗಳನ್ನು ಬದಲಿಸಬೇಕಾದರೆ ರಾಜನಾಗಲಿ ರಾಣಿಯಾಗಲಿ ಹಾಗೆ ಮಾಡಿದರೆ ಸಾಕು, ಅದಕ್ಕೆ ರಾಜ ಮುದ್ರೆ ಬಿತ್ತು. ರಾಜ ಮುದ್ರೆ ಬಿದ್ದರೆ ಎಂಥ ಪುರಾತನ ಸಂಪ್ರದಾಯವೇ ಆದರೂ ಮೂಲೆ ಸೇರಿ ಮಾಯವಾಗುತ್ತದೆ; ಹೊಸ ರೂಢಿಗೆ ಕಳೆಬರುತ್ತದೆ. ಸಮಾಜವನ್ನು ಅಂಕೆಯಲ್ಲಿಟ್ಟು ನಡೆಸುವ ನಾಡಿನ ನಡತೆಯ ಮಟ್ಟ, ನೀತಿಯ ಹದ, ಮಾನ ಮರ್ಯಾದೆಯ ಬುದ್ಧಿ ಎಲ್ಲಕ್ಕೂ ನಾಡಿನ ಭಾಗ್ಯವನ್ನೂ ನಾಡಿಗರ ಹೃದಯವನ್ನೂ ಆಳುವ ದೊರೆಯೇ ಮೂಲ, ಆಧಾರ. ಯಥಾರಾಜಾ ತಥಾಪ್ರಜಾ. ದೊರೆಯ ರಾಜಕೀಯಾಧಿಕಾರಿಗಳೆಲ್ಲ ಕಡಿಮೆಮಾಡಲ್ಪಟ್ಟ ಇಂಗ್ಲೆಂಡಿನಂಥ ದೇಶದಲ್ಲಿ ದೊರೆತನದ ಗೌರವ, ಪ್ರಾಮುಖ್ಯ ಅರಸ ಅರಸಿತಿಯರು ಸಮಾಜದ ಮುಂದಾಳುಗಳೆಂಬ ಭಾವನೆಯಲ್ಲಿ ಬೆಳೆದುಬರುತ್ತದೆ. ದೇಶದ ಶ್ರೀಮಂತರನ್ನೂ ನಾಯಕರನ್ನೂ ರಾಜರ ಪರಿಚಯ ಸಹವಾಸಗಳಿಗೆ ತರಲು ಆಸ್ಥಾನವೂ ಒಂದು ಸಾಧನ. ಸಂಸ್ಕೃತಿಯಲ್ಲಿ ಸಂಪತ್ತಿನಲ್ಲಿ ಇಬ್ಬರೂ ಒಂದೇ ಗುಂಪಿನವರು. ಈ ಶ್ರೀಮಂತರ ಮೂಲಕ ಆಸ್ಥಾನಿಕರ ಮೂಲಕ ಜನತೆಗೆ ಹೊಸ ವಿಚಾರ ಭಾವನೆಗಳು ಹರಿದು ಬರುತ್ತವೆ. ನಾಡಿನ ಜನರ ಬಾಳ್ವೆಗೆ ಹೊಂದಿದವರಾಗಿ ಅವರ ಸುಖದುಃಖಗಳನ್ನು ವಿಚಾರಿಸಿ ಯೋಗಕ್ಷೇಮವನ್ನು ವಹಿಸಿ ಅವರ ಸಮಸ್ಯೆಗಳನ್ನು ವಿಮರ್ಶಿಸಿ ಅವರ ದಿನಚರಿಯ ಬದುಕಿನ ಸಾವಿರ ಕೋಟಲೆಗಳನ್ನು ತಪ್ಪಿಸುವ ಪ್ರಯತ್ನ ಮಾಡುವ ರಾಜರಾಗಲಿ ರಾಣಿಯಾಗಲಿ ಹಿಂದುಸ್ತಾನದಲ್ಲಿ ಈಗೆಲ್ಲಿದಾರೆ ?

**ಮತಾಧಿಕಾರಿಗಳಲ್ಲಿ ನಂಬಿಗೆಯಿಲ್ಲ**

ರಾಜಕೀಯ ನಾಯಕನ ಆಧಿಪತ್ಯ ಮಾಯವಾದ ಹಾಗೆಲ್ಲ ಸಮಾಜದಲ್ಲಿ ಮತಾಧಿಕಾರಿಗಳ ಬಗ್ಗೆ ನಂಬಿಕೆ, ಆದರ ಕಡಮೆಯಾದವು. ನಾವು ಕಂಡಂತೆ ತಿರಸ್ಕಾರ ಬುದ್ಧಿಯೂ ಮೊಳೆಯಿತು. ಇದಕ್ಕೆ ಕಾರಣಗಳು ದುರೂಹ್ಯವಲ್ಲ. ಹಿಂದೂ ಧರ್ಮಕ್ಕೆ ಹೇಳಿ ಕೇಳಿ ಪ್ರತ್ಯಕ್ಷ ವಿರೋಧಿಗಳಾದವರೋ, ಇಲ್ಲವೆ ಹಿಂದೂ ಧರ್ಮ ಇದ್ದರೇನು ಬಿದ್ದರೇನು ಎಂಬ ಉದಾಸೀನ ವೃತ್ತಿಯನ್ನು ತಳೆದ ಪರೋಕ್ಷ ವಿರೋಧಿಗಳೋ ಕಲಿಸಿದ ಧರ್ಮಹೀನವಾದ ಕೇವಲ ವ್ಯಾವಹಾರಿಕ ವಿದ್ಯೆ, ನಮ್ಮವರ ದೃಷ್ಟಿಯನ್ನು ಧರ್ಮದಿಂದ ಸಂಪೂರ್ಣವಾಗಿ ತಿರುಗಿಸಿದೆ ಈ ವಿಮುಖತೆಯಿಂದ ಬರೀ ಅಜ್ಞಾನವೇ ಅಲ್ಲ, ಕುತರ್ಕ ಕುವಿಮರ್ಶೆ ಅಪನಿಂದೆ ಮಾಡುವ ಚಪಲವೂ ಹುಟ್ಟಿದೆ. ನೋಡುವುದಕ್ಕೆ ಅಲ್ಪವಾಗಿ ಕಾಣುವ ಕೌಟುಂಬಿಕ ಸಮಸ್ಯೆ ಸಾಮಾಜಿಕ ಪ್ರಶ್ನೆಗಳ ಕಡೆ ಎಲ್ಲರೂ ಗಮನಕೊಡಬೇಕೆಂದು ಬೇಡುತ್ತೇನೆ.

**ಸಮಾಜಕ್ಕಿಂತ ಕುಟುಂಬಕ್ಕೆ ಹೆಚ್ಚು ಹಾನಿ**

ಕುಟುಂಬ ಸಮಾಜಗಳ ನಡುವೆ ಇದು ಇದರ ಮೇರೆ, ಇದರ ಎಲ್ಲೆ ಇಲ್ಲಿ ಎಂದು ಗೆರೆ ಎಳೆಯುವುದು ಕಷ್ಟ. ಲಕ್ಷಾಂತರ ಕುಟುಂಬ ಸೇರಿ ಒಂದು ಸಮಾಜ. ಆದರೂ ಇವು ಕೌಟುಂಬಿಕ ಪ್ರಶ್ನೆ, ಇವು ಸಮಾಜದ ಸಮಸ್ಯೆ ಎಂದು ವಿಂಗಡಿಸುವುದು ಕಷ್ಟವಲ್ಲ. ನಮ್ಮ ದೇಶಕ್ಕೆ ಮೊದಮೊದಲು ಬಂದ ಕ್ರಿಸ್ತಾನ ಮಿಷನರಿಗಳ ಟೀಕೆವಿಮರ್ಶೆಗಳು ನಿಮಿತ್ತವಾಗಿ ಸಮಾಜದ ವಿಷಯದಲ್ಲಿ ಶ್ರದ್ಧೆವಹಿಸಿ ಜಾತಿಭೇದ, ವಿಧವಾ ವಿವಾಹ, ಸ್ತ್ರೀ ವಿದ್ಯೆ ಮೊದಲಾದ ಪ್ರಶ್ನೆಗಳಿಗೆ ಕೊಂಚ ಗಮನಕೊಟ್ಟಿದೇವೆ. ಆದರೆ ಕುಟುಂಬ, ಮನೆಗಳನ್ನು ಮಾತ್ರ ಮುಟ್ಟದೆಯೇ ಅದರ ಪಾಡಿಗೆ ಅದನ್ನು ಬಿಟ್ಟಿದೇವೆ. ಬೆಳೆಯುವ ವಯಸ್ಸಿನಲ್ಲಿ, ಮನಸ್ಸಿಗೆ ಬೇರೆ ಬೇರೆ ಗುಣಗಳು ಅಂಟಿಕೊಳ್ಳುವ ಕಾಲದಲ್ಲಿ ಹುಡುಗರು ಹೋಟಲುಗಳಲ್ಲೋ ವಸತಿಗೃಹಗಳಲ್ಲೋ ಕಾಲಹಾಕುವುದರಿಂದ ರಸಜೀವನದ ಬೆಳವಣಿಗೆಗೆ ಆಧಾರವಾದ ಕುಟುಂಬ

ವಾಸವೇ ತಪ್ಪಿಹೋಗುತ್ತಿದೆ. ಹುಡುಗರು ತಮ್ಮ ಕಾಲವನ್ನೆಲ್ಲ ಪಟ್ಟಣಗಳಲ್ಲಿಯೆ ಕಳೆಯುತ್ತಾರೆ. ರಜಾ ದಿನಗಳಲ್ಲಿ ಕೂಡ ಮನೆಗೆ ಬರಲು ಇಷ್ಟ ಕಡಮೆ. • ಅಲ್ಲಿ ಸಿನಿಮಾ ನಾಟಕಗಳಿಲ್ಲ, ಹೋಟಲು ಗಳಿಲ್ಲ. ವಿದ್ಯುದ್ದೀಪದ ಪ್ರಖರ ಕಾಂತಿಗೆ ಬದಲು ಹರಳೆಣ್ಣೆ ದೀಪ. ಮೋಟಾರು ಬಸ್ಸು, ಕಾರಿಗೆ ಬದಲು ನೇಗಿಲು ಹೊತ್ತ ಬಡಕಲು ಎತ್ತಿನ ಜೊತೆಯನ್ನು ಹೊಡೆದುಕೊಂಡು ಬರುವ ಒಕ್ಕಲಿಗ ಕಣ್ಣಿಗೆ ಬೀಳುತ್ತಾನೆ. ನಮ್ಮ ಹುಡುಗರು ತಮ್ಮ ಮನೆಯಲ್ಲೇ ತಾವು ಅತಿಥಿ ಗಳಂತೆ, ಪರದೇಶಿಗಳಂತೆ ಇರುತ್ತಾರೆ. ನಮ್ಮ ಹಬ್ಬ ಹರಿದಿನಗಳಲ್ಲಿ ಅವರಿಗೆ ರುಚಿಯಿಲ್ಲ. ತಾಯಿ ತಂಗಿಯರು ಪೂಜಿಸಿ ಜನ್ಮಸಾರ್ಥಕ ಮಾಡಿಕೊಳ್ಳುವ ದೇವರುಗಳಲ್ಲಿ ಇವರಿಗೆ ಶ್ರದ್ಧೆಯಿಲ್ಲ, ಅವರ ಮನ ಸ್ಸಿಗೆ ಅವು ಒಗ್ಗುವುದಿಲ್ಲ. ವ್ರತನಿಯಮ ಕರ್ಮ ಉತ್ಸವಗಳು ಯಾವುದೂ ಅವರಿಗೆ ಅರ್ಥವಾಗುವುದಿಲ್ಲ. ನಮ್ಮ ತರುಣರನೇಕರಿಗೆ ಸಂಸ್ಕೃತವೇ ಬಾರದೆ, ಹಿಂದೂ ಕುಟುಂಬದಲ್ಲಿ ಪ್ರಯತ್ನ ಪೂರ್ವಕ ವಾಗಿ ಬೆಳೆಯಿಸಲಾಗುತಿದ್ದ ಧರ್ಮದೃಷ್ಟಿಯ ವೈಶಿಷ್ಟ್ಯವನ್ನು ತಿಳಿದುಕೊಳ್ಳಲಾರದೆ ಹೋಗುತ್ತಾರೆ. ಸ್ವತಂತ್ರವಾದ ರಾಷ್ಟ್ರಗಳಿಗೆ ತಮ್ಮ ದೊರೆ, ತಮ್ಮ ಶಾಸನ, ತಮ್ಮ ಧರ್ಮ, ವೇದಾಂತ, ತಮ್ಮ ಸಂಸ್ಕೃತಿ, ನಾಗರಿಕತೆ, ತಮ್ಮ ಸಂಪ್ರದಾಯ ಶೀಲ, ತಮ್ಮ ಕಲೆ, ನೀತಿ ಗಳ ಬಗ್ಗೆ ಅಭಿಮಾನ ಗರ್ವಗಳಿರುತ್ತವೆ. ನಮಗೆ ರಾಷ್ಟ್ರವೂ ಇಲ್ಲ ರಾಜ್ಯವೂ ಇಲ್ಲ; ಮನೆಯೂ ಇಲ್ಲ, ಸಮಾಜವೂ ಇಲ್ಲ. ಎಲ್ಲವನ್ನೂ ಹೊಸದಾಗಿ ಅರಿತು, ಅರ್ಥಮಾಡಿಕೊಂಡು ಪಡೆಯಬೇಕಾಗಿದೆ.

ಪರೀಕ್ಷಿಸಿ ನೋಡುವ ಕಣ್ಣಿಗೆ ಮುಖ್ಯವಾಗಿ ಕಾಣುವ ನಮ್ಮ ಗೃಹಲಕ್ಷಣ ಕೆಲವು ಇವೆ. ಭವಂತಿ ಮನೆ, ಅವಿಭಕ್ತ ಕುಟುಂಬ, ಗಾಢವಾದ ಬಾಂಧವ್ಯಭಾವನೆ, ಧರ್ಮಾವಲಂಬನೆ, ಹೆಂಗಸರಿಗೆ ಸಲ್ಲುವ ವಿಶೇಷ ಗೌರವ, ಆಸ್ತಿಯ ಅನುಭೋಗದಲ್ಲಿ ಕಾಣುವ ನ್ಯಾಯದ ಔಚಿತ್ಯ, ಮನೆಯಲ್ಲಿ ಪರಿಮಳಿಸುವ ಅತಿಥಿಸತ್ಕಾರಾಸಕ್ತಿ. ಇದರಲ್ಲಿ ಯಾವುದೂ ಉತ್ತಮೋತ್ತಮವಾಗಿಲ್ಲ. ಅನೇಕ ಕಾರಣಗಳಿಂದ ಹಾಗೆ ಆಗಿದೆ. ಬೆಳವಣಿಗೆ ನಿಂತು ಹೋದದ್ದೂ, ಉಪಯೋಗ ಮಾಡದೆ

ನಿಸ್ಸಾರವಾದದ್ದೂ ಈ ಲೋಪಗಳಿಗೆ ಮುಖ್ಯಕಾರಣವಿರಬೇಕು. ಸಾವಿರ ವರ್ಷಗಳಿಂದ ನಾವು ಪರಾಧೀನರಾಗಿದೇವೆ. ಹಿಂದುಸ್ತಾನ ಇಬ್ಭಾಗವಾಗಿ ಹೋಳು ಮಾಡಲ್ಪಟ್ಟಿದೆ. ಒಂದು ಭಾಗ ಪ್ರತ್ಯಕ್ಷವಾಗಿ ಪರದಾಸ್ಯಕ್ಕೆ ತುತ್ತಾಗಿದೆ. ಇನ್ನೊಂದು ಹೆಸರಿಗೆ ಮಾತ್ರ ಅರಸರಾಗಿ ತೇಜಸ್ಸು ಶಕ್ತಿಗಳಿಲ್ಲದಿದ್ದರೂ ಹಳೆಯ ಸಂಪ್ರದಾಯಗಳು ಕೆಲವನ್ನು ನಡಸಿಕೊಂಡು ಬರುತ್ತ, ತಾವೇ ವಿಲಾಯತಿ ರೀತಿಗೆ ಬಲಿಬಿದ್ದ ಸಂಸ್ಥಾನಿಕರ ಕೆಳಗೆ ಪರೋಕ್ಷ ದಾಸ್ಯಕ್ಕೆ ಪಾರಾಗಿದೆ. ಆದರೂ ಬ್ರಿಟಿಷು ಭಾರತಕ್ಕೂ ಹಿಂದೀ ಭಾರತಕ್ಕೂ ಇರುವ ವ್ಯತ್ಯಾಸಗಳು ಸ್ಪಷ್ಟವಾಗಿ ಕಾಣುತ್ತವೆ. ( ಹೊಸ ಕಾಲದ ಸೆಳವಿಗೆ ಎರಡೂ ಸಿಕ್ಕಿವೆ. ಮನೆಯಲ್ಲೂ ಸಮಾಜದಲ್ಲೂ ತಲೆಹಾಕಿರುವ ಪರಿವರ್ತನೆಗೆ ವಿಚಾರ ಶುದ್ಧಿಯಿಲ್ಲ, ಕ್ರಮವಿಲ್ಲ, ವ್ಯವಸ್ಥೆಯಿಲ್ಲ. ಸತ್ಯವಂತರಾದ, ಜ್ಞಾನಿಗಳಾದ ಅನುಭವಶಾಲಿಗಳ ಮೇಲ್ಪಂಗ್ತಿಯಿಂದ ಬಂದ ಸದಾಚಾರದಂತಲ್ಲ ಈ ವ್ಯತ್ಯಾಸ. ನಾಡಿನ ಸಂಸ್ಕೃತಿಯೆಂಬ ಮಹಾವೃಕ್ಷದಲ್ಲಿ ಹುಟ್ಟಿದ ಗಂಟುಗಳಿದ್ದಂತೆ. ಅದರಿಂದ ಸಾರ ನಷ್ಟವೇ ವಿನಾ ಲಾಭವಿಲ್ಲ. ಹಿಂದೂ ಗೃಹಲಕ್ಷಣಗಳನ್ನೆಲ್ಲ ನಿಧಾನವಾಗಿ ಪರಿಶೀಲಿಸಿದರೆ, ಈ ಪರಿವರ್ತನೆಯೆಲ್ಲವೂ - ಸುಧಾರಣೆಗಳೆಂಬ ದೊಡ್ಡ ಹೆಸರಿನಿಂದ ಕರೆದರೆ ತಾನೆ ಏನು - ಕೇವಲ 'ಹುಚ್ಚು ವೀರತನ'ದಿಂದ ಅವಿಚಾರದಿಂದ ಬಂದವು ಎಂತಲೂ, ವಿವೇಕ ವಿಚಾರದಿಂದ ಬಂದದ್ದಲ್ಲವೆಂತಲೂ ತಿಳಿಯುತ್ತದೆ. ಸಮಾಜಪತಿಗಳ ಉದಾಹರಣೆಯಿಂದ ತಿಳಿದೂ ತಿಳಿಯದ ಹಾಗೆ ಸಮಾಜದಲ್ಲಿ ಬೆರೆತುಹೋದ ಸ್ವಾಭಾವಿಕವಾದ, ಸಹಜವಾದ ಪರಿಣಾಮವಲ್ಲ ; ಬುದ್ಧಿಗೂ ಸ್ವಭಾವಕ್ಕೂ ಸಮವಾಗಿ ರುಚಿಸಿ ಜನತೆಯ ಮನಸಿಗೆ ಹಿಡಿಸಿದ ಪ್ರಗತಿಯಲ್ಲ.

### ಭವಂತಿ ಮನೆ

ಮೊದಲು ಹಿಂದೂ ಮನೆಯೊಂದನ್ನು - ಮಾದರಿಯದು - ತೆಗೆದುಕೊಳ್ಳೋಣ. ಆ ಮನೆ ಚಚ್ಚೌಕವಾಗಿ ನಡುವೆ ಗಾಳಿ ಬೆಳಕು ಬರಲು ಅಂಗಳವಿದ್ದು, ಮನೆಯಲ್ಲಿರುವವರಿಗೆ ಸದಾ ತಾರಾವಿರಾಜಿತ

ವಾದ ಮುಗಿಲ ಸಹವಾಸವನ್ನು ಕೊಡುವ ಕಟ್ಟಡ. ಆ ಮನೆಯಲ್ಲಿದ್ದರೆ ಗಾಳಿಬೆಳಕಿನಲ್ಲಿ, ಬಯಲಿನಲ್ಲಿ ಇದ್ದಂತೆಯೆ ಹೀಗೆ ಕಟ್ಟಿದ ಮನೆ ಸಹಜವಾಗಿಯೇ ವಿಶಾಲವಾಗಿರಬೇಕು. ನಡುವಿನ ಅಂಗಳದ ಸುತ್ತಲಿನ ನಾಲ್ಕು ಕೈಸಾಲೆಗಳಲ್ಲಿ ಸಾವಿರ ಜನಕ್ಕೆ ಊಟ ಬಡಿಸುವ ಅನುಕೂಲ ಇರಬೇಕೆಂಬುದು ಉದ್ದೇಶ. ಈ ಉದ್ದೇಶವು ಸ್ವಲ್ಪ ದುಸ್ಸಾಧ್ಯವಾದ ಆಶೆಯೇ, ನಿಜ. ಯಾವ ಆದರ್ಶ ದುಸ್ಸಾಧ್ಯವಲ್ಲದ್ದು? ಆದರಲ್ಲಿ ಅಡಕವಾಗಿರುವ ತತ್ವವೇ ಅದರ ಬೆಲೆ. ಹಿಂದೂಗೃಹದಲ್ಲಿ ಕುಶಲವಾಗಿ ಕೆತ್ತನೆಮಾಡಿದ ಹೊಸಲು, ದ್ವಾರಬಂಧವನ್ನು ಬಿಟ್ಟರೆ ಆಡಂಬರವೇನೂ ಇಲ್ಲ. ಆ ಬಾಗಿಲನ್ನು ಅಣಿಮಾಡಲು ಶಿಲ್ಪಿ ಕೂಲಿ ಕೇಳುವುದೇ ಇಲ್ಲ. ಮನೆಯ ವಿಸ್ತಾರಕ್ಕೆ ತಕ್ಕ ಹಾಗೆ ಒಂದು ಬಾಗಿಲು ಮಾಡುವುದು ಅವನ ಕೆಲಸ. ಮೊದಲು ಸಾಮಾನ್ಯವಾದುದೊಂದನ್ನು ತಂದು ನಿಲ್ಲಿಸಿ, ಗೃಹಪ್ರವೇಶದ ದಿನವೋ ಅದಕ್ಕೆ ಮುಂಚೆಯೋ ಆ ಬಾಗಿಲನ್ನು ತಂದು ನಿಲ್ಲಿಸಿ, ತನ್ನ ಬಹುಮಾನವನ್ನು – ಬೆಲೆಯಲ್ಲ – ಪಡೆದು ಹೊರಟುಹೋಗುತ್ತಾನೆ. ಬಡಗಿಗಾಗಲಿ ಮೇಸ್ತ್ರಿಗಾಗಲಿ ಯಾರೂ ಏನೂ ಅಪ್ಪಣೆಮಾಡಬೇಕಾದ್ದಿಲ್ಲ. ಅವರ ಶಾಸ್ತ್ರದ ಪ್ರಕಾರ ಅವರು ಕೆಲಸಮಾಡುತ್ತಾರೆ. ಆರೋಗ್ಯ, ಅನುಕೂಲ, ಭದ್ರತೆ, ಸೌಂದರ್ಯ ಎಲ್ಲ ದೃಷ್ಟಿಯೂ ಅವರಿಗುಂಟು. ಒಂದಾದರೂ ತೊಲೆ ಕೆತ್ತನೆಯಾಗದೆ ಬೋಳಾಗಿರಲು ಬಿಡರು. ಪಡುವಲ ಭಾಗ ಊಟದ ಮನೆಗೆ. ಅದರ ದಕ್ಷಿಣಕ್ಕೆ ಅಡಿಗೆಮನೆಯಲ್ಲಿ ಗಾಳಿಬೆಳಕು ಯಥೇಷ್ಟ. ಹೊರಗಿನ ಪಡಸಾಲೆಯಿಂದ ಊಟದ ಮನೆಗೆ ಹೋಗುತ್ತ ಮನೆ ವಿಶಾಲವಾಗಿ ಕಳೆ ಕಟ್ಟುತ್ತದೆ. ಎಲ್ಲಿ ಅಗತ್ಯವೋ ಅಲ್ಲಿ ವಿಸ್ತಾರ. ಒಳಗೆ ಹೋದಂತೆ ಮನೆಯ ಆತಿಥ್ಯಬುದ್ಧಿ ಒಡೆದುಕಾಣುತ್ತದೆ. ಸದ್ಗೃಹಸ್ಥರ ಸ್ವಭಾವವೇ ಹಾಗೆ. ಮೊದಮೊದಲು ಮೇಲೆಮೇಲೆ ಗಡುಸಾಗಿ ಕಂಡರೂ ಬಳಿಕೆ ಹೆಚ್ಚಿದಹಾಗೆ ಆತನ ದೊಡ್ಡಮನಸ್ಸು, ಉದಾರಹೃದಯ ತಿಳಿದುಬರುತ್ತವೆ. ಅಂಗಳದ ಪ್ರತಿಯೊಂದು ಪಕ್ಕದಲ್ಲೂ ಎರಡೆರಡು ಕಿರುಮನೆ. ಸ್ವಲ್ಪ ಬಲಿಷ್ಠರಾದವರ ಮನೆಗಳಲ್ಲಿ ಇಂಥವು ಎರಡು ಅಂಗಳ ಇರುತ್ತವೆ. ಈಗ ಇವು ಕುಗ್ಗಿ, ಕಡೆಗೆ

ಪೂರ್ಣವಾಗಿ ಮಾಯವಾಗಿದ್ದರೆ ಹೊಸಕಾಲದಲ್ಲಿ ಉದ್ದೇಶ ಮುಳುಗಿ ಒಣ ಆಚಾರ ಉಳಿದಿದೆ ಎಂಬುದರ ಗುರುತು ಅದು; ಜನರ ಹೃದಯ, ಮುಚ್ಚುಮರೆಯಿಲ್ಲದ ನಿಷ್ಕಪಟ ಸ್ವಭಾವ ಹೇಗೆ ಮುದುಡಿಕೊಂಡು ಹೋಗುತ್ತಿವೆ ಎಂಬುದರ ಗುರುತು. ಕೀರ್ ಹಾರ್ಡಿ ಹಿಂದುಸ್ಥಾನಕ್ಕೆ ಬಂದಾಗ ಆತನನ್ನು ಒಬ್ಬ ಅಯ್ಯಂಗಾರ್‍ಯರ ಅಡಿಗೆಯ ಮನೆಗೆ ಕರೆದುಕೊಂಡು ಹೋಗಿ ತೋರಿಸಿದರಂತ. ಅಲ್ಲಿ ಕಂಡುಬಂದ ಚೊಕ್ಕಟ, ತನ, ಆ ಥಳಥಳ ಹೊಳೆವ ಹಿತ್ತಾಳೆ ಪಾತ್ರೆಗಳು, ಅಡಿಗೆಯ ಮನೆಯ ನೈರ್ಮಲ್ಯ, ಕುಟುಂಬದ ಭಕ್ತಿಗೆ ಪಾತ್ರವಾದ ದೇವರ ಮಾಡ, ಇಡೀ ಮನೆಯ ಅಚ್ಚುಕಟ್ಟಾದ ದೃಶ್ಯವನ್ನು ನೋಡಿ ಅವನಿಗೆ ಬಹಳ ಸಂತೋಷವಾಯಿತು. ಹೊರಗೆ ಸಿಂಗಾರವಾಗಿ ಚೊಕ್ಕಟವಾಗಿ ಕಾಣುವ ಫರಂಗಿ ಜನರ ಬಂಗಲೆಗಳಲ್ಲಿದ್ದಂತೆ ಅಡಿಗೆಯ ಮನೆಯ ಹಿಂದೆ ಪಕ್ಷಿಗಳ ರೆಕ್ಕೆ, ಮೀನಿನ ಮೂಳೆಗಳ ರಾಶಿಗಳು ಕಾಣಲಿಲ್ಲ. ಅಟ್ಟಿಗಟ್ಟಿದ ರಕ್ತಪಿಂಡದ ಒಟ್ಟಿಲೂ ಕಾಣಲಿಲ್ಲ. ಹೊರಗೆ ಅಂದವಾಗಿದ್ದರೂ ಅಂಗಳದಲ್ಲಿ ಈ ಲಕ್ಷಣಗಳು ತಪ್ಪಿದ್ದಲ್ಲ ಅವರಲ್ಲಿ. ಹಿಂದೂ ಗೃಹಿಣಿಗೆ ಬೆಳಗ್ಗೆ ಎದ್ದಕೂಡಲೇ ಮನೆಯ ಮುಂದೆ, ಒಳಗೆ ಅಂಗಳದಲ್ಲಿ ಇಡೀ ಮನೆಯನ್ನ ಗುಡಿಸಿ. ಧೂಳು ಅಡಗುವಂತೆ ಸಗಣಿ ನೀರು ಚೆಲ್ಲಿ, ಅಂದವಾಗಿ ರಂಗೋಲಿ ಇಟ್ಟು ಅಲಂಕರಿಸುವುದು ಮೊದಲನೆ ಕೆಲಸ. ಹಗಲೂ ರಾತ್ರಿಯೂ ಹಿರಿಯರು ಮಾಡುವ ಪ್ರತಿಯೊಂದು ಕೆಲಸದಲ್ಲಿಯೂ ಮನೆಯ ಹುಡುಗರಿಗೆ ಅಂದ ಚೆಂದ, ಚೊಕ್ಕಟಗಳ ಪಾಠ ಇದ್ದೇ ಇದೆ.

### ಅವಿಭಕ್ತ ಕುಟುಂಬ

ಹಿಂದೂ ಗೃಹದ ರಚನೆ ಅವಿಭಕ್ತ ಕುಟುಂಬಕ್ಕೆ ಅನುಕೂಲವಾಗಿ ನಿರ್ಮಿತವಾಗಿದೆ. ಹೊಸಕಾಲದ ಪರಿಸ್ಥಿತಿಯಿಂದ ನಮ್ಮ ಒಟ್ಟು ಕುಟುಂಬಗಳು ಒಡೆದಹಾಗೆ ಚಚ್ಚೌಕದ ಭವಂತಿಯ ಮನೆ ಬಂಗಲೆಗಳಾಗಿವೆ. ನಿಜವಾಗಿ ನೋಡಿದರೆ ಹಿಂದೂ ಕುಟುಂಬ - ಉತ್ಪತ್ತಿ ವಿನಿಯೋಗ, ಪತ್ತು, ಎಲ್ಲ ರೀತಿಗಳಲ್ಲೂ - ಪರಸ್ಪರ ಸಹಕಾರ

ಸಂಘವಿದ್ದ ಹಾಗೆ. ಹರೆಯಕ್ಕೆ ಬಂದ ಗಂಡಸರೆಲ್ಲ ಕುಟುಂಬದ ಕೆಲಸಗಳನ್ನು ಸಮವಾಗಿಯೇ ಶಕ್ತಿಗನುಸರಿಸಿಯೋ ಹಂಚಿಕೊಳ್ಳುತ್ತಾರೆ. ಒಬ್ಬ ದನಗಳನ್ನು ನೋಡಿಕೊಂಡರೆ ಇನ್ನೊಬ್ಬ ಹೊಲ ಮಾಡುತ್ತಾನೆ; ಮೂರನೆಯವನು ಮನೆಯ ಯೋಗಕ್ಷೇಮವನ್ನು ವಹಿಸಿಕೊಂಡರೆ ನಾಲ್ಕನೆಯವನು ಹಣಕಾಸಿನ ವ್ಯವಹಾರವನ್ನು - ಈಚೆಗೆ ಕೋರ್ಟು ಕಚೇರಿಗಳ ಕೆಲಸವನ್ನು - ನೋಡಿಕೊಳ್ಳುತ್ತಾನೆ. ಯಾರೂ ಯಾರಿಗೂ ಮೋಸ ಮಾಡರು. ಪರಸ್ಪರವಾಗಿ ಎಲ್ಲರಿಗೂ ಬಹಳ ವಿಶ್ವಾಸ, ನಂಬಿಗೆ. ದುರದೃಷ್ಟವಶದಿಂದ ಈ ಸಹಕಾರ ಮಂಡಲಿ ಕುಸಿದು ಬಿದ್ದಿವೆ. ಸಹಕಾರದ ಗಂಧವೇ ಇಲ್ಲದ ಈ ಇಂಗ್ಲೀಷು ವಿದ್ಯೆ ಕಲಿತ ಅಣ್ಣ ತಮ್ಮಂದಿರ ಅಸಹಕಾರವೇ ಇದನ್ನು ಮುರಿಯುತ್ತಿವೆ. ವೈದ್ಯನೋ ವಕೀಲನೋ ಆದವನು ತನ್ನ ಕಸಬಿನಲ್ಲಿ ಹಣ ಸಂಪಾದಿಸಿ, ಅದನ್ನೆಲ್ಲ ಕೂಡಿಸಿ ಮುಚ್ಚಿಟ್ಟು, ಮೇಲೆ ತಂದೆಯ ಆಸ್ತಿಯಲ್ಲಿ ತನಗೂ ಪಾಲು ಬರಬೇಕೆಂದು ಜಗಳವಾಡುತ್ತಾನೆ. ಹಿರಿಯ ಅಣ್ಣಂದಿರು ಹಗಲೆಲ್ಲ ರಟ್ಟೆ ಮುರಿಯುವ ಹಾಗೆ ದುಡಿದು ತಾನು ಗಳಿಸಿದುದನ್ನು, ತನಗೂ ತನ್ನ ಪಟ್ಟಣದ ಹೆಣ್ಣಿಗೂ ಪ್ರತ್ಯೇಕವಾಗಿರಿಸಿಕೊಳ್ಳುವ ತಮ್ಮನಿಗೆ ಹಂಚಿಕೊಡಬೇಕು. ಹೆಂಗಸರ ಮಟ್ಟಿಗೆ ಸಹಕಾರ ಜೀವನ ಇನ್ನೂ ಬದುಕಿದೆ. ಆ ಧ್ಯೇಯ ಸಜೀವವಾಗಿದೆ. ಈಗಲೂ ತಾಯಿಯಾದವಳ ಮಹಾ ಧ್ಯೇಯ ಮಕ್ಕಳ ಆರೈಕೆಮಾಡುವುದು, ಮನೆಗೆಲಸ ನಡಸುವುದು, ಅಡಿಗೆ ಮಾಡುವುದು, ಇಷ್ಟೇ. ವಿದ್ಯಾವಂತನಾದ ತಮ್ಮನೂ ಅವನ ಹೆಂಡತಿಯೂ ಬೇರೆಯಾಗಿದ್ದುಕೊಂಡು ಉಳಿದ ಅಣ್ಣಂದಿರ ಸಂಬಂಧವನ್ನೇ ತಪ್ಪಿಸುತ್ತಾನೆ. ಆಸ್ತಿಯ ವಿಭಾಗಕ್ಕಾಗಿ ಅವರನ್ನು ಕಚೇರಿಗೆ ಎಳೆದಾಗ ಬರುವ ಸಂಬಂಧವೇ ಸಂಬಂಧ. ಗ್ರಾಮಜೀವನದ ಹಿಂದಿನ ಆದರ್ಶಗಳೆಲ್ಲ ಕಣ್ಮರೆಯಾಗಿವೆ. ಹಳ್ಳಿಗಳಲ್ಲಿ ಒಂದು ಮದುವೆಯಾದರೆ ಊರಿನವರೆಲ್ಲ ತುಪ್ಪ, ನೂಲುಗಳನ್ನು ಮದುವೆಮನೆಗೆ ಒದಗಿಸುತ್ತಿದ್ದರು. ಮುಂದೆ ಮತ್ತೊಬ್ಬರ ಮನೆಯಲ್ಲಿ ಮದುವೆ ನಡೆದಾಗ ಇವರು ಆದಷ್ಟು ಮಟ್ಟಿಗೆ ತಮಗೆ ದೊರೆತ ಸಹಾಯವನ್ನು ಹಿಂದಿರುಗಿಸುತ್ತಿದ್ದರು.

ಅದೆಲ್ಲ ಈಗ ಗತವೈಭವವಾಗಿದೆ. ನಮ್ಮ ಬಂಧುಗಳು ಹೇಗಿದಾರೋ, ಅವರ ಕಷ್ಟಸುಖವೇನೋ ನಮಗೆ ಗೊತ್ತಿಲ್ಲ. ನಮ್ಮ ನೆರೆಹೊರೆಯಲ್ಲಿ ಯಾರು ಇದಾರೆಯೋ ನಮಗೆ ಬೇಕಿಲ್ಲ. ಸಮಷ್ಟಿಜೀವನದ ತತ್ವ ಕರಗಿ ಹೋಗಿ ವೈಯಕ್ತಿಕ ದೃಷ್ಟಿ ಬಲಿತಿವೆ. ಇಡೀ ಕುಟುಂಬಕ್ಕಿಂತಲೂ ಬಿಡಿ ಸಂಸಾರಗಳೇ ಹೆಚ್ಚಾಗಿವೆ. ಹಕ್ಕುಗಳ ಬುದ್ಧಿ ಹುಟ್ಟಿ ಕರ್ತವ್ಯಗಳ ಜ್ಞಾನ ಲೋಪವಾಗಿದೆ. ವಿಲಾಯತಿಯಲ್ಲಿ ಹೇಳುವುದುಂಟು -- ಇಂಗ್ಲಿಷರವನ ಮನೆ ಎಂದರೆ ಒಂದು ದುರ್ಗ. ಅಂದರೆ ಪ್ರತಿಯೊಬ್ಬನ ಮನೆಯೂ ಅವನವನ ಹಕ್ಕು ಬಾಧ್ಯತೆಗಳ ಚಕ್ರವ್ಯೂಹ. ಇವಕ್ಕೆ ಏನೂ ತೊಂದರೆ ಬಾರದಂತೆ ಸಮಾಜ ನೋಡಿಕೊಳ್ಳುತ್ತದೆ. ಈ ವೈಯಕ್ತಿಕ ಜೀವನದ ಭಾವನೆ ಹಿಂದುಸ್ಥಾನದ ವಿದ್ಯಾವಂತರಲ್ಲಿ ವ್ಯಾಪಿಸಿ, ಅತಿಥಿ ಭವನಗಳಾಗಿ, ಬಡವರ ಸತ್ರಗಳಾಗಿ, ಅನಾಥರ ದಿಕ್ಕಾಗಿ ಇದ್ದ ನಮ್ಮ ಗೃಹಸಂಸ್ಥೆಯನ್ನು ಅಭೇದ್ಯವಾದ ದುರ್ಗಗಳನ್ನಾಗಿ ಮಾಡಿದೆ.

## ಮದುವೆಯ ಗುರಿ

ಹಿಂದೂ ಕುಟುಂಬದಲ್ಲಿ ಪ್ರಧಾನವಾಗಿ ಕಾಣುವ ಲಕ್ಷಣ ಕುಟುಂಬದ ಜನರಲ್ಲಿ ಇರುವ ಪರಸ್ಪರ ಸೌಹಾರ್ದ, ಪ್ರೀತಿ. ಕುಟುಂಬದಲ್ಲೇ ಅಲ್ಲದೆ ಹೊರಗೆ ಕೂಡ ಹತ್ತಿರದ ನಂಟರೊಳಗೂ ಈ ಅಭಿಮಾನ ಹರಡಿರುತ್ತದೆ. ಹಿಂದೂ ಕುಟುಂಬದ ಗಂಡ ಹೆಂಡತಿಯರು, ತಂದೆ ತಾಯಿಗಳು, ಅಣ್ಣ ತಂಗಿಯರು, ಅತ್ತೆಮಾವಂದಿರು – ಇವರ ವಿಷಯವನ್ನು ಬರೆಯಬೇಕಾದರೆ ಎಲ್ಲರಿಗೂ ಒಂದೊಂದು ಪ್ರಕರಣವೇ ಬೇಕು. ಕುಟುಂಬಕ್ಕೆ ಆಧಾರ ಪ್ರಾಯವಾದ ಈ ವಿವಾಹ ಪದ್ಧತಿಯಲ್ಲಿ ಬಹಿರಂಗವಾಗಿ ಪ್ರಪಂಚವೆಲ್ಲ ನೋಡುವ ಹಾಗೆ ಪ್ರಣಯ ವ್ಯಾಪಾರ ನಡಸುವ ಏರ್ಪಾಡಿಗೆ ಬೆಲೆಯಿಲ್ಲ. ಈ ಸಂಧಾನ ವ್ಯವಹಾರವೇ ಹಿಂದೂ ವಿವಾಹದಲ್ಲಿ ಇಲ್ಲ. ಅಲ್ಪವಾಗಿ ಸಂಧಾನ ಕಂಡು ಬಂದರೆ ಅದು ಮದುಮಗಳ ಮದುಮಗನ ಮನೆತನಗಳ ನಡುವೆ. ಇದರ ತತ್ವ ಒಂದು ಗಿಡದ ರೆಂಬೆಯನ್ನು ಇನ್ನೊಂದು ಗಿಡಕ್ಕೆ ಅಂಟಿ

ಸುವ ತತ್ವ. ಒಂದು ಕುಟುಂಬದ ಹುಡುಗಿಯನ್ನು ಇನ್ನೊಂದು ಕುಟುಂಬಕ್ಕೆ ತಂದು ಅವಕ್ಕೆ ಸೇರಿಸಿಕೊಳ್ಳುವುದು. ಹೀಗೆ ಮಾಡಬೇಕಾದರೆ ಆ ರೆಂಬೆ ಬಲಿಯದೆ ಎಳಸಾಗಿರುವಾಗ ಮಾತ್ರವೇ ಸಾಧ್ಯ. ಗಂಡು ಹೆಣ್ಣನ್ನು ಆರಿಸುವುದು ತಂದೆ ತಾಯಿಗಳ, ಹಿರಿಯರ ಕೆಲಸ. ಎರಡು ಜೀವಿಗಳ ಮೇಳನವಲ್ಲ ಅದು, ಎರಡು ಕುಟುಂಬಗಳ, ವಂಶಗಳ ಮೇಳನ. ಈ ಬಗೆಯಲ್ಲಿ ಸಮಾಜವೆಂದರೆ ಬಾಂಧವ್ಯ ಪ್ರೇಮಗಳಿಂದ ಒಂದಕ್ಕೊಂದು ಹೆಣೆದುಕೊಂಡ ಕುಟುಂಬಗಳ, ಮನೆತನಗಳ ಗುಂಪು ಆಗುತ್ತದೆ. ಈ ಗುಂಪುಗಳಲ್ಲಿ ಸರ್ವಸಮತೆಯಿದ್ದರೂ ಗಂಡು ಹೆಣ್ಣು ಕೊಡು ತೆಗೆದುಕೊಳ್ಳುವುದರಲ್ಲಿಯೂ ಕೆಲಮಟ್ಟಿಗೆ ಊಟ ಉಪಚಾರದಲ್ಲಿಯೂ ಕಟ್ಟುಗಳನ್ನು ಹಾಕಿಕೊಂಡು, ಪ್ರತಿಯೊಂದು ಗುಂಪೂ ತನ್ನ ವ್ಯಕ್ತಿತ್ವವನ್ನೂ ಪರಿಶುದ್ಧತೆಯನ್ನೂ ಕಾಯ್ದುಕೊಳ್ಳುತ್ತದೆ. ದೇಹದಲ್ಲಿ ಇರುವ ರಕ್ತನಾಳಗಳು ಮಾಂಸತಂತುಗಳು, ಮಾಂಸದ ಪೊರೆಗಳಿಂದ ನರಗಳಿಂದ ಒಂದಕ್ಕೊಂದು ಜೋಡಿಸಲ್ಪಟ್ಟು ಎಲ್ಲವೂ ಸೇರಿ ಒಂದೇ ಕೇಂದ್ರಶಕ್ತಿಗೆ, ಒಂದೇ ಇಚ್ಛಾಶಕ್ತಿಗೆ ಅಧೀನವಾಗಿ ನಡೆದುಕೊಳ್ಳುವ ಹಾಗೆ. ತನ್ನ ಪರಿಶುದ್ಧತೆ, ದಾರ್ಢ್ಯ, ಸ್ವಾತಂತ್ರ್ಯಗಳನ್ನು ಹೀಗೆ ಕಟ್ಟುನಿಟ್ಟಾಗಿ ಕಾಪಾಡಿಕೊಂಡರೂ ಹಿಂದೂ ಕುಟುಂಬದಲ್ಲಿ ಮಾರ್ದವ ಆದರಾತಿಥ್ಯಗಳೇನು ಕಡಮೆಯಿಲ್ಲ. ಮುಹಮ್ಮದೀಯ ಭಾಯಿಯಾಗಲಿ ಹೊಲೆಯ ಜೀತದಾಳಾಗಲಿ ಇಬ್ಬರಿಗೂ ಆ ಆತಿಥ್ಯ ಆದರಗಳಿವೆ. ಒಂದೇ ಕೇಂದ್ರದಿಂದ ಎಳೆದ ಹಲವು ವರ್ತುಲಗಳ ಗುಂಪಿದ್ದಂತೆ, ಈ ಸಂಸಾರ. ಪ್ರತಿಯೊಂದು ವರ್ತುಲಕ್ಕೂ ಕೇಂದ್ರದಿಂದ ಪ್ರೀತಿ ಅಭಿಮಾನಗಳು ಹರಿಯುತ್ತವೆ. ಆದ್ದರಿಂದ ಹಿಂದೂ ವಿವಾಹದ ಅಂತರಾರ್ಥ ತಿಳಿಯಬೇಕಾದರೆ ಅದೊಂದು ಧರ್ಮಬಂಧನ, ವ್ಯವಹಾರದ ಕರಾರಲ್ಲ, ವ್ಯಾಮೋಹದ ವಿಷಯವೂ ಅಲ್ಲ ಎಂಬುದನ್ನು ಗ್ರಹಿಸಬೇಕು. ಪ್ರೇಮದ ಗುರಿಯಾಗಲಿ, ಪ್ರಥಮ ದರ್ಶನದ ಪ್ರೀತಿಯಾಗಲಿ, ಪ್ರಯತ್ನಪೂರ್ವಕವಾಗಿ ಕೃಷಿಮಾಡಿ ಬೆಳೆಸಿದ ಪ್ರಣಯವಾಗಲಿ ನಾವರಿಯದವಲ್ಲ. ವಿಲಾಯತಿಯಲ್ಲಿ ಇವಕ್ಕೇ ಮದುವೆಯ ಸರ್ವಾಧಾರಗಳೆನ್ನುತ್ತಾರೆ.

ಪಕ್ಷಪಾತವಿಲ್ಲದೆ ನೋಡುವವರಿಗೆ ವಿಲಾಯತಿಯಲ್ಲೂ ಅಷ್ಟೆ, ಇಲ್ಲೂ ಅಷ್ಟೆ; ಮದುವೆ ಸಫಲವೂ ಹೌದು, ವಿಫಲವೂ ನಿಜ. ಇನ್ನು 'ನೂರಕ್ಕೆ ಇಷ್ಟರ' ಲೆಕ್ಕಗಳೇ ನಮಗೆ ಪ್ರಮಾಣವಾದರೆ ಆ ಪದ್ಧತಿಗೆ ಸಿಕ್ಕ ಗೌರವ ನಮ್ಮದಕ್ಕೂ ಸಿಗುತ್ತದೆ. ಮದುವೆ ವ್ಯವಹಾರದ ಸಂವಿಧಾನ ಎಂದರೆ ಹಿಂದೂ ವಿವಾಹಕ್ಕೇನೂ ಕುಂದಕವಿಲ್ಲ. ಪ್ರಣಯ ಪ್ರಕರಣ ಎಂದರೆ– ದಾರಿಯಲ್ಲಿ ಬರುವಾಗ ಆಡಿದ ಜಗಳಕ್ಕಾಗಿ ರೈಲು ನಿಂತಲ್ಲಿ, ನಿಲುದಾಣದಲ್ಲೇ ವಿವಾಹ ವಿಚ್ಛೇದದ ಕಚೇರಿಗೆ ಹೋಗುವ ಅಮೆರಿಕದ ರೂಢಿ; ಈಚೆಗೆ ಆ ದೇಶದಲ್ಲಿ ಬಳಕೆಗೆ ಬಂದಿರುವ ಒಂದು ವರುಷ ಎರಡು ವರುಷ ಸಂಸಾರ ಹೂಡಿ ನೋಡುವ ಪರೀಕ್ಷಾ ವಿವಾಹ; ಸೋವಿಯೆಟ್ ರಷ್ಯಾದಲ್ಲಿ ವಿವಾಹ ಸಂಸ್ಥೆಗೇ ಬಂದಿರುವ ವಿನಾಶ; ಮದುವೆಯಾದ ಆರು ತಿಂಗಳೊಳಗೆ ಮಗು ಹುಟ್ಟಿದರೆ ಅದು ಸರಿಯಾದ ಸಂತಾನವೆಂದು ಫ್ರಾನ್ಸ್ ದೇಶದಲ್ಲಿ ಮಾಡಿರುವ ಶಾಸನ; ಯಾವ ಜಾತಿಯವನೇ ಆಗಲಿ ಯಾವ ಕುಲದವನೇ ಆಗಲಿ ತಾನು ಕೆಡಿಸಿದ ಹೆಣ್ಣನ್ನು ಮದುವೆಯಾಗಲೇಬೇಕೆಂದು ಇಂಗ್ಲೆಂಡಿನಲ್ಲಿ ಮಾಡಿರುವ ಶಾಸನ. ವಿಲಾಯತಿಯ ಪದ್ಧತಿ ಒಳ್ಳೆಯದು ಎಂದು ಅದಕ್ಕೆ ಒಪ್ಪಿಗೆಕೊಡುವ ಮುಂಚೆ ಇವನ್ನೆಲ್ಲ ಆಲೋಚಿಸಿಕೊಳ್ಳಬೇಕು. ನೀತಿಯೋ ಪ್ರೀತಿಯೋ ಎಂಬ ಸಂದೇಹ ಬಂದು ಇವೆರಡರಲ್ಲಿ ಒಂದನ್ನು ಆಯ್ದುಕೊಳ್ಳಬೇಕಾಗಿದ್ದರೆ ಪ್ರೀತಿಯನ್ನು ಬದಿಗೆ ಸರಿಸಿ ನೀತಿಯನ್ನೇ ಆಯ್ದುಕೊಂಡುದಕ್ಕಾಗಿ ನಾವು ನಾಚಬೇಕಾಗಿಲ್ಲ. ಸಾಧಾರಣ ಜೀವಕ್ಕೆ, ಹೆಣ್ಣಿಗಾಗಲಿ ಗಂಡಿಗಾಗಲಿ, ಮದುವೆಯೇ ಉತ್ತಮವೆಂದು ಇಂಗ್ಲಿಷು ಕವಿ ಗೋಲ್ಡ್‌ಸ್ಮಿತ್ ಹೇಳಿದಾನೆ. ಹಾಗಲ್ಲದೆ ಪ್ರತಿಯೊಬ್ಬನೂ ತನ್ನ ಪಾಡಿಗೆ ತಾನು, ಮದುವೆಯಾಗದೆ ಒಂಟಿಯಾಗಿದ್ದು ಸಮಾಜವನ್ನು ನಿಂದಿಸುವ ಅಧಿಕಾರ ಮಾತ್ರ ತನಗಿರಲಿ ಎಂಬದು ಸರಿಯಲ್ಲ. ಈ ಮಾತು ನಮಗೂ ಸಮ್ಮತವಾಗಿಯೆ ಇದೆ. ಈ ಅಭಿಪ್ರಾಯವನ್ನು ಒಪ್ಪಿಕೊಂಡರೆ ತಂದೆ ತಾಯಿಗಳೇ ಮದುವೆ ನಿಶ್ಚಯಿಸಬೇಕೆಂಬುದು ತಾನಾಗಿಯೇ ಸಿದ್ಧವಾಗುತ್ತದೆ. ಅಂದರೆ ಬಾಲ್ಯವಿವಾಹವೂ ಅದರಲ್ಲಿ ಬಂದ ಹಾಗೆಯೆ. ಇಲ್ಲಿ ನಾನು ಯಾವು

ದನ್ನೂ ಸಮರ್ಥಿಸುತ್ತಿಲ್ಲ. ಹೊಸಕಾಲದಲ್ಲಿ ವ್ಯತ್ಯಾಸವು ಅನಿವಾರ್ಯ ವಿರಬಹುದು. ಸುಧಾರಕರೇನೊ ಸಮಾಜದಲ್ಲಿ ಹೊಸ ಚೇತನವನ್ನು ತುಂಬಲು ಬಹಳವಾಗಿ ಹೆಣಗುತ್ತಿದಾರೆ. ಅವರ ಕೃಷಿ ಸಫಲ ವಾಗಲಿ. ಆದರೆ ಹಳೆಯ ಸಂಸ್ಥೆಗಳನ್ನು ಅರ್ಥ ಮಾಡಿಕೊಳ್ಳಬೇಕು. ಹೊಸದಾಗಿ ವಿವರಿಸಬೇಕು. ಅಗತ್ಯವಿದ್ದರೆ ಮತ್ತೆ ಕಟ್ಟಬೇಕು. ಬಾಲ್ಯವಿವಾಹವಾದರೂ ಹಿಂದುಸ್ಥಾನದಲ್ಲಿ ಕೇವಲ ನೇಕಡಾ ಮೂರ ರಷ್ಟು ಜನಸಂಖೆಯುಳ್ಳ ಒಂದು ಜಾತಿಯಲ್ಲಿ ಮಾತ್ರವೇ ಆಚರಣೆ ಯಲ್ಲಿದೆ. ಆ ಜಾತಿಯಲ್ಲಿಯೂ ಕೆಲವು ಪ್ರಾಂತಗಳಲ್ಲಿ ಆ ರೂಢಿ ಯಿಲ್ಲ.

### ಗಾಢವಾದ ಕುಟುಂಬ ಪ್ರೇಮ

ಕುಟುಂಬದ ಬಂಧನಗಳಿಗೂ ವಿಶ್ವಾಸಕ್ಕೂ ಮದುವೆಯೇ ಆಧಾ ರವಾದ್ದರಿಂದ ಮದುವೆಯ ಬಗ್ಗೆ ಇಷ್ಟು ಹೇಳಬೇಕಾಯಿತು. ವಿಶ್ವಾಸ ಅಭಿಮಾನಗಳ ಮಾತೇ ತೆಗೆದುಕೊಳ್ಳೋಣ. ಮದುವೆಯಾದ ಕೂಡಲೆ ಮದುವೆಯಾದ ಮಗನನ್ನು ಹೊಸ ಸಂಸಾರ ಹೂಡೆಂದು ಮನೆಯಿಂದ ಹೊರಗೆ ಅಟ್ಟುವ ರೂಢಿ ನಮ್ಮಲ್ಲಿಲ್ಲ. ಮೊದಲಿನಂತೆಯೆ ಮನೆಯ ಮಗನಾಗಿ ಅವನು ಉಳಿಯುವುದಲ್ಲದೆ ಅವನ ಹೆಂಡತಿ ಹೊಸದಾಗಿ ಬಂದ ಮಗಳಂತೆ ಆಗುತ್ತಾಳೆ. ಆ ಸಂಬಂಧಕ್ಕೆ ಬೇಕಾದ ಎಲ್ಲ ಆದರವೂ ಅವಳಿಗೆ ತೋರಿಸಲ್ಪಡುತ್ತದೆ. ಅತ್ತೆ ಸೊಸೆಯರ ನಡುವೆ ಭಿನ್ನಾಭಿಪ್ರಾಯಗಳು ಹುಟ್ಟುತ್ತವೆ, ನಿಜ. ಆದರೆ ಅವು ಮಗನ ಪರಿಚರ್ಯೆಗಾಗಿ ತಾಯಿ ಹೆಂಡತಿಯರಲ್ಲಿ ಹುಟ್ಟುವ ಸ್ಪರ್ಧೆ, ಅಸೂಯೆಯ ಪರಿಣಾಮ. ತಾನು ಹೊತ್ತು ಹೆತ್ತು, ಸಾಕಿ ಸಲಹಿ, ವಿದ್ಯೆ ಹೇಳಿಸಿ, ಮದುವೆ ಮಾಡಿಸಿ, ಮನುಷ್ಯನಾಗಿ ಮಾಡಿದ ತನ್ನ ಮಗ ತನ್ನನ್ನು ತೊರೆದು, ತನ್ನ ಸಹವಾಸವನ್ನು ಬಯಸದೆ, ತನ್ನನ್ನು ಯಾವ ವಿಚಾರವೂ ಕೇಳದೆ, ಹೊಸದಾಗಿ ಬಂದ ತನ್ನ ರಾಣಿಯ ಬಲೆಯಲ್ಲಿ ಸಿಕ್ಕಿ ಬಿದ್ದಿದಾನಲ್ಲ ಎಂದು ಆಕೆಗೆ ಕುದಿ. ತನ್ನ ಮಗನಿಗಾಗಿ ಮದು ವೆಗೆ ಮುಂಚೆ ಬಹುಕಾಲ ನಿರೀಕ್ಷಿಸಿದ ಹುಡುಗಿ, ಯಾರಿಗಾಗಿ ತಾನು

ಅವರ ಮನೆಯವರೊಡನೆ ಸಂಧಾನ ಬೆಳೆಸಬೇಕಾಯಿತೋ, ತನ್ನ ಹೆಣ್ಣುಮಕ್ಕಳು ಅತ್ತೆಯರ ಮನೆಗೆ ಹೋಗಲು ಯಾರು ತನ್ನ ಮಗಳ ಹಾಗೆಯೇ ಇದ್ದಳೋ, ಯಾರು ತನಗೆ ಮುದಿತನವಲ್ಲಿ ಆಸರೆ ಎಂದು ನಂಬಿದ್ದಳೋ ಅಂಥ ಹುಡುಗಿ ಈಗ ತನಗೇ ಪ್ರತಿಸ್ಪರ್ಧಿ, ತನ್ನ ಮಗನ ಹೃದಯವನ್ನು ಕದ್ದ ಹಾಗೆ. ನಾನು ಈ ಚಿತ್ರವನ್ನು ಬಣ್ಣ ಬಣ್ಣ ವಾಗಿಯೇ ವರ್ಣಿಸಿದ್ದೇನೆ. ಆದರೆ ಈ ವಿಮರ್ಶೆಯಲ್ಲಿ ಅಸತ್ಯವಿಲ್ಲ. ಇದಿರಲಿ. ಹೊಸಕಾಲದ ಸನ್ನಿವೇಶಗಳು ಹೇಗೆ ಹಿಂದೂ ಕುಟುಂಬ ಬಂಧನಗಳನ್ನು ಹರಿದು ಹಾಕಿವೆಯೋ ನೋಡೋಣ.

ನಮ್ಮ ಯುವಕನು ಓದು ಮುಗಿಸಿ ಮನೆಗೆ ಬಂದಾಗ ತನ್ನ ಊರು ಅವನಿಗೆ ಒಂದು ವಿಚಿತ್ರ ಸ್ಥಳವಾಗಿಬಿಡುತ್ತದೆ. ಪಟ್ಟಣ ವಾಸದ, ಅದರಲ್ಲೂ ಹಾಸ್ಟೆಲಿನಲ್ಲಿ ಇರುವುದರ ದುಷ್ಪರಿಣಾಮ ಇದು. ಅಣ್ಣ ತಂಗಿಯರ ಸಹವಾಸವೇ ಬೇಡವಾಗುತ್ತದೆ. ಹಳ್ಳಿಯ ಬಾಳಿನಲ್ಲಿ ಪಳಗಿದ ಅಣ್ಣನ ಜೀವಕ್ಕೂ ಇವನಿಗೂ ತಾಳೆ ಬೀಳುವುದಿಲ್ಲ. ಮದುವೆಯಾಗಿ ಗಂಡನ ಮನೆಗೆ ಹೋದ ತನ್ನ ತಂಗಿಯನ್ನು ನೋಡಿ ಹಲವು ವರ್ಷಗಳಾಗಿರಬಹುದು. ಅಳಿಯಂದಿರನ್ನಂತೂ ನೋಡಿಯೇ ಇಲ್ಲ. ತನ್ನ ಅಣ್ಣ ತಂಗಿ, ಅಳಿಯ ಸೊಸೆಯರ ಮದುವೆಗೆ ಓದಿನ ಅವಾಂತರದಲ್ಲಿ ಇವನು ಬಂದೇ ಇಲ್ಲ. ಚಿಕ್ಕಪ್ಪ ತೀರಿದ ಮೇಲೆ ಚಿಕ್ಕಮ್ಮನನ್ನೂ, ಮಾವನ ಮರಣದ ತರುವಾಯ ಅತ್ತೆಯನ್ನೂ ನೋಡಲೇ ಇಲ್ಲ. ಚಿಕ್ಕಪ್ಪ ಚಿಕ್ಕಮ್ಮ, ಸೋದರ ಮಾವ ಸೋದರತ್ತೆಗಳಿಗೆ ಎಷ್ಟು ಜನ ಮಕ್ಕಳೋ ಗೊತ್ತಿಲ್ಲ. ಅವರಿಗೆ ಮದುವೆಯಾಗಿದೆಯೋ ಇಲ್ಲವೋ, ಎಲ್ಲೆಲ್ಲಿದಾರೋ, ಹೇಗಿದಾರೋ ಏನೂ ತಿಳಿಯದು. ಕಾಲೇಜು ವಿದ್ಯೆ ಮುಗಿದ ಮೇಲೆ ಈ ಸಂಬಂಧಗಳನ್ನೆಲ್ಲ ಹೊಸದಾಗಿ ಅವನು ಹುಡುಕಬೇಕು. ಆಗ ಒಳಗೇ ಅಡಗಿದ್ದ ಅವನ ಪ್ರೀತಿ ವಿಶ್ವಾಸಗಳೆಲ್ಲ ಹೊರಹೊಮ್ಮಿ ಬರುತ್ತವೆ. ಸ್ವಲ್ಪ ಕಾಲದಲ್ಲೇ ಆ ಪ್ರೇಮ ಜ್ಯೋತಿಯಂತೆ ದಿವ್ಯವಾಗಿ ಬೆಳಗುತ್ತದೆ. ತನಗೇ ಒಂದು ಮಗು ಆಗುವವರೆಗೆ ಅಣ್ಣನ ಮಗ, ತಂಗಿಯ ಮಗಳು, ಅವನ ಮಮತೆಗೆ ಪಾತ್ರರಾಗುತ್ತಾರೆ. ಹಿಂದೂ ಕುಟುಂಬದಲ್ಲಿ ಮೊಮ್ಮಕ್ಕಳು

ತಾಯಿ ತಂದೆಯರ ಕಂಕುಳೊಳಗೆ ಬೆಳೆಯುವಷ್ಟೇ ಸಹಜವಾಗಿ 'ಅಜ್ಜ ಅಜ್ಜಿಯರ ತೊಡೆಯ ಮೇಲೆ ಬೆಳೆಯುತ್ತವೆ. ಹೀಗೆ ದಿನೇ ದಿನೇ ಅರಳುವ ಇವನ ಪ್ರೀತಿ ವಿಶ್ವಾಸ, ಕುಟುಂಬ ಭಾವನೆಯನ್ನು ಹೆಚ್ಚಾಗಿ ವರ್ಣಿಸಬೇಕಾಗಿಲ್ಲ. ಒಂದೇ ಪ್ರಶ್ನೆ ಕೇಳಿಯೇನು: ಮನೆಯವರೇ ಅಲ್ಲದೆ ಇಬ್ಬರು ಅಳಿಯಂದಿರು, ಅಣ್ಣ ತಮ್ಮಂದಿರ ಮಗ, ಬಳಗವೇ ಅಲ್ಲದೆ ಕುಲದವರು ಮಾತ್ರ ಆದ ನಾಲ್ವರು ಹುಡುಗರು ಇಲ್ಲದ ಹಿಂದೂ ಕುಟುಂಬವೂ ಉಂಟೆ?' ನಮ್ಮ ತರುಣರು ಬೆಳೆದು ಗೃಹಸ್ಥರಾಗಿ ಬಾಳುವೆ ಮಾಡುವಾಗ ಈ ಗುಟ್ಟನ್ನು ಲಕ್ಷ್ಯದಲ್ಲಿಟ್ಟುಕೊಳ್ಳಲಿ.

**ಹೆಣ್ಣಿನ ಸ್ಥಾನಮಾನ**

ಇದೆಲ್ಲ ಮಾತಿನಿಂದ ಹಿಂದೂ ಕುಟುಂಬದಲ್ಲಿ ಹೆಣ್ಣಿನ ಸ್ಥಾನ ಮಾನಗಳೇನು ಎಂಬ ವಿಷಯ ಹೊರಡುತ್ತದೆ. ಹಿಂದೂ ಸಮಾಜದಲ್ಲಿ ಹೆಂಗಸು ಎಂದರೆ ಒಂದು ಸಾಮಾನು, ಕಃಪದಾರ್ಥ; ಅವಳಿಗೆ ಒಂದು ಸ್ಥಾನವೂ ಇಲ್ಲ, ಮಾನವೂ ಇಲ್ಲ ಎಂದು ಹೇಳುವುದನ್ನು ಕೇಳಿ ಕೇಳಿ ನಮ್ಮ ಕಿವಿ ಕಿವುಡಾಗಿ ಹೋಗಿದೆ. ಆದರೆ ಇದಕ್ಕಿಂತ ವಿಪರೀತ ಸಿದ್ಧಾಂತವಾಗಲಿ ಅಸತ್ಯವಾಗಲಿ ಮತ್ತೊಂದಿಲ್ಲ. ಹೆಣ್ಣನ್ನು ತವರು ಮನೆಯಿಂದ ಗಂಡನ ಮನೆಗೆ ಕಳಿಸುವುದು, ಕರೆದುತರುವುದು ಒಂದು ಸಾಮಾನನ್ನು ಕೊಟ್ಟಂತೆ ತಂದಂತೆ ಎಂದರೆ, ಯಾವ ದೇಶದಲ್ಲಿ ಈ ರೂಢಿಯಿಲ್ಲ? ಎಲ್ಲ ದೇಶಗಳೂ ಈ ಪಾಪವನ್ನು ಕಟ್ಟಿ ಕೊಂಡಿವೆ; ಎಲ್ಲರೂ ಇಂಥ ಮೂಟೆಗಳನ್ನು ಕಳಿಸುತ್ತಾರೆ, ತೆಗೆದು ಕೊಳ್ಳುತ್ತಾರೆ. ಆದರೆ ಬೇರೆ ನಾಗರಿಕ ದೇಶಗಳಲ್ಲಿ ಇಲ್ಲದ ರೂಢಿಗಳು ಹಿಂದುಸ್ಥಾನದಲ್ಲಿ ಕಾಣುತ್ತವೆ. ಕೇರಳಪ್ರಾಂತದ ಕೆಲವು ಬ್ರಾಹ್ಮಣೇತರ ಜಾತಿಗಳಲ್ಲಿ ಹೆಂಡತಿ ಗಂಡನ ಮನೆಗೆ ಬರುವುದಿಲ್ಲ. ಗಂಡನೇ ಹೆಂಡತಿಯ ಮನೆಗೆ ಹೋಗುತ್ತಾನೆ. ಆಂಧ್ರದೇಶದ ಕಮ್ಮ ಜನರಲ್ಲಿ ಹುಡುಗಿಗೆ ಇಬ್ಬರೋ ಮೂವರೋ ಮಕ್ಕಳು ಆಗುವವರೆಗೆ ತಾಯ ಮನೆಯಲ್ಲೇ ಇರುತ್ತಾಳೆ. ಅಷ್ಟರ ತನಕ ಗಂಡನೇ ಬಂದು ಹೋಗು ತ್ತಿರುತ್ತಾನೆ. ಆಮೇಲೆ ಸೊಸೆ ಅತ್ತೆಯ ಮನೆಗೆ ಹೋಗುತ್ತಾಳೆ. ಹೊಸ

ಕುಟುಂಬಕ್ಕೆ ಸೇರಿಕೊಳ್ಳುವ ಮೊದಲು ಆಕೆಗೆ ಒಂದು ಗೌರವ ಬರಲಿ ಎಂಬ ಅಭಿಪ್ರಾಯವಿರಬೇಕು ಇದರಲ್ಲಿ. ಕಸಬಿನಲ್ಲಿ, ನೌಕರಿಯಲ್ಲಿ ಮೊದಲು ಪರೀಕ್ಷಾಕಾಲವಿದ್ದಂತೆ. ಇಲ್ಲಿ ಈ ಪರೀಕ್ಷೆ, ಈ ಕಲಿಕೆ ಅಳಿಯನಿಗೆ. ದಕ್ಷಿಣದಲ್ಲಿ ಮನೆಯ ಅಳಿಯ ಊರೆಲ್ಲರಿಗೂ ಅಳಿಯನೇ. ಮಾಪ್ಪುಳ್ಳೆ, (ಅಳಿಯ) ಬಂದರೇ? ಮಾಪ್ಪುಳ್ಳೆ ಯಾವಾಗ ಹೋಗುತ್ತಾರೆ, ಏನು ಮಾಡುತ್ತಾರೆ; ಇವು ಸ್ನೇಹದಿಂದ ಕೇಳುವ ಪ್ರಶ್ನೆ. ಆಂಧ್ರ ದೇಶದ ಕ್ಷತ್ರಿಯರಲ್ಲಿ ಅಳಿಯನಿಗೇ ಈ ಅಭ್ಯಾಸಯೋಗ. ಅಳಿಯನಾದರೇನು ಮಗಳಾದರೇನು? ವರ್ತಕರು, ವಕೀಲರು, ಪತ್ರಿಕಾಕಾರರು, ರಾಜಕೀಯ ಕೆಲಸಗಾರರು-ಎಲ್ಲರೂ ಈ ರೀತಿಯ ಶಿಕ್ಷಣ ಹೊಂದುತ್ತಿರುವಾಗ ಗೃಹಿಣಿಗೆ ಮಾತ್ರ ಏಕೆ ಬೇಡ? ಭಾರತ ಸೇವಕ ಸಂಘದ ಸದಸ್ಯರು ಮೊದಲು ಐದು ವರ್ಷ ಕಾಲ ತಮ್ಮ ನಾಯಕನಿಗೆ ಅಧೀನರಾಗಿರಬೇಕು. ಅವನ ಅಪ್ಪಣೆಯಿಲ್ಲದೆ ಮಾತು, ಬರೆಹ ಏನೂ ಮಾಡಬಾರದು. ವಕೀಲರಲ್ಲಿ ಕಿರಿಯರಾದವರು ಹಿರಿಯರ ಬಳಿ ವಿಧೇಯರಾಗಿ ದುಡಿಯುವುದಿಲ್ಲವೆ? ಕ್ರಮೇಣ ಕಲೆಕ್ಟರೇ ಆಗಬಹುದಾದ ಗುಮಾಸ್ತೆ ವಿಧೇಯನಾಗಿ, ತನ್ನ ಅಭಿಮಾನವನ್ನು ಒತ್ತಿ ಹಿಡಿದು, ಕಾಲಕ್ಕಾಗಿ ಕಾಯನೇ? ತನ್ನ ಶಕ್ತಿಯನ್ನು ಆ ಕಾಲದಲ್ಲಿ ಬೆಳೆಸಿಕೊಳ್ಳನೆ? ಹಿಂದೂ ಕುಟುಂಬದ ಸೊಸೆಯ ರೀತಿ ಹಾಗೆ. ಕೆಲವು ಕಾಲ ಅವಳನ್ನು ಮಗಳಂತೆ ಮುದ್ದಿಸುತ್ತಾರೆ. ಮುಂದೆ ಅವಳನ್ನು ಕಂಡರೆ ಅಸೂಯೆ. ಕ್ರಮೇಣ ಅವಳೇ ಮನೆಗೆ ಯಜಮಾನಿ. ವ್ರತ ನಿಯಮಗಳ ಮೂಲಕ, ಹಬ್ಬಗಳ ಮೂಲಕ, ಅತ್ತೆಯ ಮನೆಯ ಊರಿನವರಿಗೂ ಗೆಳೆಯರಿಗೂ ಬಳಗಕ್ಕೂ ಇವಳಿಗೂ ಗುರುತು ಬೆಳೆಯುತ್ತದೆ. ಕ್ರಮೇಣ ಮನೆಯ ಆಳುಕಾಳಿನ ಮೇಲೆ ಒಡೆತನ ಮಾಡುತ್ತಾಳೆ. ಹಣಕಾಸಿನಲ್ಲಿ ಕೈಹಾಕುತ್ತಾಳೆ, ದನಕರುಗಳನ್ನು ನೋಡಿಕೊಳ್ಳುತ್ತಾಳೆ, ಸುಗ್ಗಿಯಲ್ಲಿ ಕೊಯ್ಲು ತುಳಿತಗಳಿಗೆ ಏರ್ಪಾಡು ಮಾಡುತ್ತಾಳೆ. ಅವಳ ಮಕ್ಕಳ ಮುಂಜಿ ಮದುವೆಯಾಗಬೇಕಾದಾಗ ಅವಳ ಅಭಿಪ್ರಾಯವೇ ಕಡೆಯದು. ಮನೆಯ

ಯಜಮಾನನೆನಿಸಿಕೊಂಡ ಅವಳ ಗಂಡನೇ ಪಾರುಪತ್ಯಗಾರ. ಹಗಲೆಲ್ಲ ದುಡಿದು, ಉತ್ತು ಬಿತ್ತಿ ಬೆಳೆದು ಸಂಸಾರಕ್ಕೆ ಒದಗಿಸಬೇಕು. ಯಜಮಾನಿಗೂ ಕೈತುಂಬ ಕೆಲಸವಿರುತ್ತದೆ. ಬಿಸಿಲಿನಲ್ಲಿ ಹೋಗದಿದ್ದರೇನು, ಒಲೆಯ ಬೆಂಕಿಗೂ ಅವಳಿಗೂ ಗಂಟಿದೆಯಲ್ಲ. ಅಡಿಗೆಗಾಗಿ ಪದಾರ್ಥಗಳನ್ನು ಅಣಿಮಾಡಿಕೊಳ್ಳುವುದು ಎಂದರೇನೋ ನಮಗೆ ಅರ್ಥವಾಗುವುದಿಲ್ಲ. ಅಕ್ಕಿಯಲ್ಲಿ ಹರಳು ಆರಿಸಿ ಹಸನು ಮಾಡಬೇಕು, ಕಾಯಿಪಲ್ಯದಲ್ಲಿ ಮಣ್ಣು ತೊಳೆಯಬೇಕು, ಸೊಪ್ಪಿನಿಂದ ಹುಳು ತೆಗೆಯಬೇಕು. ಉಪ್ಪಿನಿಂದ ಕೊಳೆ ಕಸ ಆರಿಸುವುದಂತೂ ಕಷ್ಟದ ಕೆಲಸ. ಸಾಸುವೆ ಜೀರಿಗೆ ಮುಂತಾದ ಸಾಂಬಾರ ದಿನಸಿನಿಂದ ಹರಳು ಮಣ್ಣನ್ನು ಆರಿಸುವ ಕೆಲಸದ ಬದಲು ಇಪ್ಪತ್ತು ಮೈಲಿ ಬೇಕಾದರೂ ನಡೆಯಬಹುದು. ನಾಲ್ಕು ಮಣ ಭಾರವಾದರೂ ಎತ್ತಬಹುದು. ಬದುಕಿನಲ್ಲಿ ಗಂಡಿನೊಡನೆ ಹೆಣ್ಣೂ ಸರಿಸಮನಾಗಿ ದುಡಿಯುತ್ತಿದ್ದಾಳೆ. ಈ ದುಡಿತದ ಫಲವಾಗಿ ಬೇಗನೆ ಆಕೆಗೆ ಮನೆಯ ಯಜಮಾನಿಯ ಪಟ್ಟ ಸಿಗುತ್ತದೆ. ಆದರೆ ಆಕೆ ಮಹಿಳಾ ಸಮತ್ವದ ಚಳುವಳಿಗಾರಳಲ್ಲ. ಸಮತ್ವ ಎಂಬ ಜಗಳ. ಐಕಮತ್ಯಕ್ಕೆ ಸಹಾಯಕಾರಿಯಲ್ಲ. ಅದಕ್ಕೆ ಭಂಗ ತರುತ್ತದೆ. ಆದುದರಿಂದಲೇ ಫ್ರೆಂಚರ ಮಹಾಕ್ರಾಂತಿ ಅಸಾರ್ಥಕವಾಗಿ ೧೯ನೆ ಶತಮಾನದ ರಾಷ್ಟ್ರೀಯತೆಗೆ ಜನ್ಮ ಕೊಟ್ಟಿತು. ಪ್ರೇಮದಲ್ಲಿ ಗೌರವಭಾವನೆ ಇರದಿದ್ದರೆ ಅದು ಪ್ರೇಮವಲ್ಲ. ಪರಸ್ಪರ ಗೌರವ ಇರಬೇಕಾದರೆ ಪರಸ್ಪರ ವಿನಯ ಬೇಕು, ವಿಧೇಯತೆ ಬೇಕು. ಈ ಭಾವನೆಯೇ ಹಿಂದೂ ಕುಟುಂಬದ ಯಶಸ್ಸಿನ, ಸಾಫಲ್ಯದ ಮೂಲಕಾರಣ. ಬಾಳುವೆಯನ್ನು ತಪ್ಪಾಗಿ ತಿಳಿದುಕೊಂಡು, ಹೆಂಡತಿಗಿಂತ ತಾನೇ ದೊಡ್ಡವನೆಂಬ ಗರ್ವದಿಂದ ಗಂಡನು ಜವನು ನಡೆದುಕೊಂಡರೆ ಬದುಕನ್ನು ಹದಗೆಡಿಸಿ, ರಾಕ್ಷಸನಾಗಿ, ಸಮಾಜದಲ್ಲಿ ಅಪಕೀರ್ತಿಗೆ ಗುರಿಯಾಗುತ್ತಾನೆ. ಮದುವೆಗೆ ಮುಂಚೆ ಎಲ್ಲವೂ ಹೊಂಬೆಳಕು. ಆದ ಹೊಸದರಲ್ಲಿಯೂ ಅಷ್ಟೆ. ಅಳಿಯನ ಕುರುಡು ಬೆಳಗಾದರೆ ಗೊತ್ತೇ ಆಗಬೇಕು. ಸಂಜೆಯ

ಬಂಗಾರದ ಬಣ್ಣ ಮಧ್ಯಾಸ್ನ ಇರುವುದಿಲ್ಲವೆಂದು ತಿಳಿದುಕೊಳ್ಳಲು ಬಹಳ ಕಾಲ ಹಿಡಿಸುವುದಿಲ್ಲ.

**ರಸ ಭಾವನೆಗಳು**

ಹಿಂದೂಗೃಹವು ಬುದ್ಧಿ ರಸ ಭಾವನೆಗಳಿಗೆ ಪುಟಕೊಡುವ ಕುಲಿಮೆ. ರಸಭಾವನೆಗಳನ್ನು ಬೆಳೆಯಿಸಿ ರಸಜೀವನವನ್ನು ಕಲಿಸುವುದರಲ್ಲಿ ಹಿಂದೂ ಕುಟುಂಬ ಪದ್ಧತಿಯು ತೋರುವ ಜಾಗರೂಕತೆ ವಿಚಕ್ಷಣೆಗಳು ಕಲ್ಪನಾತೀತವಾಗಿವೆ. ಶೈಶವಾವಸ್ಥೆಯಿಂದ ವೃದ್ಧಾಪ್ಯದವರೆಗೆ ಯಾವಾಗಲೂ ರಸಜೀವನದ ಪಾಠ ಸಿಗುತ್ತಲೇ ಇರುತ್ತದೆ. ಪುರಾಣ ಪುಣ್ಯಕಥೆಗಳನ್ನು, ನಾಡ ಕತೆಗಳನ್ನು ಅಜ್ಜಿಯರು ದಿನವೂ ಹೇಳುತ್ತಿರುತ್ತಾರೆ. ಮಕ್ಕಳ ಕಲ್ಪನಾಶಕ್ತಿ ಅದರಿಂದ ಕುಡಿಯೊಡೆಯುತ್ತದೆ. ಹುಡುಗರ ಹೃದಯವನ್ನು ಅರಳಿಸಿ ವಿಸ್ತಾರಗೊಳಿಸುವ ಮೊದಲನೆ ಅನುಭವ ಎಂಥ ಬಡವರ ಮನೆಗಳಲ್ಲಿಯೂ ಕಾಣುವ—ಶ್ರೀಮಂತರ ಮನೆಗಳಿಂದ ಮಾತ್ರ ಮಾಯವಾಗುತ್ತಿರುವ—ಭಿಕ್ಷೆ ನೀಡುವ ದಿನಚರಿ. ಬಡಬಗ್ಗರ ದುರವಸ್ಥೆಯ ಬಗ್ಗೆ ಮಗುವಿಗೆ ಮೊದಲಿನಿಂದಲೂ ಒಂದು ಭಾವನೆ ಮೂಡಿಹೋಗುತ್ತದೆ. ದಯಾಧರ್ಮದ ಮಹಿಮೆಯ ಪದ್ಯವೊಂದನ್ನು ಹೇಳಿ, ಬಡವರಿಗೆ ನೆರವಾಗುವುದೇ ದಯೆ ಎಂದು ಅರ್ಥ ಹೇಳಿದ ತಂದೆ ಒಂದು ದಿನ ತಿರುಕನೊಬ್ಬನನ್ನು ಮನೆ ಬಾಗಿಲಿಂದ ಬರಿಗೈಯಲ್ಲಿ ಕಳಿಸುತ್ತಿರಲು ಅವನ ಮಗು ತಂದೆಯ ಪಂಚೆ ಹಿಡಿದುಕೊಂಡು ಇದೇಯೇ ದಯೆ ಎಂದು ಕೇಳುವ ಕಾಲವೂ ಇತ್ತು. ದಯೆ, ದಾಕ್ಷಿಣ್ಯ, ಔದಾರ್ಯಗಳನ್ನು ಮಗು ಹೀಗೆ ಕಲಿಯುತ್ತಿತ್ತು. ಹಿಂದೂ ಗೃಹದಲ್ಲಿ ಅತಿಥಿಗಳಿಗೆ ಸಲ್ಲುವ ಮರ್ಯಾದೆ ನಡೆಯುವ ಉಪಚಾರ ಅತ್ಯದ್ಭುತವಾದುದು. ಅದಕ್ಕಾಗಿ ಕೆಲವು ವಿವರವಾದ ನಿಯಮಗಳೇ ಇವೆ. ದಿನವೂ ಊಟ ಮಾಡುವ ಮೊದಲು ಮನೆಯ ಯಜಮಾನನು ಹೊರಗೆ ಹೋಗಿ ಯಾರಾದರೂ ಊಟಕ್ಕೆ ಬರಬಹುದಾದವರು ಇದ್ದಾರೆಯೋ ಎಂದು ನೋಡಬೇಕು. ಇವರಲ್ಲಿಯೂ ಎರಡು ವಿಧ. ಕೆಲವರು ಅತಿಥಿಗಳು,

ಕೆಲವರು ಅಭ್ಯಾಗತರು. ಇಬ್ಬರಿಗೂ ಒಂದೇ ವಿಧವಾದ ಸತ್ಕಾರ ನಡೆಯಬೇಕು. ನಾವು ನಮ್ಮ ದಾನಗಳನ್ನು ವ್ಯವಸ್ಥಿತ ರೂಪದಲ್ಲಿ ಕೊಡುವುದಿಲ್ಲವೆಂದು ನಮ್ಮನ್ನು ತೆಗಳಿದಾರೆ. ನಮ್ಮ ಸಂಸ್ಕೃತಿಯೇ ಒಂದು ವ್ಯವಸ್ಥೆಯಲ್ಲ, ಕಟ್ಟಡವಲ್ಲ. ಅದೊಂದು ವಿಕಾಸ, ಬೆಳವಣಿಗೆ. ಅಚ್ಚುಕಟ್ಟಾಗಿ ಕಟ್ಟಿದ ಕೃತ್ರಿಮಕೃತ್ಯವಲ್ಲ, ಪ್ರಕೃತಿ ಸಹಜವಾದುದು. ನಮ್ಮ ದೇಶದಲ್ಲಿ ಪ್ರಕೃತಿ ನೀಡುವ ಪೂರ್ಣ ಸಾರ, ಉಷ್ಣವಲಯದಲ್ಲಿ ಸಹಜವಾದ ವಿರಾಮಜೀವನ, ನಮ್ಮ ಜನಾಂಗದ ಆಧ್ಯಾತ್ಮ ಪ್ರವೃತ್ತಿ ಸಂಪ್ರದಾಯಗಳು – ಎಲ್ಲವೂ ಸೇರಿ ನಮ್ಮ ಅಗತ್ಯಗಳನ್ನೂ ಕರ್ಮವನ್ನೂ ಬಹಳ ಕಡಿಮೆ ಮಾಡಿವೆ. ಪಶ್ಚಿಮದ ಸಮರೋತ್ಸಾಹದ ಸೇನಾರಚನೆಯಾಗಲಿ, ಶಾಂತಿ ಸಂಸ್ಥಾಪನೆಯ ಸನ್ನಾಹವಾದ ಉದ್ಯೋಗ ವ್ಯವಸ್ಥೆಯಾಗಲಿ ನಮಗೆ ಬೇಕಿಲ್ಲ. ಮಾನವ ಜನ್ಮಕ್ಕೆ ಸರಿಯಾದ ರೀತಿಯಲ್ಲಿ ನಮ್ಮ ಬುದ್ಧಿ ಭಾವನೆಗಳನ್ನು ಬೆಳೆಯಿಸಿಕೊಳ್ಳಲು ನಮಗೆ ಯಥೇಷ್ಟವಾಗಿ ಅವಕಾಶಕೊಟ್ಟಿದಕ್ಕಾಗಿ ದೇವರಿಗೆ ನಾವು ಕೃತಜ್ಞರಾಗಿರಬೇಕು.

### ಧಾರ್ಮಿಕ ವಾತಾವರಣ

ಮನುಷ್ಯನಲ್ಲಿ ರಸಭಾವಗಳನ್ನು ಎಚ್ಚರಗೊಳಿಸಿ ಭಗವದಭಿಮುಖವಾಗಿ ಅವನನ್ನು ನಡೆಯಿಸುವುದೇ ಧರ್ಮ. ಎಂದರೆ ಮಗುವಿನ ಮನಸ್ಸಿಗೆ ಧರ್ಮದ ಬಣ್ಣವನ್ನು ಕೊಟ್ಟು ಬೆಳೆಯಿಸುವ ಯೋಗ್ಯ ಶಿಕ್ಷಾಸತ್ರ ಹಿಂದೂ ಗೃಹಕ್ಕಿಂತ ಹೆಚ್ಚಿನದು ಬೇರೊಂದಿಲ್ಲ. ಹುಡುಗರಿಗಾಗಲಿ ಹುಡುಗಿಯರಿಗಾಗಲಿ ಬದುಕಿನಲ್ಲಿ ಧರ್ಮವೇ ಸ್ಫೂರ್ತಿ. ವಿಗ್ರಹವಿರೋಧದ ಹೊಸ ಹುಮ್ಮಸ್ಸಿನಲ್ಲಿ ನಿಮ್ಮ ಮನೆಯ ದೇವರುಗಳನ್ನು ನೀವು ಪೂಜಿಸದೆ ಇರಬಹುದು. ಆದರೆ ಹಿಂದೂ ಕುಟುಂಬಗಳಲ್ಲಿ ಅತಿಶ್ರದ್ಧೆಯಿಂದಲೂ ವಿಧಿಪೂರ್ವಕವಾಗಿಯೂ ಮಾಡುವ ಹಬ್ಬಗಳಿಂದ ಮಕ್ಕಳ ಮನಸ್ಸಿನಲ್ಲಿ ಧರ್ಮಬುದ್ಧಿಯೂ ಭಕ್ತಿಭಾವವೂ ಹುಟ್ಟುವುದು ಮಾತ್ರ ನಿಜ. ಋತುಮಾನದ್ದಿರಲಿ ಐತಿಹಾಸಿಕವಿರಲಿ ಗ್ರಹನಕ್ಷತ್ರಾದಿ ಸಂಬಂಧವಾದದ್ದಿರಲಿ ಹಬ್ಬಗಳಲ್ಲಿ ಪ್ರಕೃತಿ ಪೂಜೆ,

ಹಿರಿಯರ ಸ್ತೋತ್ರ, ಭಗವದವತಾರಗಳ ಆರಾಧನೆ ಮುಖ್ಯ. ನಮ್ಮ ದೇವ ದೇವತೆಯರನ್ನು ರಾಕ್ಷಸರೆಂದು ಅವಹೇಳನೆ ಮಾಡಿ ವರ್ಣಿಸಿದವರಿದ್ದಾರೆ. ಧಾರ್ಮಿಕ ಶಿಲ್ಪ ಹಾಗಿರಲಿ. ನಮ್ಮ ವಿಗ್ರಹಗಳನ್ನು ಕಲಾಮೂರ್ತಿಗಳೆಂದು ಯಾರೂ ಅವನ್ನು ಕೆತ್ತಿಲ್ಲ. ಗುಡಿಯಲ್ಲಿ ಮನೆಯ ಸಲಿಗೆಯ ವಾತಾವರಣವನ್ನು ತರಬೇಕೆಂದು, ವಿಲಾಸಗೃಹದ ವಿಲಾಸಿನಿಯರನ್ನು ಅಲ್ಲಿ ಪ್ರತಿಬಿಂಬಿಸಬೇಕೆಂದು ಗುಡಿಗಳನ್ನು ಕಟ್ಟಿಲ್ಲ. ಅಲ್ಲಿ ಆರಾಧನೆಗೆ ಅವಕಾಶ ಕಲ್ಪಿಸಿ, ಅದಕ್ಕೆ ತಕ್ಕ ವಾತಾವರಣವನ್ನು ರಚಿಸಿದ್ದಾರೆ. ಸ್ತೋತ್ರ ಉಪವಾಸಗಳಿಂದ, ಜಾಗರಣೆ ಜಪಗಳಿಂದ, ಭಜನೆ ಸಂಕೀರ್ತನೆಗಳಿಂದ, ವ್ರತನಿಯಮಗಳಿಂದ, ಉತ್ಸವಾದಿಗಳಿಂದ ಕೂಡಿದ ಆ ಪೂಜಾಕ್ರಮಗಳು ಎಳೆಯ ಮನಸ್ಸೇಕೆ, ಹುಡುಗರು ಯುವಕರು ಎಲ್ಲರ ಮನಸ್ಸಿಗೂ ಒಂದು ಪಾಕವನ್ನು ಕೊಟ್ಟು ವಿಕಸನಗೊಳಿಸಲು ಬಹಳ ಅನುಕೂಲವಾಗಿವೆ.

ಅಣ್ಣತಮ್ಮಂದಿರ ನಡುವೆ ಆಸ್ತಿವಿಭಾಗದಲ್ಲಿ ತೋರಿಬರುವ ನ್ಯಾಯ, ಧರ್ಮ; ಹೆಣ್ಣನ್ನು ಕೋಮಲಾಂತಃಕರಣದಿಂದ ನೋಡಿ ಒಂದು ಕುಟುಂಬದಿಂದ ಮತ್ತೊಂದು ಕುಟುಂಬಕ್ಕೆ ತಂದುಕೊಳ್ಳುವ ಮೃದುವಾದ ಮಮತೆ; ಪ್ರಯತ್ನ ಪೂರ್ವಕವಾಗಿ ಕೃಷಿಮಾಡಿ ಬೆಳೆಸಿದ ಪ್ರೀತಿ ವಿಶ್ವಾಸಗಳು; ಸದಾ ಬೆಳೆಯುವ ಬಂಧು ಸಮೂಹ; ಬಾಲ್ಯದಲ್ಲಿ ರಸಭಾವ ಪ್ರದೀಪನಕ್ಕೆ ಕೊಡುವ ಲಕ್ಷ್ಯ; ಧಾರ್ಮಿಕ ಬುದ್ಧಿಯ ಪ್ರಚೋದನ - ಇವೇ ಹಿಂದೂ ಕುಟುಂಬದ ಕೀರ್ತಿಗೆ, ಆ ಕುಟುಂಬಸಂಸ್ಥೆಯ ದೀರ್ಘಾಯುಷ್ಯಕ್ಕೆ ಕಾರಣ. ನನ್ನ ಮಟ್ಟಿಗೆ ಹಿಂದೂ ಗೃಹವೆಂದರೆ ಒಂದು ಒಳ್ಳೆ ಆರ್ಥಿಕ ಸಂಘಟನೆ, ಮೊಳಕೆಯ ಅವಸ್ಥೆಯಲ್ಲಿರುವ ಸಹಕಾರ ಸಂಘ ಎನಿಸುತ್ತದೆ. ಅದು ಚಲೋ ಮಾದರಿಯ ಆರೋಗ್ಯ ಮಂದಿರ, ಸಾಂಸ್ಕೃತಿಕ ಕೇಂದ್ರ, ಚಿಕ್ಕಪ್ರಮಾಣದ ಧಾರ್ಮಿಕ ಸಂಸ್ಥೆ, ಯೋಗ್ಯವಾದ ದೇವಾಯತನ. ಇಂಥ ವಾತಾವರಣ ಗಂಭೀರವಾದ, ಪವಿತ್ರವಾದ, ಪರಿಶುದ್ಧವಾದ, ಪಾವನಕರವಾದ ವರ್ಚಸ್ಸು ಪ್ರಭಾವಗಳಿಂದ ಹುಡುಗ ಹುಡುಗಿಯರನ್ನು ಬಿಡಿಸಿ ಹೊರ ದೂಡುತ್ತಿರುವುದು ಯೋಗ್ಯವಲ್ಲ. ಶಾಲೆಕಾಲೇಜುಗಳ ಶಿಕ್ಷಣ, ಗೃಹ

ಶಿಕ್ಷಣಕ್ಕೆ ಜೊತೆಯಾಗಿ ಪೂರಕವಾದೀತೇ ವಿನಾ ಗೃಹಶಿಕ್ಷಣದ ಫಲವನ್ನು ಎಂದಿಗೂ ಕೊಡಲಾರದು ಹಿಂದೂ ಕುಟುಂಬಗಳ ಸಂಪ್ರದಾಯ ಶೀಲತೆಯಿಂದಲೇ ನಮ್ಮ ರಾಷ್ಟ್ರೀಯತ್ವ ಇನ್ನೂ ನೆಲೆಯಾಗಿದೆ. ಇಲ್ಲದಿದ್ದರೆ ಪ್ಲಾಸಿ ಕದನಕ್ಕೆ ಮೊದಲೇ ಅದರ ಹುಟ್ಟಡಗಿ ಹೋಗುತ್ತಿತ್ತು. ನಮ್ಮ ಕುಟುಂಬಗಳಲ್ಲಿರುವ ಸಾಮಾಜಿಕ ಲೋಪಗಳನ್ನೂ ಆಂತರಂಗಿಕ ದೋಷಗಳನ್ನೂ ಒಪ್ಪಿಕೊಳ್ಳೋಣ. ದಿನೇ ದಿನೇ ಪರಿವರ್ತನವಾಗುತ್ತಿರುವ ಈ ಕಾಲದಲ್ಲಿ ಕಾಲೋಚಿತವಾದುದಕ್ಕೆ ಗಮನ ಕೊಡದಿರಲು ಸಾಧ್ಯವಿಲ್ಲ. ವಿಧವೆಯರ ಪರಿಸ್ಥಿತಿಗೆ ಆದರ್ಶ ಬುದ್ಧಿಯೇ ಕಾರಣವಾಗಿದ್ದರೂ ಅವರ ದುಃಸ್ಥಿತಿಗೆ ಯಾರ ಮನಸ್ಸಾದರೂ ಕರಗುತ್ತದೆ. ಅವರ ಗೋಳನ್ನು ಕಡಿಮೆಮಾಡಿ ಅವರಿಗೆ ವಿದ್ಯಾಭ್ಯಾಸ, ಅರ್ಥಸ್ವಾತಂತ್ರ್ಯ, ವಿವಾಹಾವಕಾಶಗಳನ್ನು ಉಂಟುಮಾಡಬೇಕು. ಹಾಗೆ ಮಾಡಿದರೆ ಬಾಲ್ಯವಿವಾಹದ ಒಳ್ಳೇ ಚಿತ್ರವು ಈಗಲೂ ಕಾಣಲು ಅನುಕೂಲವಾದೀತು. ಇದರ ಜೊತೆಗೆ ಹೆಂಗಸರಿಗೂ ಆಸ್ತಿಯಲ್ಲಿ ಕೂಡ ಪಾಲು ಸಿಗುವಂತೆ—ನಮ್ಮ ಮುಸ್ಲಿಮ್ ಸೋದರರು ತಮ್ಮ ಹೆಂಗಸರಿಗೆ ಮಾಡಿರುವಷ್ಟಾದರೂ—ಮಾಡಬೇಕು. ಹಿಂದೂ ಸಮಾಜದ ಸಂಸ್ಕರಣವಾಗಲಿ ಪುನರ್ನಿರ್ಮಾಣವಾಗಲಿ ಈ ಲೇಖನದ ಉದ್ದೇಶವಲ್ಲ. ಹಿಂದಿನ ಕಾಲದಲ್ಲಿ ಹಿಂದೂ ಕುಟುಂಬದ ಧ್ಯೇಯಗಳೇನಾಗಿದ್ದವೆಂಬುದನ್ನೂ ಸದ್ಯದ ವಿಪರೀತಕಾಲದ ವಿನಾಶಸಂಭ್ರಮದಲ್ಲಿಯೂ ಕೂಡ ಇನ್ನೂ ಆ ಪುಣ್ಯ ಎಷ್ಟು ಉಳಿದಿದೆಯೆಂಬುದನ್ನೂ ತೋರಿಸುವುದೇ ಉದ್ದೇಶ. ಈ ಲೇಖನಮಾಲೆಯನ್ನು ಓದುವ ಯುವಕರು ಹೆಣ್ಣು ಹೆಣ್ಣೆಂದು ಗಾವಿಲರಂತೆ ಜರಿಯದೆ ಹೆಣ್ಣಿಗೆ ಸರಿಯಾದ ಗೌರವ ತೋರಿಸಿ, ತಂಗಿಯಂತೆ ತಾಯಂತೆ ಸತಿಯಂತೆ, ಆಕೆ ನಿರ್ವಹಿಸುವ ಕರ್ತವ್ಯಗಳನ್ನು ಗಮನಿಸಿ, ಜನಾಂಗದ ಸಂಸ್ಕೃತಿ ರಕ್ಷಕಳಾಗಿ, ರಾಷ್ಟ್ರೀಯ ಕೀರ್ತಿಯ ಸಂಗೋಪನ ತತ್ಪರಳಾಗಿ, ಆಕೆ ಗೈಯುತ್ತಿರುವ ತಪಸ್ಸನ್ನು ಗುರುತಿಸಿ ಆಕೆಯ ಸ್ಥಾನಮಾನವನ್ನು ಅರಿತುಕೊಂಡರೆ ಲೇಖಕನು ಕೃತಾರ್ಥನಾದಂತೆ.

೨

# ಹಿಂದೂ ಗೃಹದಲ್ಲಿ ಕಲೆ

ಹಿಂದೂ ಧರ್ಮ, ಹಿಂದೂ ಗೃಹಗಳು ಧರ್ಮ ಪ್ರಧಾನವಾದವು ಎಂದು ಜನ ಹೇಳುತ್ತಾರೆ. ಈ ಮಾತು ನಿಜವೇ. ಆದರೆ ಹೀಗೆನ್ನುವವರು ಹಿಂದೂಗೃಹದಲ್ಲಿ ಕಲೆಯೇ ಇಲ್ಲ ಎಂದು ಅರ್ಥಮಾಡುವುದು ಸಮಂಜಸವಲ್ಲ, ಸುಳ್ಳು. ಹಿಂದೂಗೃಹವು ಧರ್ಮಪ್ರಧಾನವಿದ್ದಂತೆಯೇ ಕಲಾಪೂರ್ಣವೂ ಆಗಿದೆ. ಧರ್ಮಕ್ಕೂ ಕಲೆಗೂ ವಿರೋಧವುಂಟೇ? ಇಲ್ಲ. ಹಿಂದೂ ಕಲೆಯು ಅಲಂಕಾರವೂ ಹೌದು, ಆರಾಧನಾ ವಿಧಾನವೂ ಹೌದು. ಕಲೆ ಹೇಗೆ ಧರ್ಮದಲ್ಲಿ ಪರಿಪೂರ್ಣತೆಯನ್ನು ಹೊಂದುತ್ತದೆಯೋ ಹಾಗೆಯೆ ಧರ್ಮವೂ ಕೂಡ ತನ್ನ ಸಂಕೇತ ಸೂಚನೆಗಾಗಿ ಕಲೆಯನ್ನು ಆಶ್ರಯಿಸುತ್ತದೆ. ಭಾವ ಪ್ರಕಟನೆಯೇ ಕಲೆ; ರೇಖಾವರ್ಣ ವಿನ್ಯಾಸದಲ್ಲಿ, ಗಾಯನ ವಾದನದಲ್ಲಿ ಚಿತ್ರ ವಾಸ್ತು ಶಿಲ್ಪಗಳಲ್ಲಿ ಭಾವವನ್ನು ಅರಳಿಸುವುದೇ ಕಲೆಯಾದ ಪಕ್ಷದಲ್ಲಿ ಹಿಂದೂಗೃಹದಲ್ಲಿ ಹೆಬ್ಬಾಗಿಲಿಂದ ದನದ ಹಕ್ಕೆಯವರೆಗೆ ಎಲ್ಲವೂ ಕಲಾಪೂರ್ಣವೇ. ಈ ಕಲೆ ವಾಸ್ತವದ ಅಸಹ್ಯವಾದ ಪ್ರತಿಬಿಂಬವೂ ಅಲ್ಲ, ಆದರ್ಶದ ವಿಚಿತ್ರ ಕಲ್ಪನೆಯ ವರ್ಣನೆಯೂ ಅಲ್ಲ. ಪ್ರತ್ಯಕ್ಷವಾದ ಇಂದ್ರಿಯಾನುಭವವನ್ನು ಆತ್ಮದ ಅಂತರ್ದೃಷ್ಟಿಯ ಭಾವಾನುಭಾವಕ್ಕೆ ಪೋಣಿಸಿ, ಆ ಮಟ್ಟಕ್ಕೆ ಅದನ್ನು ಏರಿಸುವ ಕೃಷಿಯಲ್ಲಿ ಅನಿವಾರ್ಯವಾಗಿ ಬರುವ ಕಲಾಸಮುಯ ಸಂಪ್ರದಾಯಗಳನ್ನನುಸರಿಸಿ ನಿರ್ಮಿಸಿದ ಕಲೆ. ಹಿಂದೂ ಗೃಹಗಳು, ಹಿಂದೂ ದೇವಾಲಯಗಳು, ಹಿಂದೂ ವಿಗ್ರಹಗಳು, ಹಿಂದೂ ಶಿಲ್ಪ, ಎಲ್ಲವೂ ಈ ಹಾದಿಯನ್ನು ಹಿಡಿದದ್ದರಿಂದ ಬಾಹ್ಯ ಸೌಂದರ್ಯದ ಚಿತ್ರಣವೇ ಕಲೆ ಎಂದು

ನಂಬಿದ ಪಾಶ್ಚಾತ್ಯರ ಕಣ್ಣಿಗೆ 'ಭೀಕರವಾಗಿ ಅಸಹ್ಯವಾಗಿ' ಕಾಣು ತ್ತವೆ. ಪಾಶ್ಚಾತ್ಯರ ನಾಸ್ತಿಕತೆಯ ಪ್ರಭಾವದಿಂದ ದೇವರ ದಯೆಯ ಮೂಲಕ ನಾವು ಇನ್ನೂ ಸಜೀವವಾಗಿ ಉಳಿದಿದೇವೆ. ನಮ್ಮ ಸಂಸ್ಥೆ ಸಂಪ್ರದಾಯಗಳನ್ನು ಪುನಃ ಅರ್ಥಮಾಡಿಕೊಳುತ್ತಿದೇವೆ.

ಬೊಂಬಾಯಿಯ ಮಹಾಪ್ವಾರಕ್ಕೆ ಬಂದಿಳಿದೊಡನೆ ಪರದೇಶದ ಯಾತ್ರಿಕನ ಕಣ್ಣಿಗೆ ಮೊದಲು ಕಾಣುವ ನೋಟ ಬೊಂಬಾಯಿನ ಬೀದಿಯಲ್ಲಿ ಓಡಾಡುವ ಜನರ ಬಗೆಬಗೆಯ ಬಣ್ಣಗಳ ಮನೋಹರ ವಾದ ಉಡುಪು. ಜಾಟನಾಗಲಿ, ಮಾರ್ವಾಡಿಯಾಗಲಿ, ಹಿಂದುವಿರಲಿ, ಪಾರ್ಸಿಯಿರಲಿ, ತುರುಕನಾಗಲಿ, ಕ್ರಿಸ್ತಾನನಾಗಲಿ, ಪರದಾ ಶಿಕ್ಷೆ ಇಲ್ಲದ ದಕ್ಷಿಣ ಭಾರತ, ಪಶ್ಚಿಮ ಭಾರತಗಳ ಹೆಂಗಸರು ತಮ್ಮ ವೇಷ ವಿನ್ಯಾಸದಲ್ಲಿ, ಮೈ ಬಣ್ಣಕ್ಕೆ ತಕ್ಕ ಸೀರೆ, ಸೀರೆಗೆ ಸರಿಯಾದ ರವಿಕೆ, ಈ ವಿಧಾನಕ್ಕೆ ಹೊಂದುವ ಹೂವು ಒಡವೆ ಧರಿಸುವುದರಲ್ಲಿ ತೋರಿಸುವ ಸೂಕ್ಷ್ಮ ಕೌಶಲ ಅದ್ಭುತವಾದುದು. ಮದುವೆ ದಿನಗಳಲ್ಲಂತೂ ಈ ಕಲೆಗೊಂದು ಪೂರ್ಣಸ್ವರೂಪ ಬರುತ್ತದೆ. ಬಿಳಿಯ ದುಕೂಲದ ನಿರಿಗೆಯ ತೆರೆಗಳ ಸೊಂಪಿಗೆ ನೀಲಿ ಕುಪ್ಪಸವೂ, ಚಾಕೊಲೆಟ್‌ಗೆ ಬಿಳಿ ಯದು, ಮಾಸಲು ಬಾದಾಮಿಗೆ ಕಪ್ಪಿನದೂ, ಹೇಗೆ ಹೊಂದುತ್ತವೆಂಬು ದರ ಪರಿಜ್ಞಾನವನ್ನು ಆಗ ತೋರಿಸುತ್ತಾರೆ. ವಯಸ್ಸಾದವರಿಗೆ ಈ ಬಣ್ಣದ ಕ್ರಮವೆಲ್ಲ ತಲೆಕೆಳಗು. ಸೀರೆಯ ಗೆರೆ ಚೌಕಳಿಗಳು ಉಡು ವವರ ಗಾತ್ರಕ್ಕೆ ತಕ್ಕಂತೆ ಇರಬೇಕು. ಸೀರೆ ಉಡುವ ರೀತಿಯಾದರೂ ಎಷ್ಟು ಸೊಗಸು! ಹಿಂದೂ ಸ್ತ್ರೀಯ ಶರೀರ ಸೌಂದರ್ಯವನ್ನೂ ಅದರ ಸ್ವಾಭಾವಿಕವಾದ ಬಾಗು ಬಳುಕುಗಳ ಸೊಬಗನ್ನೂ ಮರ್ಯಾದೆಗೆ ಲೋಪವಿಲ್ಲದ ಹಾಗೆ, ಹೃದ್ಯವಾಗಿ ಪ್ರಕಟಿಸಲು ಎಷ್ಟು ಅನುಕೂಲ. ಪ್ರವಾಸಿಗಳು ಮಿಷನರಿಗಳು ಬ್ರಿಟಿಷ ಅಧಿಕಾರಿಗಳು ಎಲ್ಲರೂ ಕೂಡ ಹಿಂದೂ ಸ್ತ್ರೀಯ ಕಲಾಭಿರುಚಿಯನ್ನು ಏಕಪ್ರಕಾರವಾಗಿ ಮೆಚ್ಚಿ ಕೊಂಡಿದಾರೆ.

ಗಂಡಸರ ನಾಮ ಪುಂಡ್ರಗಳಲ್ಲಿ ಎಷ್ಟೋ ಭೇದವಿದ್ದರೂ ಹೆಂಗ ಸರು ಹಣೆಗೆ ಹಚ್ಚುವ ಮುಖಲಾಂಛನದಲ್ಲಿ ಮಾತ್ರ ನಮ್ಮವರಲ್ಲಿ

ಏನೂ ಹೆಚ್ಚು ವ್ಯತ್ಯಾಸವಿಲ್ಲ. ಗಂಡಸರ ಮುಖಲಾಂಛನದಲ್ಲಿ ಕಲೆಗಿಂತ ಧರ್ಮದೃಷ್ಟಿ ಹೆಚ್ಚು. ಕೆಲವು ಸಲ ಈ ಬಗೆಯು ವಿಕಾರವಾಗುವ ತನಕ ಹೋಗುತ್ತದೆ. ಹೆಂಗಸರಲ್ಲಿ ಮುಂಬಯಿಕಡೆ ನಾದು ಕುಂಕುಮ (ಸೀದಕಾಳಿನಿಂದ ಮಾಡಿ ಸುಣ್ಣಹಾಕಿದ ಅಂಟು) ದಕ್ಷಿಣದಲ್ಲಿ ಪುಡಿಕುಂಕುಮ. ಎಲ್ಲ ಕಡೆಯಲ್ಲೂ ಹಾಗೆ. ಆಂಧ್ರವನಿತೆಯರ ಹಾಗೆ ಮಹಾರಾಷ್ಟ್ರ ಮಹಿಳೆಯರು. ಇವರ ಹಾಗೆ ಗುಜರಾತಿ ಸ್ತ್ರೀಯರು. ಬಂಗಾಳ ಪಂಜಾಬು ಸಂಯುಕ್ತಪ್ರಾಂತಗಳ ಸಾಮಾನ್ಯ ಸ್ತ್ರೀಯರು ಹೇಗೋ ಲೇಖಕನಿಗೆ ಗೊತ್ತಿಲ್ಲ. ಆದರೆ ರಾಷ್ಟ್ರಸಭೆಗಳಲ್ಲಿ ಸಮ್ಮೇಳನಗಳಲ್ಲಿ ಭಾಗವಹಿಸುವ ಸೊಗಸುಗಾತಿಯರನ್ನು ನೋಡಿದರೆ ಆ ಪ್ರಾಂತದ ಹೆಂಗಸರು ತಿಲಕವನ್ನು ಇಡುವುದರ ಜೊತೆಗೆ ಬೈತಲೆಗೆ ಸಿಂದೂರವನ್ನು ಹಚ್ಚಿಕೊಳ್ಳುತ್ತಾರೆ ಎಂದು ತಿಳಿಯುತ್ತದೆ. ಇವೆರಡೂ ಕೂಡ ಹೆಣ್ಣಿನ ಅಂದವನ್ನು ಹೆಚ್ಚಿಸಿ ಒಂದು ಸೊಬಗುಕೊಟ್ಟು ಮೋರೆಯ ಮಾಟವನ್ನು ಎತ್ತಿತೋರಿಸುತ್ತವೆ. ಇದನ್ನು ಜಾತಿ ಸೂಚಕಚಿಹ್ನೆ ಎಂದು ಪರದೇಶಿಗಳು ಕರೆದಿದಾರೆ. ನಮ್ಮ ದೇಶಕ್ಕೆ ಇದೊಂದು ವಿಶಿಷ್ಟ ಲಕ್ಷಣ. ಧರ್ಮಕಲೆಗಳೆರಡನ್ನೂ ಬೆರೆಸಿದ ಈ ಪವಿತ್ರ ಸಂಪ್ರದಾಯಕ್ಕಾಗಿ ನಾವು ಹೆಮ್ಮೆಪಡಬೇಕು. ಪವಿತ್ರ ಎಂದೆನಲ್ಲವೆ. ನಿಜ. ದಾಯಾದಿಗಳಿಂದಲೇ ಆಗಲಿ ಬಳಗದಿಂದಲೇ ಆಗಲಿ ಮನೆಯಲ್ಲಿ ಯಾರಾದರೂ ಸತ್ತರಾಗಲಿ ಬರುವ ಸೂತಕದಲ್ಲಿ ಕುಂಕುಮವನ್ನಿಡಬಾರದೆಂಬ ನಿಯಮವಿದೆ. ಕುಂಕುಮವು ಪವಿತ್ರವಾದ ಅಲಂಕಾರ; ಜಾತಿ ಸೂಚನೆಯಲ್ಲ. ಹಾಗಿದ್ದರೆ ವಿಧವೆಯರಿಗೆ ಕುಂಕುಮವೇಕೆ ನಿಷಿದ್ಧ ? ಅವರಿಗೆ ಜಾತಿಯಿಲ್ಲವೇ ? ಸನ್ಯಾಸಿಗಳಿಗೆ ಎಲ್ಲಿದೆ ತಿಲಕಧಾರಣೆ ? ಈ ಇಂಗ್ಲೀಷು ಭಾಷಾಂತರದ ಗೊಂದಲದಲ್ಲಿ ನಮ್ಮ ಸಂಪ್ರದಾಯಗಳಿಗೆ ಬಂದ ಗತಿ ಇದು. ಎಲ್ಲವೂ ಆಭಾಸ, ವಿಪರೀತ.

ಭಾರತೀಯ ಸಂಸ್ಕೃತಿಯಲ್ಲಿ ಮೊದಲಿನಿಂದಲೂ ಭಾವಪ್ರಕಟನೆಗೆ, ವಿಷಯ ವಿವರಣೆಗೂ ಕೂಡ ಗದ್ಯಕ್ಕಿಂತ ಪದ್ಯವೇ ಹೆಚ್ಚು

ಪ್ರಧಾನ. ವಾಸ್ತುಶಿಲ್ಪವೇನು ಜ್ಯೋತಿಷವೇನು, ಅಶ್ವಶಾಸ್ತ್ರವೇನು ರಣವಿದ್ಯೆಯೇನು, ಗಣಿತವೇನು, ನೀತಿಯೇನು, ಕಡೆಗೆ ಆಸ್ತಿವಿಭಾಗದ ಸೂತ್ರಗಳೂ ಕರ್ಮಕಾಂಡದ ಮಂತ್ರಗಳೂ ಎಲ್ಲವೂ ಪದ್ಯದಲ್ಲೇ. ಓದುಬರೆಹ ಬಾರದಿದ್ದರೂ ಸುಸಂಸ್ಕೃತರಾದ ನಮ್ಮ ಹೆಂಗಸರ ತಿಳಿವಿಗೆ ಆಶ್ಚರ್ಯವಾಗುತ್ತದೆ. ಶಿಕ್ಷಣವಿಲ್ಲದಿದ್ದರೂ ಅವರಿಗೆ ಸಂಸ್ಕೃತಿಯಿದೆ. ರಾಮಾಯಣ ಭಾರತದ ಆಖ್ಯಾನಗಳು ಸಾವಿತ್ರೀ ಸತ್ಯವಂತನ ಕತೆ ಮುಂತಾದವೂ ಅವರಿಗೆ ಗೊತ್ತು. ಎಲ್ಲವೂ ಹಾಡು. ರಾಮನ ಅರಣ್ಯವಾಸ, ಸೀತೆಯ ವನವಾಸ, ಲಕ್ಷ್ಮಣನ ಮೃದುಹಾಸ ಇವೆಲ್ಲ ಕಲೆಧರ್ಮಗಳ ಸಮ್ಮಿಶ್ರಣವಾದ ಸೊಗಸಾದ ಹಾಡಿನ ಮೂಲಕ ಪ್ರತಿಯೊಬ್ಬ ತಾಯಿಯೂ ತನ್ನ ಮಗಳಿಗೆ ಮನೆಯಲ್ಲಿ ಹೇಳಿಕೊಡುತ್ತಾಳೆ. ಸೊಸೆಯನ್ನು ಅತ್ತೆ ಮಾವಂದಿರು ಮನೆಗೆ ತಂದುಕೊಳ್ಳುವಾಗ ಹೇಳುವ ಮನೆ ತುಂಬಿಸುವ ಹಾಡು ಎಷ್ಟು ಕರುಣಾರಸ ಪೂರ್ಣವಾಗಿರುತ್ತದೆ. ಎಷ್ಟು ಜನರಿಗೆ ಅದನ್ನು ಕೇಳಿ ಕಣ್ಣೀರು ಬಾರದು? ಬಳಗದವರು ಪರರು ಎನ್ನದೆ ಎಲ್ಲರಿಗೂ ಹನಿಗಣ್ಣಾಗದೆ?

ದಕ್ಷಿಣ ದೇಶದಲ್ಲಿ ಕೆಲವು ಹಬ್ಬಗಳಲ್ಲಿ ಮನೆಮನೆಯಲ್ಲೂ ನಡೆಸುವ ಬೊಂಬೆಯ ಪ್ರದರ್ಶನದ ಬಗ್ಗೆ ಕೊಂಚ ಹೇಳಬೇಕು. ತಮಿಳರು ಕನ್ನಡಿಗರು ನವರಾತ್ರಿಯಲ್ಲಿ ಬೊಂಬೆ ಕೂಡಿಸುತ್ತಾರೆ. ಆಂಧ್ರರು ಸಂಕ್ರಾಂತಿಯ ಹಬ್ಬದಲ್ಲಿ. ನಿಜವಾಗಿ ಅದೊಂದು ಅಂದವಾದ ಪುಟ್ಟ ಪ್ರದರ್ಶನ. ಚೆನ್ನಪಟ್ಟಣ, ವಿಶಾಖಪಟ್ಟಣ, ನಕ್ಕಪಲ್ಲಿಗಳ ಬಣ್ಣದ ಬೊಂಬೆಗಳು; ಕೃಷ್ಣಾಜಿಲ್ಲೆಯ ಕೊಂಡಪಲ್ಲಿಯ ಜೀವಂತಪ್ರಾಣಿಗಳೇ ಎಂದು ಭ್ರಾಂತಿಗೊಳಿಸುವ ಮರದ ಬೊಂಬೆಗಳು; ಲಖನವೂ ಮಣ್ಣಿನ ಬೊಂಬೆಗಳು; ತಿರುಪತಿಯ ಗಂಧದ ಸಾಮಾನು; ತಿರುವಾಂಕೂರಿನ ದಂತದ ಸಾಮಾನು; ಪಾಕಾಲದ ಗಡಿಗೆಮುಡಕೆ; ಬಿಳೀಕಲ್ಲಿನಲ್ಲಿ ಮಾಡಿದ ಆಗ್ರಾಬಮುಕು; ಕಾಶಿಯ ಚಿತ್ರವಿಚಿತ್ರವಾದ ಹಿತ್ತಾಳೆ ವಸ್ತುಗಳು; ಭೂಜ್ ಕಾಠೆಯವಾಡದ ಬೆಳ್ಳಿಯ ಕೆಲಸ; ಬರ್ಮಾದ ಬಣ್ಣದ ತಟ್ಟೆ ಲೋಟ ಪೆಟ್ಟಿಗೆಗಳು; ಪಾಟ್ನಾದ ಕೊಂಬಿ

ನಲ್ಲಿ ಮಾಡಿದ ಪಕ್ಷಿಗಳು :—ಎಷ್ಟುವಿಧ, ಎಷ್ಟು ವಿವಿಧ ! ಈ ಅದ್ಭುತ ಕಲಾಭಿರುಚಿಯನ್ನು ಇಂಗ್ಲೆಂಡಿನ ನೀರಸವಾದ, ನಿರ್ವರ್ಣವಾದ, ನಿರ್ಜೀವವಾದ ಬೊಂಬೆಗಳು ಬಂದು ಕುಲಗೆಡಿಸಿ ನಮ್ಮ ಕಲೆಗಾರಿಕೆಯನ್ನು ಹಾಳುಮಾಡಿವೆ. ಆ ಕಸಬುಗಳೆಲ್ಲ ಮಣ್ಣುಪಾಲಾಗಿವೆ. ಆದರೆ ನಾವೂ ನಮ್ಮ ಹೆಂಗಸರೂ ಮಕ್ಕಳೂ ನಮ್ಮ ಗತವೈಭವವನ್ನು ಅರಿತುಕೊಂಡು ಮತ್ತೆ ಆ ಜೀವನವನ್ನು ರೂಪಿಸಿಕೊಳ್ಳುತ್ತಿದೇವೆ.

ಅಡವಿಗಳಲ್ಲಿ ನೆಲೆಯಿಲ್ಲದೆ ಅಲೆಯುವ ಕಾಡು ಜನರಿಗೂ ಕೂಡ ಕಲಾಭಿರುಚಿಯಿದೆ. ಕವಡೆಗಳನ್ನೇ ಕೂಡಿಸಿ ಹೊಲಿದಿದ್ದರೂ ಅವರ ಉಡುಪಿನಲ್ಲಿಯೂ ಬಣ್ಣಬಣ್ಣವಿದೆ. ಅದರ ಮೇಲೆ ಅಟ್ಟೆಯಾಗಿ ಅಂಟಿಕೊಂಡಿರುವ ಯುಗಾಂತರದ ಕೊಳೆಯನ್ನು ಗಮನಿಸದಿದ್ದರೆ ಅದರ ಅಂದವೂ ಕಾಣಬರುತ್ತದೆ. ಇಂಗ್ಲೀಷ್ ಮನೆಯೂ ಅಂದವಾಗಿರುತ್ತದೆ. ಆದರೆ ಆ ಅಂದವೆಲ್ಲ ದಿವಾನಖಾನೆಯಲ್ಲಿಮಾತ್ರವೇ. ಆದಾದರೂ ನಿಜವಾಗಿ ಸುಂದರವಾಗಿ ರುಚಿಯಾಗಿ ಇರುವುದಿಲ್ಲ. ನಾನಾತರದ ವಸ್ತು ಸಂಗ್ರಹಾಲಯವಿದ್ದಹಾಗೆ ಇರುತ್ತದೆ. ಹಿಂದೂ ಮನೆ ಹಾಗಲ್ಲ. ಎಲ್ಲ ಭಾಗಗಳಲ್ಲೂ ಕಲಾಪೂರ್ಣವಾಗಿರುತ್ತದೆ. ಅಲ್ಲಿರುವ ಪಾತ್ರೆಗಳನ್ನೇ ನೋಡಿ—ನೀರಿನ ಹಂಡೆಯಿಂದ ಹಾಲಿನ ಶಂಖದ ವರೆಗೆ ಎಲ್ಲದರಲ್ಲೂ ಕಸಬುದಾರನ ಕೈವಾಡವಿದೆ. ಹಿತ್ತಾಳೆ ತಾಮ್ರದ ಪಂಚಪಾತ್ರೆಗಳ ಮೇಲೆ ಚಿತ್ರ. ಬೆಳ್ಳಿ ಕಂಚಿನ ಸಾಮಾನಿನಲ್ಲಿ ನಾನಾ ಆಕಾರ. ಆ ಮಾಟವೇ ಮುದ್ದಾಗಿರುತ್ತದೆ. ಅಡಿಗೆಯ ಪಾತ್ರೆಗಳಿಗೂ ಒಂದು ಸೊಗಸಾದ ಆಕಾರ ಕ್ರಮವಿದೆ. ಬೆಳ್ಳಿಯ ಪಾತ್ರೆಗಳಲ್ಲಂತೂ—ಆ ತಟ್ಟೆಗಳೂ, ಎಲೆಅಡಿಕೆ ತಬಕಗಳು, ಗಂಧದ ಬಟ್ಟಲು, ಪನ್ನೀರುದಾನಿ, ಅಡಕತ್ತರಿ, ಪಾನ್‌ದಾನಿ, ಅತ್ತರುದಾನಿಗಳನ್ನು ನೋಡಿದರೆ ಆ ಶಿಲ್ಪಚಾತುರ್ಯ ತಿಳಿಯುತ್ತದೆ. ಈಗೆಲ್ಲ ಸ್ವಾಧಾತನ ಬಂದು ಹಳೆಯ ಕಸೂತಿ ನಗಿಷೀಕೆಲಸ ಮೂಲೆಗೆ ಬಿದ್ದಿದೆ. ಬೆಳ್ಳಿ ತಟ್ಟೆ ಒಂದೊಂದೂ ಒಂದು ಎಲೆಯ ಆಕಾರ. ಕಮಲದಂತೆ, ಬಾದಾಮಿ ಎಲೆಯಂತೆ, ಬಾಳೆಯೆಲೆಯಂತೆ, ಆಲದೆಲೆಯಂತೆ—

ವಿವಿಧ ರೀತಿ. ಸಂಧ್ಯಾವಂದನೆಗೆ ಉದ್ಧರಣೆ ಹರಿವಾಣಗಳು ಕಲೆಯು ಜೋಡಿಸಿದ ವಸ್ತುಗಳು. ದೇವರ ಮುಂದಿನ ಹಿತ್ತಾಳೆಯ ದೀಪಸ್ತಂಭಗಳು ಎಷ್ಟು ಮನೋಹರವಾಗಿರುತ್ತವೆ. ಅದರಷ್ಟು ಚೆಲುವಾದುದು ಹಿಂದೂ ಮನೆಗಳಲ್ಲಿ ಮತ್ತೇನಿದೆ? ದೇವರ ವಿಗ್ರಹ ಗಳು ಕೂಡ ಎಷ್ಟು ಸುಂದರ! ಪಾರ್ವತೀನಟರಾಜ, ದಕ್ಷಿಣಾಮೂರ್ತಿ, ಸರಸ್ವತಿ, ಗೋಪಾಲಕೃಷ್ಣ, ವೇಣುಗೋಪಾಲ, ವಟಪತ್ರಶಾಯಿ, ಆ ಸಾಲಗ್ರಾಮಗಳು, ಶಂಖಗಳು, ದೇವಸ್ಥಾನಗಳಲ್ಲಿರುವ ಗಂಟೆಗಳು— ಎಲ್ಲವೂ ನಮ್ಮ ಜನರ ಸುಸಂಸ್ಕೃತ ಅಭಿರುಚಿಯನ್ನೇ ತೋರಿಸುತ್ತವೆ.

ಉಳಿದ ಸಾಮಾನಿನಲ್ಲೂ ನಮ್ಮದು ಕಲಾಭಿಮಾನವೇ. ನಮ್ಮ ಜಂಖಾನೆಯಂಥ ಸೊಂಪಾದ ಸೃಷ್ಟಿಯುಂಟೆ? ಇದರ ಮುಂದೆ ಚಾಳಿಕೆಯಲ್ಲಿ ಯಾವುದು ನಿಂತೀತು? ಅವುಗಳ ರಚನೆಯಲ್ಲಿ ನೈಪುಣ್ಯ ವಿದೆ, ಭಾವನೆಯಿದೆ. ಕೆಂಪು ಹಸುರು, ಬಿಳುಪು ಗುಲಾಬಿಗಳ ಹಿನ್ನೆಲೆಗೆ ನೀಲಿ—ಎಷ್ಟು ಸೊಗಸು! ಈಗ ಈ ಚೆಲುವಾದ ವಸ್ತು ಅಳಿದು ಹೋಗುತ್ತಿದೆಯಲ್ಲ. ದೇಶಪ್ರೇಮವುಳ್ಳವರು ಎಷ್ಟೋ ಹಣ ವೆಚ್ಚ ಮಾಡಿ ಮಾಡಿಸಿಕೊಳ್ಳಬೇಕಾಗಿದೆ. ಜಂಖಾನೆಯ ಜೊತೆಯದೇ ಗುಡಾರ. ಒಂದೊಂದು ಮನೆಯ ಗಂಡಹೆಂಡಿರಿಬ್ಬರೂ ನಾಲ್ಕಾರು ತಿಂಗಳು ಕಷ್ಟಪಟ್ಟುದರ ಫಲ ಅದು. ಈಗ ಇದನ್ನು ಕೊಳ್ಳುವವರು ನಮ್ಮವರಲ್ಲ, ಫರಂಗಿಯವರು. ಮರ್ದ್ಯವವಲ್ಲವೆ. ಇನ್ನು ಶಾಲನ್ನೂ ಅದರ ರಮಣೀಯವಾದ ಕಲಾಬತ್ತನ್ನೂ, ಸೀರೆಯನ್ನೂ ಕೈಯಿಂದ ಜೋಡಿಸಿದ ಅವರ ಮನೋಹರವಾದ ಅಂಚನ್ನೂ ವರ್ಣಿಸಬೇಕೆ? ಒಮ್ಮೊಮ್ಮೆ ಇವುಗಳ ಬೆಲೆ ಎರಡು ಮೂರು ಸಾವಿರದವರೆಗೆ ಹೋಗು ವುದುಂಟು. ರೇಶಿಮೆಯಲ್ಲಿ ಜರತಾರಿಯಲ್ಲಿ ಮಾಡುವ ಶೃಂಗಾರದ ಕೆಲಸಕ್ಕೆ ವರ್ಷಗಟ್ಟಲೆ ಹಿಡಿಯುತ್ತದೆ. ನಮ್ಮ ಕಸಬುದಾರರ ಕೌಶಲ ಸ್ಫುರಣೆಗಳಿಗೆ ಅದೇ ಉದಾಹರಣೆ, ಅದೇ ಪ್ರಶಸ್ತಿ.

ಬೀದಿಯಲ್ಲಿ ಹೋಗುವಾಗ ಇದು ಕ್ರಿಸ್ತಾನರದು ಮುಸ್ಲಿಮರದು ಅಲ್ಲ, ಹಿಂದೂಗಳ ಮನೆ ಎಂದು ನೋಡುತ್ತಲೇ ಹೇಳಬಹುದು.

ಮನೆಯಮುಂದೆ ಹೊಕ್ಕೊಡನೆ ಕಾಣುವುದು ರಂಗೋಲಿ, ಹೊಸ ಲಿಗೆ ಇಟ್ಟ ಅರಸಿಣ ಕುಂಕುಮ, ಹೊಸಲಿನ ಚಿತ್ತಾರ, ಚೌಕಟ್ಟಿನ ಮೇಲುಮೂಲೆಗಳ ಸಿಂಹಲಲಾಟ, ಚಿತ್ರವಿಚಿತ್ರವಾಗಿ ಕೊರೆದ ಮೇಲು ಹಲಗೆ; ಅನುಕೂಲವಿದ್ದವರ ಮನೆಗಳಲ್ಲಿ ಬಾಗಿಲ ಚೌಕಟ್ಟಿನ ಮೇಲೆ ಕೆತ್ತಿದ ದಶಾವತಾರಗಳು, ಹೂಬಳ್ಳಿಗಳ ನಡುವೆ ಗಿಣಿ ನವಿಲುಗಳ ಕೆತ್ತನೆ, ಹಬ್ಬ ಹರಿದಿನಗಳಲ್ಲಿ ಮಾವುಬೇವಿನ ತಳಿರುತೋರಣ. ಕಾಗದದ ಹೂತೋರಣಗಳು ಈ ಕಾಲದ ಅಸಹ್ಯಾಲಂಕಾರ. ಮನೆ ಯೊಳಗೆ ಕಾಲಿಟ್ಟರೆ ಪಂಚಪಾಂಡವರಂತೆ ಐದು ಜನ ಶಿಲ್ಪಿಗಳು ಮಾಡಿದ ಕೆಲಸವೆಲ್ಲ ಕಾಣುತ್ತದೆ. ಬಡಗಿಯು ಕೆತ್ತಿದ ಕಮಲಗಳು ಬಳ್ಳಿಗಳು; ಮನೆಕಟ್ಟುವವ ನಿರ್ಮಿಸಿದ ಗೋಡೆಗಳು ಕಂಭಗಳು; ಅಕ್ಕಸಾಲೆ ಕಂಚುಗಾರರು ಮಾಡಿದ ಒಡವೆ, ಪಾತ್ರೆ, ಅತ್ತರುದಾನಿ, ಅಡಕೆಲೆತಟ್ಟೆ, ಕುಂಬಾರನು ಕೊಟ್ಟ ಸೊಗಸಾದ ನೀರಿನ ಹೂಜಿ; ಕಂಚುಗಾರರು ಪಿತ್ತಾಳೆಯಲ್ಲಿ ತೋರಿಸಿದಹಾಗೆ ಕಬ್ಬಿಣದಲ್ಲಿ ತನ್ನ ಕೌಶಲತೋರಿದ ಕಮ್ಮಾರನ ಬೀಗ ಬೀಗದ ಕೈಗಳು ಎಲ್ಲಾ ಕಾಣುತ್ತವೆ. ಮನೆಯೊಳಗೆ ಓಡಾಡುವ ಜನರ ನೀಳವಾದ ತೆರೆತೆರೆಯಾಗಿ ಕುಣಿವ ಉಡಿಗೆ. ಬಿಗಿಯಾಗಿ ತಗಡಿನಂತಿರುವ ಇಂಗ್ಲಿಷರ ಕೋಟು ಷರಾ ಯಿಗಳಲ್ಲಿ, ಇಂಗ್ಲೀಷು ಹೆಂಗಸರ ಪೀಪಾಯಿಯಂಥ ಲಂಗವೆಲ್ಲಿ, ನಮ್ಮ ಹೆಂಗಸರ ನಿಡಿದಾದ ಸೀರೆಗೆಯಲ್ಲಿ? ನಮ್ಮ ವೇಷದಲ್ಲೇ ಆ ವಿಶಾಲ ದೃಷ್ಟಿಯಿದೆ? ಒಳಗೆ ದೇವರ ಮನೆಯಲ್ಲಂತೂ ಸುಂದರವಾದ ಮಂ ಟಾಪನ. ಅರಿಸಿಣ ಕುಂಕುಮ ತೊಡೆದು ಹೂವು ಧೂಪಗಳ ವಾಸನೆ ಯಿಂದ ಗಮಗಮಿಸುವ ಚೆಲುವಿನ ಮಂಟಪ. ಹಿಂದುಗಡೆ ಪಡ ಸಾಲೆಯ ಮಗ್ಗುಲಿಗೆ ತುಲಸೀ ಬೃಂದಾವನ. ಬಡವರಾಗಲಿ ಶ್ರೀಮಂತ ರಾಗಲಿ ಎಲ್ಲರ ಮನೆಯಲ್ಲೂ ಈ ಮಹಾಸತಿಯ ಪೂಜೆ ನಡೆದೇ ನಡೆ ಯಬೇಕು. ಅಂದಿನ ಸತಿ ಇಂದಿನ ದೇವತೆ. ಮನೆಯವರಿಗೆ ಯೋಗ್ಯ ತೆಯಿದ್ದಹಾಗೆ ಆ ಬೃಂದಾವನದ ಅಲಂಕಾರ. ನಮ್ಮ ಜನಾಂಗದ ವಿಶಿಷ್ಟ ಅಭಿರುಚಿಗಳೆಲ್ಲ ನಶಿಸಿಹೋಗಿ ಬ್ರಸ್ಸೆಲ್ ಜಂಖಾನೆ ಆಸ್ಟ್ರಿಯಾ

ದೀಪಗಳು, ವರ್ಣವೈವಿಧ್ಯವಿಲ್ಲದ ಮಬ್ಬು ಸಾದಾತನ, ಕೀಳು ತರದ ಸಾಮಾನು ನಮ್ಮ ಮನೆಗಳಲ್ಲಿ ಕಾಲಿಟ್ಟಿವೆ. ಆದರೆ ನಮ್ಮಲ್ಲಿ ಪುನರ್ನಿರ್ಮಾಣವಾಗುತ್ತಲಿದೆ. ನಮ್ಮ ಮನೆಯ ಕಡೆ ನಮ್ಮ ದೃಷ್ಟಿ ಹರಿದಿದೆ. ಹಿಂದಿನ ಕಾಲದಲ್ಲಿ ಇದ್ದಂತೆ ಹಿಂದೂಗೃಹ ಮತ್ತೊಮ್ಮೆ ಸೌಂದರ್ಯ ಸ್ಫೂರ್ತಿಗಳ ಆಧಾರವಾಗಬೇಕಾಗಿದ್ದರೆ ಆ ಬಗ್ಗೆ ನಾವು ಗಮನಕೊಡಬೇಕು. ಅಭ್ಯಾಸ ಮಾಡಬೇಕು. ಅದರಿಂದ ನಮ್ಮ ರಾಷ್ಟ್ರೀಯತೆ ತೇಜೋವಂತವೂ ಪರಿಶುದ್ಧವೂ ಆದೀತು.

೩

# ಅವಿಭಕ್ತ ಕುಟುಂಬ

ವಿಲಾಯತಿ ಪಾಂಡಿತ್ಯ ವಿಲಾಯತಿ ವಿಚಾರ ತುಂಬಿದ ತಲೆಗೆ ಹಿಂದೂ ಅವಿಭಕ್ತ ಕುಟುಂಬವೆಂದರೆ ಏನೋ ಬಗೆಹರಿಯದ ತೊಡಕಾಗಿಬಿಡುತ್ತದೆ. ಒಬ್ಬೊಬ್ಬರಿಗೆ ಐವತ್ತು ವರ್ಷ ವಯಸ್ಸಾಗಿ, ತಲಾ ನಾಲ್ಕಾರು ಜನ ಹರೆಯದ ಮಕ್ಕಳಿದ್ದು, ಆ ಮಕ್ಕಳಿಗೆ ಮದುವೆಯಾಗಿ ಮನೆತುಂಬ ಮಕ್ಕಳಾಗಿ — ಇವರಿಗೆ ಮೊಮ್ಮಕ್ಕಳಾಗಿ — ಇಷ್ಟೆಲ್ಲ ಆದರೂ ಈ ಮುದುಕ ಅಣ್ಣತಮ್ಮಂದಿರೆಲ್ಲ ಒಂದೇ ಮನೆಯಲ್ಲಿ ಒಟ್ಟಿಗೆ ಗುಂಪು ಸೇರಿಕೊಂಡು, ಜಗಳವಾಡುತ್ತ ಸಮಾಧಾನಪಡುತ್ತ, ಸದಾ ಗೊಂದಲದಲ್ಲೇ ಬಿದ್ದು ಹೀಗೇಕೆ ಸಂಸಾರ ಮಾಡಬೇಕೋ ಈ ವಿಲಾಯತಿ ಬುದ್ಧಿಯ, ತನ್ನಷ್ಟಕ್ಕೆ ತಾನೇ ಎನ್ನುವ ವೈಯಕ್ತಿಕ ವಿಚಾರದ ಜನರಿಗೆ ತಿಳಿಯುವದೇ ಇಲ್ಲ. ಇದರಲ್ಲಿ ಅಡಗಿರುವ ವಂಶವಿಜ್ಞಾನದ ಸೂಕ್ಷ್ಮತತ್ವ ಹಾಗಿರಲಿ. ಇದರ ಆರ್ಥಿಕ ತತ್ವ, ಅದಕ್ಕಿಂತ ಮುಖ್ಯವಾಗಿ ಇದರ ರಸಾಭಿನಿವೇಶದ ಬಗ್ಗೆ ವಿಚಾರಮಾಡೋಣ. ವಯಸ್ಸಿಗೆ ಬಂದ ಮೂರು ನಾಲ್ಕು ಜನ ಅಣ್ಣತಮ್ಮಂದಿರು ಒಟ್ಟಿಗಿದ್ದರೆ ಅವರ ನಲವತ್ತು ಎಕರೆ ಹೊಲ, ಅದಕ್ಕೆ ಬೇಕಾದಷ್ಟು ದನಕರು, ಆಳುಕಾಳು ಎಲ್ಲಾ ಸೇರಿ ಅವರಸಂಸಾರದಲ್ಲಿ ಹಿರಿಯರಿಗೂ ಕಿರಿಯರಿಗೂ ಎಲ್ಲರಿಗೂ ಕೈತುಂಬ ಕೆಲಸವಾಗುತ್ತದೆ. ಒಬ್ಬ ಹೊಲ ನೋಡಿಕೊಂಡರೆ ಎರಡನೆಯವನು ದನ ನೋಡಿಕೊಳ್ಳುತ್ತಾನೆ, ಮೂರನೆಯವನು ಮನೆ ನಡಸುತ್ತಾನೆ. ಮನೆಯಲ್ಲಿ ಯಾವುದಾದರೂ ಒಂದು ಮಗುವಿಗೆ ವಿಷಮ ಶೀತಜ್ವರ ಬಂದರೆ ಅದರ ಆರೈಕೆ ಔಷಧಿಗೆ ಒಬ್ಬ ಮನಸು ಕೊಟ್ಟು ನಿಂತಿದಾನೆ, ಅದು ಅವನ ಕರ್ತವ್ಯ, ಆವನಿಗೆ ಸೇರಿದುದು. ಮನೆ

ನಡಸುವ 'ಗೃಹಮಂತ್ರಿ'ಗೆ ಸಂತೆಗೆ ಹೋಗಿ ಸಂಸಾರಕ್ಕೆ ಬೇಕಾದ ಪದಾರ್ಥಗಳನ್ನು ತರುವ ಕೆಲಸ. ಹಣಕಾಸಿನ ಹೊಣೆಯೆಲ್ಲ ಅವನದು. ಹಣ ಕೊಡುವುದಾಗಲಿ ತೆಗೆದುಕೊಳ್ಳುವದಾಗಲಿ, ಸಾಲ ಮಾಡುವದಾಗಲಿ ಕೊಡುವದಾಗಲಿ ಅವನ ಕೆಲಸ. ಒಡವೆ ಮಾಡಿಸ ಬೇಕಾದರೆ, ಮದುವೆ ಗೊತ್ತಾಗಬೇಕಾದರೆ, ಶುಭಕಾರ್ಯ ನಡಸಬೇಕಾದರೆ ಅವನು ಬರಬೇಕು. ಇತ್ತ ಹೊಲಮಾಡುವವನು—ವ್ಯವಸಾಯ ಮಂತ್ರಿ—ರಪರಪ ಹೊಡೆವ ಮಳೆಯಲ್ಲೂ ಚುರಚುರ ಸುಡುವ ಬಿಸಿಲಲ್ಲೂ ಗದ್ದೆಗೆಹೋಗಿ ಇಳಿಬೇಸಗೆಯಲ್ಲಿ ಬೀಜದ ಬಿತ್ತನೆಯನ್ನೋ ತುಂಬಿದ ಮಾಗಿಯಲ್ಲಿ ಪೈರಿನ ಕೊಯ್ಲನ್ನೋ ನಡಸುತ್ತ ನೆಟ್ಟಗೆ ನಿಂತಿರುತ್ತಾನೆ. ಮನೆಯಲ್ಲಿ ಕಾಯಿಲೆಯಾಗಿರಲಿ, ಊರಲ್ಲಿ ಯಾರದಾದರೂ ಮದುವೆ ಸಾಗಿರಲಿ ಇವನ ಪಾಲಿನ ಕೆಲಸಕ್ಕೆ ಯಾವುದೂ ಅಡ್ಡವಿಲ್ಲ. ತನ್ನ ಕೆಲಸಬಿಟ್ಟು ಇವನು ಹೋಗುವದಿಲ್ಲ. ಮೂರನೆಯವನೂ ಹಾಗೆಯೇ. ಅವನ ಕೆಲಸವೇ ಅವನಿಗೆ. ಹೊಲಮನೆ ಎರಡರ ನಡುವಿನದು ಅವನ ಕೆಲಸ. ದನಕರುಗಳ ರಕ್ಷಣೆ ಅವನ ಭಾರ. ಹಳೆಯ ದನವನ್ನು ಕಾಪಾಡಬೇಕು; ಹೊಸವನ್ನು ತರಬೇಕು. ಹೊಸದಾಗಿ ಹುಟ್ಟಿದ ಎಳೆಗರುವಿಗೆ ಕೊಂಚ ಕಾಯಿಲೆಯಾದರೂ ಮನೆಯ ಅಚ್ಚುಮೆಚ್ಚಿನ ಹಸುವಿಗೆ ಸ್ವಲ್ಪ ಹೆಚ್ಚು ಕಡಮೆಯಾದರೂ ಅವನ ಮನಸಿಗೆ ನೆಮ್ಮದಿಯಿಲ್ಲ. ದನಕ್ಕೆ ಸಾಕಷ್ಟು ಮೇವು ಇದೆಯೋ ಇಲ್ಲವೋ, ಹುರುಳಿ ಬೇಯಿಸಿದಾರೆಯೋ ಇಲ್ಲವೋ ಅವನು ನೋಡಿಕೊಳ್ಳಬೇಕು. ಮೇವು ಸರಿಯಾಗಿ ಕತ್ತರಿಸಿ ಹಾಕಿದಾರೆಯೇ, ಹಾಲು ಹಿಂಡಿದಾರೆಯೋ, ದನ ಕಟ್ಟಿಹಾಕಿದಾರೆಯೇ—ಎಲ್ಲವನ್ನೂ ಅವನು ವಿಚಾರಿಸಿಕೊಳ್ಳಬೇಕು. ಬಿಡುವಿದ್ದಾಗ ಊರಿನ ಸಾಹುಕಾರನ ಹತ್ತಿರ ಲೆಕ್ಕವನ್ನೋ ದಸ್ತಾವೇಜುಗಳನ್ನೋ ಬರೆದು ಹೊತ್ತು ಕಳೆಯಬಹುದು. ಹೊಸದಾಗಿ ಕಟ್ಟಿರುವ ಶಾಲೆಯೆಂಬ ಸೆರೆಮನೆಯಲ್ಲಿ ಕೊಳೆಹಾಕಿ ಕಾವಲುಗಾರರಾದ ಉಪಾಧ್ಯಾಯರ ಮೇಲ್ವಿಚಾರಣೆಗೆ ಬಿಟ್ಟಿರದೆ ಇದ್ದರೆ ಮಕ್ಕಳೂ ಕೂಡ ಮೇಲೆ ಹೇಳಿದ ಕೆಲಸಗಳಲ್ಲಿ ಯಾವುದಾದರೊಂದರಲ್ಲಿ ತೊಡಗುತ್ತಾರೆ.

ಅವಿಭಕ್ತ ಕುಟುಂಬ ಅಥವಾ ಒಟ್ಟು ಸಂಸಾರ ಒಂದು ಮಿತಿಯವರೆಗೆ ಸುಗಮವಾಗಿ ಅನಾಯಾಸವಾಗಿ ನಡೆಯುತ್ತದೆ. ತಂದೆ ಮಕ್ಕಳಾದರೂ ಅವಿಭಕ್ತವಾಗಿರಬಹುದು, ಅಣ್ಣ ತಮ್ಮಂದಿರಾದರೂ ಕೂಡಿಇರಬಹುದು. ಹಿಂದೂ ಸಮಾಜದಲ್ಲಿ ತಂದೆಯ ಆಸ್ತಿಯನ್ನು ಮಕ್ಕಳಿಗೆಲ್ಲ ಹಂಚುವ ಪದ್ಧತಿಯಿದೆ ಕಾಲ ಒದಗಿ ಬಂದಾಗ ಇದರಿಂದ ಒಬ್ಬೊಬ್ಬರಾಗಿ ಮಕ್ಕಳು ಬೇರೆಯಾಗುವಂತಾಗುತ್ತದೆ. ಹೀಗೆ ಹಂಚಿ ಹಂಚಿ ಹೊಲಗಳು ತುಂಡುತುಂಡಾಗಿ ಕೆಲವುಕಡೆ ಒಂದೊಂದು ಎಕರೆಗೂ ಕಡಮೆಯಾಗಿವೆ. ಈಜಿಪ್ಟ ದೇಶದಲ್ಲಿ ಐದು ಎಕರೆಗಿಂತ ಕಡಮೆಯಾಗುವ ಹಾಗೆ ಹಂಚಕೂಡದೆಂದು ಶಾಸನವಿದೆ. ಮದರಾಸು ಪ್ರಾಂತದಲ್ಲಿಯೂ ಪಂಜಾಬಿನಲ್ಲಿದ್ದ ಹಾಗೆ ಅಂಥದೊಂದು ಶಾಸನವನ್ನು ಮಾಡಬೇಕಾದ ಕಾಲ ಬಂದಿದೆ. ಕುಟುಂಬವನ್ನು ಹೋಳುಮಾಡುವುದೆಂದರೆ ಮಹಾ ಅನರ್ಥವೆಂಬ ಭಾವನೆ ಮೊದಲಿನಿಂದಲೂ ನಮ್ಮಲ್ಲಿದೆ. ಕುಟುಂಬ ಗೌರವಕ್ಕೆ ಅದು ಸಲ್ಲದು. ಅದು ಕಳಂಕ. ಆರ್ಥಿಕಹಾನಿ ಎನ್ನುವದಂತೂ ಸರಿಯೇ ಸರಿ. ಅದರೆ ಸಾಕಷ್ಟು ಕಾರಣವಿಲ್ಲದೆ ಒಟ್ಟುಕುಟುಂಬಗಳು ಭಾಗವಾಗುವುದು ಅಪರೂಪ. ನೂರು ಜುಟ್ಟನ್ನಾದರೂ ನಡಸಬಹುದು, ಮೂರು ಜಡೆಯನ್ನು ನಡಸುವುದು ಕಷ್ಟ ಎನ್ನುವ ಗಾದೆಯೇ ಒಂದಿದೆ. ಹೀಗೆಂದರೆ ಹೆಂಗಸರಿಗೆ ಅನ್ಯಾಯಮಾಡಿದಂತಾದೀತಾಗಲಿ, ಇಪ್ಪತ್ತುನಾಲ್ಕು ಗಂಟೆಯೂ ಕೂಡಿ ಕಲೆತು ಬಾಳಬೇಕಾದವರು ಅವರು; ಜೊತೆಗೆ ಸಾವಿರ ಧರ್ಮ ಸಂಕಟಕ್ಕೆ ಗುರಿಮಾಡುವ ಮಕ್ಕಳು ಬೇರೆ; ಹೀಗಾಗಿ ಗಂಡಸರಿಗಿಂತ ಬಹುಬೇಗ ಹೆಂಗಸರು ಮನಸ್ತಾಪಮಾಡಿಕೊಂಡರೆ ಅದರಲ್ಲಿ ಆಶ್ಚರ್ಯವೇನು? ಗಂಡಸರು ಮಾತ್ರ ನಿರ್ದೋಷಿಗಳೋ? ಬಿಸಿಲೆನ್ನದೆ ಮಳೆಯೆನ್ನದೆ, ಛಳಿಯೆನ್ನದೆ ಗಾಳಿಯೆನ್ನದೆ ಹಗಲೂ ಇರುಳೂ ಹೊಲದಲ್ಲಿ ದುಡಿಯುವವನು ದುಡಿಯುತ್ತಿದ್ದರೆ, ಮನೆಯಲ್ಲಿ ಹಣಕಾಸು ನೋಡಿಕೊಳ್ಳುವವನು ತನ್ನ ಮಕ್ಕಳಿಗೇ ಪ್ರತ್ಯೇಕವಾಗಿ ತಿನಸು ತಂದು

ಕೊಟ್ಟು, ತನ್ನ ಹೆಂಡತಿಗೆ ಸೊಗಸಾದ ಸೀರೆ ಕೊಂಡು, ಹೆಂಡತಿಗೂ ಮಕ್ಕಳಿಗೂ ಗುಟ್ಟಾಗಿ ಒಂದೆರಡು ಒಡವೆ ಮಾಡಿಸಿದರೆ ಅಸೂಯೆ, ಮಾತ್ಸರ್ಯ ಹುಟ್ಟದೆ ಹೋದೀತೆ? ಈ ಮನಸಿನ ಸಂಕಟ ಒಳಗೇ ಅಡಗಿಕೊಂಡಿರುತ್ತವೆ. ಯಾವಾಗಲಾದರೂ ಒಮ್ಮೆ ಹೊರಗೆ ಬಂದರೆ ಒಬ್ಬ ಓರಗಿತ್ತಿ ತುಪ್ಪವನ್ನೋ ಮೊಸರನ್ನೋ ತನ್ನ ಮೈದುನನ ಮಕ್ಕಳಿಗೆ ಹಾಕದೆ ತನ್ನ ಮಕ್ಕಳಿಗೆ ಕೊಂಚ ಹೆಚ್ಚಾಗಿ ಬಡಿಸುತ್ತಾಳೆ. ಒಳಗೇ ಹೊತ್ತುತ್ತಿದ್ದ ಬೆಂಕಿ ಹೊಗೆಯಾಡಲು ಪ್ರಾರಂಭ. ಮೈದುನನ ಹೆಂಡತಿಗೋ ಭಾವನ ಮಗಳಿಗೋ ದಿನತುಂಬಿ ಬಂದ ಸಮಯದಲ್ಲಿ ಅಥವಾ ಅವರ ಮಗುವಿಗೆ ಕಾಯಿಲೆಯಾದಾಗ ಒಬ್ಬಾಕೆ ತೌರುಮನೆಗೆ ಹೊರಟುಹೋಗುತ್ತಾಳೆ. ಕುಟುಂಬದ ವ್ಯವಹಾರ ಪರಿಷ್ಕಾರವಾಗುವ ತನಕ ಬಾರೆನೆಂದು ಹಟ ಹಿಡಿಯುತ್ತಾಳೆ. ಸರಿ, ಇಂಥ ಸಂದರ್ಭದಲ್ಲಿ ವಾದವಿವಾದಗಳು ಏಳುವುದು ಸ್ವಾಭಾವಿಕವೆ ತಾನೆ. ಹೆಂಗಸರ ಮನಸ್ತಾಪ ಗಂಡಸರಿಗೂ ಹತ್ತಿ ಕೊನೆಗೆ ಕುಟುಂಬ ಸಿಡಿದುಹೋಗುತ್ತದೆ.

ಹಿಂದೂ ಅವಿಭಕ್ತಕುಟುಂಬವೂ ಅದರ ಭವ್ಯಾದರ್ಶವೂ ಕುಸಿದುಬೀಳಲು ಹೊಸಕಾಲದ ಬಾಳುಬದುಕು ಕೂಡ ಬಹಳಮಟ್ಟಿಗೆ ಕಾರಣವಾಗಿದೆ. ಕುಟುಂಬದ ಹಿರಿಯಣ್ಣ ಬಹುಶಃ ಒಂದು ಹಳ್ಳಿಯ ಶಾನುಭೋಗ. ಬಹಳ ಅಭಿಮಾನದಿಂದ ತಮ್ಮನನ್ನು ಓದಿಸುತ್ತಾನೆ. ಇವನ ಬೈತಲೆ, ಹಂಟಿಂಗ್ ಕೋಟು, ಡಬಲ್ ಕಾಲರ್, ಟೈ, ಬಿಗಿಯಾದ ಷರಾಯಿ, ಜೋಗಲೆ ನಿಕ್ಕರು, ಉದ್ದ ಕಾಲುಚೀಲ, ಎತ್ತರವಾದ ಬೂಟು, ಸಿಪಾಯಿ ಚೆತ್ತ, ಸಿಗರೇಟು ಹೊಗೆ–ಎಲ್ಲವನ್ನೂ ಹೆಮ್ಮೆಯಿಂದ ತನ್ನಹಳ್ಳಿಯ ಜನಕ್ಕೆ ತೋರಿಸುತ್ತಾನೆ. ಇವನ ಓದಿಗಾಗಿ ಕುಟುಂಬದ ಧನವೆಲ್ಲ ಕರಗಿಹೋಗುತ್ತದೆ. ಇದನ್ನೆಲ್ಲ ಕರಗಿಸಿ ಇವನು ವಕೀಲನೋ ವೈದ್ಯನೋ ಆಗಿ ಪಟ್ಟಣ ಸೇರುತ್ತಾನೆ. ಇನ್ನೂ ಹಣ ಬೇಕೆನ್ನುತ್ತಾನೆ. "ಹೊಲ ಚೆನ್ನಾಗಿ ಸಾಗುಮಾಡಿ ನನ್ನ ಮನೆ ಬಾಡಿಗೆಗೆ ಕುದುರೆಗಾಡಿಗೆ, ಅಡಿಗೆಯವನಿಗೆ ಗುಮಾಸ್ತೆಗೆ, ನನ್ನ

ಕ್ಲಬ್ಬಿಗೆ ಸಿಗರೇಟಿಗೆ, ವೇಷಭೂಷಣಗಳಿಗೆ, ಆಟನೋಟಕ್ಕೆ ಇನ್ನೂ ಹೆಚ್ಚಿಗೆ ಹಣ ಕಳಿಸು'' ಎನ್ನುತ್ತಾನೆ. ಕಡೆಗೊಂದು ದಿನ ತನ್ನ ಪಾಲಿನ ಭತ್ತ, ದನಕರು ಕೊಡಬೇಕೆಂದು ಅಣ್ಣನನ್ನು ಕೇಳುತ್ತಾನೆ. ಇಪ್ಪತ್ತು ವರುಷದ ಲೆಕ್ಕ ತೋರಿಸೆಂದು ಗದರಿಸುತ್ತಾನೆ. ಅಣ್ಣನ ಸಾಲ ಸುಳ್ಳೆಂದು, ಅವನ ವ್ಯವಹಾರ ಮೋಸವೆಂದು ಕೂಗಾಡುತ್ತಾನೆ. ಅಣ್ಣನ ಮಗಳ ಮದುವೆಯಂಥ ಸಂದರ್ಭ ಬಂದ ಕೂಡಲೆ ತಾನು ಭಾಗವಾದಂತೆ ಒಂದು ರಿಜಿಸ್ಟರ್ಡ್ ಕಾಗದ ಕಳಿಸುತ್ತಾನೆ. ಅಥವಾ 'ವಿಶ್ವಕರ್ಣಾಟಕ' ದಲ್ಲಿ ಆ ಬಗ್ಗೆ ಒಂದು ಪ್ರಕಟಿಸುವನ್ನೇ ಕೊಟ್ಟಾನು. ಏನೂ ಅರಿಯದ ಹಿರಿಯಣ್ಣ, ಇದೆಲ್ಲ ಏನು ಅವಾಂತರವೆಂದು ಕೇಳಿದರೆ ಪ್ರಿವಿ ಕೌನ್ಸಿಲಿನ ತೀರ್ಮಾನವನ್ನೊ 45 ಮದರಾಸನ್ನೊ 58 ಬೊಂಬಾಯನ್ನೋ ಅವನ ಮುಖಕ್ಕೆ ಹಿಡಿಯುತ್ತಾನೆ. ಏನಾಗುತ್ತದೆ ಪರಿಣಾಮ, ಗೊತ್ತೆ? ಬೆಳಗಾದರೆ ಮದುವೆ; ಆದರೆ ಸಾಲ ಹುಟ್ಟದಾಗುತ್ತದೆ. ಕುಟುಂಬ ಪಾಲಾಯಿತೆಂದು ಸಾಲಗಾರರಿಗೆ ಗೊತ್ತಾಗಿದೆ. ಹಳೆಯ ಸಾಲಕ್ಕೆ ಗತಿಯಿಲ್ಲ, ಹೊಸದಕ್ಕೆ ದಾರಿಯಿಲ್ಲ. ಹಿಂದೆ ಮಾಡಿದ ಸಾಲ ಸಂಸಾರಕ್ಕಾಗಿಯೆ ಎಂಬುದನ್ನು ಅಣ್ಣ ಪ್ರಮಾಣಮಾಡಿ ಕೊಡಬೇಕು. ಅಷ್ಟೇಕೆ, ಕಣ್ಣುಮುಚ್ಚಿದ ತಂದೆ ಅವನಿಗೆ ಯಜಮಾನ ಪಟ್ಟ ಕಟ್ಟಿದ್ದನೇ? ಹಿರಿಯಣ್ಣ ಕಾನೂನೂ ಓದಲಿಲ್ಲ, ವೈದ್ಯವನ್ನೂ ಕಲಿಯಲಿಲ್ಲ. ತಮ್ಮನಿಗಾಗಿ, ತಂದೆಗಾಗಿ ಗಳಿಸಿ ಕೂಡಿಟ್ಟ. ತಮ್ಮ ಕೇಳಿದ್ದಕ್ಕೆ ತಂದೆ ಹೇಳಲು, ಸಾಲಮಾಡಿದ. ತಂಗಿಯ ಮದುವೆಗೆ, ತಮ್ಮನ ಓದಿಗೆ, ಹೊಲ ಕೊಳ್ಳಲು, ವ್ಯಾಜ್ಯ ನಡಸಲು ಸಾಲಮಾಡಿದ. ಸಂಬಳ ಪಡೆವ ಗುಮಾಸ್ತೆಯಂತೆ ಲೆಕ್ಕವಿಡಲಿಲ್ಲ. ಜೀತವಿಲ್ಲದ ಯಜಮಾನನಂತೆ ತನ್ನ ದಿನಚರಿಯಲ್ಲಿ ಅಲ್ಲಲ್ಲಿ ಗುರುತುಹಾಕಿಕೊಂಡು ಕೊನೆಗೆ ವ್ಯವಹಾರ ಕಚೇರಿಗೆ ಹೋದಾಗ ಇವನ ಲೆಕ್ಕ ಸರಿಯಾಗಿಲ್ಲ, ಅಸಂಬದ್ಧ, ನಂಬಿಕೆಗೆ ಅರ್ಹವಲ್ಲ ಎಂದು ತೀರ್ಮಾನ. ಹಿರಿಯ ಮಗನಾಗಿ ಹುಟ್ಟುವ ದುರದೃಷ್ಟ, ಕಿರಿಯ ಮಗನಾಗಿ ಹುಟ್ಟುವ ಅದೃಷ್ಟ ಎಂಥದೆಂದು ಈಗ ಅವನಿಗೆ ಅರ್ಥವಾಗುತ್ತದೆ. ಕಷ್ಟ ತನಗೆ, ಫಲ

ಪರರಿಗೆ ಎಂಬದು ಗೊತ್ತಾಗುತ್ತದೆ. ಸುಖಪಡೋಣವೆಂದರೆ ತಂದೆಯ ಭಯ, ಕಷ್ಟಕ್ಕೆ ತಂಗಿ ತಮ್ಮಂದಿರು ಕಾರಣ. ಕಿರಿಯನಿಗೆ ಓದಿಸ ಬೇಕಾದ ತಮ್ಮನೂ ಇಲ್ಲ, ಮದುವೆಮಾಡಬೇಕಾದ ತಂಗಿಯೂ ಇಲ್ಲ. ಅವನ ಸಂಪಾದನೆ ಅವನ ಸೊಂತದ್ದು. ವಿದ್ಯಾಫಲವಲ್ಲವೆ ಅದು? ಹೊಲ ಮಾಡಿ ಫಲದಲ್ಲಿ ಪಾಲುಕೊಡಿರೆಂದು ಅವನು ಅಣ್ಣನನ್ನು ಕೇಳಲೂಬಹುದು. ಇವರಿಬ್ಬರ ನಡುವೆ ತಂದೆ ಬದುಕಿದ್ದರೆ ಅವನಿಗೆ ಉಭಯಸಂಕಟ. ಸಂಸಾರವನ್ನು ಅವ್ಯವಸ್ಥೆಗೊಳಿಸಿದ್ದಕ್ಕಾಗಿ ಹಿರಿಯ ನನ್ನು ಬಯ್ಯುತ್ತಾನೆ. ಮನೆತನದಲ್ಲಿ ಚೊಕ್ಕ ಲೆಕ್ಕ ಬರೆಯಲು ಅಸಾಧ್ಯವೆಂದು ಕಿರಿಯನಿಗೆ ಹೇಳುತ್ತಾನೆ. ಅಷ್ಟರಲ್ಲಿ ಒಡವೆ ಪಾಲು ಮಾಡಬೇಕಾಗಿ ಬಂದು, ಅಣ್ಣತಮ್ಮ ಇಬ್ಬರೂ ಒಂದಾಗಿ ತಂದೆಯ ಮೇಲೆ ಜಗಳ ತೆಗೆಯುತ್ತಾರೆ. ಯಾಕೆ? ತಾಯ ಕೊರಳಲ್ಲಿ ನೂರು ಮುತ್ತು ನೂರು ಗುಂಡು ಹೆಚ್ಚಾಗಿವೆ. ಇದು ಮುಗಿದರೆ ಮುದುಕ ನಿಗೇಕೆ ಪಾಲು ಎಂದು ಇಬ್ಬರೂ ತಂದೆಯನ್ನು ಆಕ್ಷೇಪಿಸುತ್ತಾರೆ. ಆತನ ತರುವಾಯ ಹೊಲ ಮನೆ ತಮಗೆ ಬರುವಂತೆ ಜವಮಪತ್ರ ಬರೆಯಲು ಬಹಿರಂಗವಾಗಿಯೆ ಗೋಳಾಡಿಸುತ್ತಾರೆ. ಆತನಿಗೆ ಪಾರ್ಶ್ವ ವಾಯುವಾಗಿ ಮಾತು ಬಿದ್ದುಹೋದರೆ ಹೇಗೆ? ಮಲತಾಯಿ ಇದ್ದ ರಂತೂ ವ್ಯವಹಾರವೆಲ್ಲ ಕಗ್ಗಂಟೇ. ಎಂದಾದರೊಂದು ದಿನ ಕುಟುಂಬ ಗಳು ಪಾಲಾಗುತ್ತವೆ. ಆದರೆ ಸ್ನೇಹದಿಂದ ಪಾಲಾಗುವವರು ಕಡಮೆ. ಮಕ್ಕಳು ಬೆಳೆದು ಬೇರೆಯಾಗಿ ತಂದೆತಾಯಿಗಳು ಮುದಿತನದಲ್ಲಿ ಒಂಟಿಯಾಗಿ ಕಾಲಹಾಕುತ್ತಾರೆ. ಒಂಭತ್ತು ತಿಂಗಳು ಪೂರು ದಿನ ಹೊತ್ತು, ಪ್ರಾಣಾಪಾಯಕ್ಕೆ ಸಿಕ್ಕಿ ಹೆತ್ತು, ಎಳೆತನದಲ್ಲಿ ಹಗಲು ಅನ್ನ ವಿಲ್ಲದೆ ಇರುಳು ನಿದ್ದೆಯಿಲ್ಲದೆ ಕಾಲಕಳೆದು, ಯಾರ ಹಿರಿಯದ ಬೆಳ ವಣಿಗೆಯಲ್ಲಿ ತಾನು ನಲಿದಳೋ, ಯಾರು ಪ್ರೌಢರಾದಮೇಲೆ ಅನಾಥ ಳಾಗಿ ಏಕಾಕಿಯಾಗಿ–ಭಿಕಾರಿಯಾಗಿ ಗತಿವಿಹೀನಳಾಗಿ ಕೊರಗಿ ಸಾಯ ಬೇಕೋ ಅಂಥವರೇಯೆ ತನ್ನ ಮಕ್ಕಳು?

# ಮನೆ

ಹಿಂದೂ ಗೃಹದ ಹೆಗ್ಗುರುತು ಒಂದು, ವಿಶೇಷಣ ಒಂದು, ಇಡೀ ಹಿಂದೂ ಜನಜೀವನದ, ಅವರ ಆಚಾರವಿಚಾರದ ಸಾರ ಎಂಬ ಹಾಗೆ ಇದೆ. ಹಿಂದೂಜನವೇ ಏಕೆ, ಭಾರತೀಯ ಜನಜೀವನದ ಸಾರ ಎನ್ನಬಹುದು. ಹಿಂದೂಗೃಹದಲ್ಲಿ ನಮ್ಮ ಮನಸ್ಸನ್ನು ಮೊದಲು ಸೆಳೆವ ಗುಣ ಅದರಲ್ಲಿ ಕಾಣುವ ಉದಾರವಾದ ಸ್ವಾಗತ ಬುದ್ಧಿ, ವಿಸ್ತಾರವಾದ ಆತಿಥ್ಯ. ಮನೆಯ ನಡುವಣ ಚೌಕ, ಗಾಳಿ ಬೆಳಕಿಗಾಗಿ ಮಾಡಿದ ಆರೋಗ್ಯ ಸೂತ್ರದ ಕೌಶಲವೆಂದು ಆರೋಗ್ಯ ವಿಜ್ಞಾನಿಗೆ ಅನಿಸಹುದು. ನಿಜ, ಆ ಪಕ್ಕದ ಈ ಪಕ್ಕದ ಕೊಠಡಿ ನಡುಮನೆಗಳ ಕಿಟಕಿಗಳಲ್ಲಿ ತೂರಿ ಗಾಳಿ ಒಳ ಅಂಗಳದ ಚೌಕದಿಂದ ಬಯಲು ಸೇರುತ್ತದೆ; ಚೌಕದಿಂದ ಬೀಸಿ ಕಿಟಕಿಗಳಿಂದ ಬಯಲು ಸೇರುವುದೂ ಉಂಟು. ವಿಶಾಲವಾಗಿ ನೂರಾರು ಜನ ಹಿಡಿಸು ವಂತಿದ್ದು, ನೀಲಿ ಮುಗಿಲಿನ ಚೆಲುವು ಪ್ರಕೃತಿಯ ಸೊಬಗು ನೋಟ ತೋರುವ ಅಂಗಳ ಬರುಬರುತ್ತ ಚಿಕ್ಕದಾಗಿ, ಕಡೆಗೆ ಮಳೆ ಬಾರ ದಂತೆ ಕಳ್ಳರು ನುಗ್ಗದಂತೆ ಮುಚ್ಚಿಯೇ ಹಾಕಬೇಕಾಗಿ ಬಂದದ್ದನ್ನು ನೋಡಿ ಬಹಳ ಖೇದವಾಗುತ್ತದೆ.

ಇರಲಿ. ಈ ಅಂಗಳಕ್ಕೆ ಹೊಂದಿದ ಸುತ್ತು ಕೈಸಾಲೆಗೆ ಭವಂತಿ ಎಂದು ಹೆಸರು. ಪ್ರತ್ಯೇಕವಾಗಿ ತಾತ್ಕಾಲಿಕ ಏರ್ಪಾಡೇನನ್ನೂ ಮಾಡದೆ ನಿಮ್ಮ ಮನೆಯೊಳಗೇ ಎಷ್ಟು ಜನಕ್ಕೆ ಎಲೆ ಹಾಕಬಹು ದೆಂಬುದು ಮನೆಯ ಆಸ್ತಿಗೆ ಒಂದು ಗುರುತು. ಸುತ್ತಲೂ ಇರುವ ನಾಲ್ಕು ಕೈಸಾಲೆ ನಾಲ್ಕು ನಡುಮನೆ ಇನ್ನೂರು ಎಲೆಗಳಿಗೆ ಸಾಲುವ

ಹಾಗೆ ಇರುತ್ತವೆ. ಕೈಸಾಲೆಗಳಲ್ಲೇ ಸಾವಿರ ಎಲೆ ಒಂದೇ ಸಲಕ್ಕೆ ಹಾಕಬಹುದೆಂಬುದು ಎಷ್ಟೋ ಜನ ಶ್ರದ್ಧಾವಂತರೂ ಉದಾರಿಗಳೂ ಆದ ಹಿಂದೂಗೃಹಸ್ಥರ ಹೆಮ್ಮೆ. ಈ ಗುಣಗಳೆಲ್ಲ ಈಗ ಮಾಯ ವಾಗಿವೆ. ಅಲ್ಲಿ ಇಲ್ಲಿ ಅಳಿದುಳಿದ ಗುರುತು ಗೆರೆ ಕಾಣಿಸುತ್ತವೆಯಾಗಲಿ ಹೊಸ ಕಾಲದ ಸೆಳವಿಗೆ ಸಿಕ್ಕ ಸೀಮೆಯಲ್ಲಿ ಹಿಂದೂಗೃಹವೆಂದರೆ ಬಂಗಲೆಯೆಂಬ ಕೀಳು ತರಗತಿಯ ಮಹಾ ಸೌಧದ ಕೀಳು ತರಗತಿಯ ನಕಲು. ಬಂಗಲೆ ಮಾದರಿ ಈಗ ವ್ಯಾಪಿಸಿಕೊಂಡಿದೆ. ಅದರಲ್ಲಿ ಚೌಕವಿಲ್ಲ. ಅದರ ಹೆಬ್ಬಾಗಿಲು ಉಳಿಯಾಡಿದುದುದಲ್ಲ. ಕುಶಲ ನಾದ ಬಡಗಿಯ ದಾರು ಶಿಲ್ಪದ ಉಪಕರಣದ ಸೋಂಕಿನ ದೋಷ ಅದರ ಬಾಗಿಲಿಗಾಗಲಿ ಹೊಸಲಿಗಾಗಲಿ ಹತ್ತಿಲ್ಲ. ಹಳ್ಳಿಯ ಮನೆಗಳ ಸೊಬಗು ಅದರ ಕೆತ್ತನೆಯ ಸೊಗಸು ಒರಟೊರಟಾದ ವಿಕಾರವಾದ (ಪಟ್ಟಣಗಳಲ್ಲಿ ಈಗ ಹರಡಿರುವ) ಬಂಗಲೆಗಳಿಗೆ ಇಲ್ಲ. ಇವುಗಳಲ್ಲಿ ಅತಿಥಿ ಶಾಲೆಯಿಲ್ಲ, ನಾರೀ ವಿಭಾಗವಿಲ್ಲ, ಆತಿಥ್ಯದ ಲಕ್ಷಣವಿಲ್ಲ. ಎಲ್ಲಾ ಬರೀ ವ್ಯವಹಾರದ ಮಂಡಿ. ಈಗಿನ ಬಡತನವೂ ಇದಕ್ಕೆ ಕಾರಣವೇ. ಆದರೆ ಹೊಸ ಕಾಲದ ಅರ್ಥದಾಹ, ಸ್ವಸಂಸ್ಕೃತಿ ತ್ಯಾಗ, ಸ್ವಧರ್ಮ ತಿರಸ್ಕಾರಗಳು ಮುಖ್ಯ ಕಾರಣ. ಮನೆಯನ್ನು ಕಟ್ಟುವಾಗ ಯಜಮಾನನಿಗಲ್ಲ ಸಿಂಹದ್ವಾರದ ಮೇಲೆ ಅಧಿಕಾರ, ಬಡಗಿಗೆ. ಗ್ರಾಮಶಿಲ್ಪಿಗೆ ಸೇರಿದ್ದು ಆ ಅಲಂಕಾರ ವಿಭಾಗ. ಸುಮ್ಮನೆ ತಿಳಿಸಿದರೆ ಸಾಕು ಬಡಗಿಗೆ ಹೊಸ ದ್ವಾರಬಂಧ ಸಿದ್ಧ. ಕೆಲವು ದಿನದ ಮೇಲೆ ಅವನ ಅಕೃತ್ರಿಮ ಭಾವನೆ ಪ್ರಾವೀಣ ಶಿಲ್ಪದಿಂದ ಸಿದ್ಧವಾದ ಕೆತ್ತನೆಯ ಕಲಾಕೃತಿ, ಕಟ್ಟಿಗೆಯಲ್ಲಿ ಕೊರೆದ ಕಾವ್ಯವೊಂದನ್ನು ಅವನೇ ತಂದು ನಿಲ್ಲಿಸುತ್ತಾನೆ. ಆಮೇಲೆ ಸಿಂಹದ್ವಾರವನ್ನೂ ಕವಾಟ ವನ್ನೂ ಸ್ಥಾಪಿಸಿ ಕೇಳುವ ಮೊದಲೇ ತನ್ನ ಬಹುಮಾನವನ್ನು ಹೊಂದುತ್ತಾನೆ. ಒಂದು ನೂರೋ ಎರಡು ನೂರೋ ಆ ಮನೆಯ ವಿಸ್ತಾರಕ್ಕೆ ತಕ್ಕಂತೆ. ಹಿಂದುಸ್ಥಾನದ ಸಮಾಜದಲ್ಲಿ ಶಿಲ್ಪಿಯೇ ಯಜಮಾನ. ನಿಮ್ಮ ಹಣಕಾಸು ವ್ಯಾಪಾರೋಸ್ಮಾದಿ ನೀರಸಾಲಂ

ಕಾರಗಳಿಗೆ ಅವನು ಅಧೀನನೂ ಅಲ್ಲ, ಆಳೂ ಅಲ್ಲ. ಅವನ ಲಕ್ಷ್ಯ ಶುದ್ಧ, ನಿರ್ದುಷ್ಟ. ಅವನ ಸಂಪ್ರದಾಯ ನಿಷ್ಕಳಂಕ, ಅಪರಿಹಾರ್ಯ. ಅವನಿಗೂ ಸೌಂದರ್ಯ ಪಾರಿಶುಧ್ಯ ಪರಿಪೂರ್ಣತೆಗಳ ಜ್ಞಾನವಿದೆ. ತನ್ನ ಪುರಾತನ ಸಂಪ್ರದಾಯವನ್ನು ಎಳ್ಳಷ್ಟೂ ಬಿಡಲಾರ. ನಿಮ್ಮ ಅಭಿಪ್ರಾಯ ಹೇಳನೋಡಿ. ಅವನೂ ತನ್ನ ಅಭಿಪ್ರಾಯ ಹೇಳಿಬಿಡುತ್ತಾನೆ. 'ನೀವು ಹೇಳಿದ್ದು ಸಲ್ಲದು, ಸ್ವಾಮಿ. ಅದು ಶಾಸ್ತ್ರಸಮ್ಮತವಲ್ಲ'' ಹಾಗೆಂದರೆ ಅದು ಅಶುದ್ಧ, ಅಪವಿತ್ರ, ನೀತಿಬಾಹ್ಯ, ಅಸತ್ಯ ಎಂದ ಹಾಗೆ. ಹೀಗೆ ನಮಗೆ ರಸವೆಂದರೆ ಪವಿತ್ರತೆ, ರಾಮಣೀಯಕತೆಯೆಂದರೆ ನೀತಿ; ಸೌಂದರ್ಯವೆಂದರೆ ಸತ್ಯ.

೫

## ಮಗ

ಅವಿಭಕ್ತ ಕುಟುಂಬದ ಯಜಮಾನನ ತರುವಾಯ ಮಗನೇ ಮನೆಯ ಒಡೆಯ. ಹುಟ್ಟಿದ ಹೊಸ ಪರಿಯಲ್ಲಂತೂ ವಂಶೋದ್ಧಾರ ಮಾಡಲು ಅವತರಿಸಿದ ಪ್ರತ್ಯಕ್ಷ ದೇವರೇ ಎಂಬಷ್ಟು ಸ್ವಾಗತ ಅವನಿಗೆ. ಮಗುವಾಗಿದ್ದಾಗ ಮನೆಮಂದಿಗೆಲ್ಲ, ಊರಜನಕ್ಕೆಲ್ಲ ಅವನನ್ನು ಕಂಡರೆ ಮುದ್ದು, ಮಮತೆ. ಇವನು ಹುಟ್ಟದಿದ್ದರೆ ಗಂಡು ಸಂತಾನವಿಲ್ಲದೆ ವಂಶ ಕ್ಷೀಣವಾಗಿ ಎಲ್ಲರೂ ನರಕಭಾಜನರಾಗಬೇಕಾಗಿತ್ತು. ಇವನು ಅವತಾರಮಾಡಿ ಆ ಕಷ್ಟವನ್ನು ತಪ್ಪಿಸಿದ. ಮಗನಿಲ್ಲದೆ ಮನೆ ಹೇಗೆ ಬೆಳೆಯಬೇಕು? ಹೆಣ್ಣುಮಕ್ಕಳು ಸೊತ್ತಿಗೆ ಬಾಧ್ಯರಾದಾರೇ ವಿನಾ ಮನೆತನ ನಡಸಬಲ್ಲರೇ? ವಂಶ ಬೆಳೆದೀತೇ ಅವರಿಂದ? ಆಸ್ತಿಪಾಸ್ತಿಯುಳ್ಳ ಮುದುಕರು ತಮಗೆ ಗಂಡುಮಕ್ಕಳು

ಇಲ್ಲದಾಗಲು ಮೊಮ್ಮಗನನ್ನು–ಮಗಳ ಮಗನನ್ನು–ದತ್ತು ತೆಗೆದು ಕೊಳ್ಳುವದು ರೂಢಿಯೇ ಆಗಿದೆ. ಇದರಿಂದ ರಕ್ತಸಂಬಂಧಿಗಳಲ್ಲೇ ಆಸ್ತಿ ಉಳಿದಂತಾಯಿತು, ಉಪಾಯಾಂತರದಿಂದ ವಂಶ ನಿಂತ ಹಾಗೂ ಆಯಿತು. ಇದರಲ್ಲಿ ತೊಂದರೆಯೂ ಇದೆ. ಹತ್ತುಜನ ಮೊಮ್ಮಕ್ಕಳಿದ್ದಾಗ ಒಬ್ಬನನ್ನು ಆರಿಸಿಕೊಂಡರೆ ಉಳಿದವರಿಗೆ ಅಸಂತೋಷ. ಇದರಿಂದ ಇತ್ತ ಕೊನೆಗಾಣದ ವ್ಯಾಜ್ಯ ವ್ಯವಹಾರ, ಅತ್ತ ಅಂತವಿಲ್ಲದ ಅಂತಃಕಲಹ ದ್ವೇಷಗಳ ಬೀಜ ಬಿತ್ತಿದಹಾಗೆಯೆ. ಆದರೆ ಮಗಳಮಗನ ದತ್ತು ಸರಿಯೆಂದೂ ನ್ಯಾಯವೆಂದೂ ಶಾಸನ ಈಗ ಒಪ್ಪಿಕೊಂಡುಬಿಟ್ಟಿದೆ ಎನ್ನಬಹುದು. ಅದು ಹೇಗೇ ಇರಲಿ, ನಮ್ಮಲ್ಲಿ ಪುತ್ರಪ್ರಾಪ್ತಿಯೊಂದು ಅಗತ್ಯ ಧರ್ಮ, ವಿಧಿ. ಸಾಯುವ ಮುನ್ನ ಮನುಷ್ಯನಾಗಿ ಹುಟ್ಟಿದವನು ಮಗನನ್ನು ಪಡೆಯಲೇ ಬೇಕು.

ಹಿಂದೂ ಕುಟುಂಬದಲ್ಲಿ ಮನೆಯವರು ಗಂಡು ಮಗುವಿಗೆ ತೋರುವ ಆದರ ಅಕ್ಕರೆ ಅಷ್ಟಿಷ್ಟಲ್ಲ. ಅವನ ನೆರಳು ಬೆಳೆವುದನ್ನು ಕುತೂಹಲದಿಂದ ಕಾಯುತ್ತಾರೆ; ಅವನ ಕಾಲಧೂಳಿ ಕಣ್ಣಿಗೊತ್ತಿ ಕೊಳ್ಳುತ್ತಾರೆ; ಕೈಹಿಡಿದು ನಡಸುತ್ತಾರೆ; ಎತ್ತಿ ಆಡಿಸುತ್ತಾರೆ. ಅವನ ಓಡಾಟದಮೇಲೆ ಅವರಿಗೆ ಸದಾ ಕಣ್ಣು. ಅವನ ವಿದ್ಯಾಭ್ಯಾಸಕ್ಕಾಗಿ ಮನೆ ಬಡತನದಲ್ಲಿ ಮುಳುಗುತ್ತದೆ. ತೊಟ್ಟಿಲಲ್ಲಿ ಹಾಕಿದಾಗಿನಿಂದಲೂ ಕುಟುಂಬಕ್ಕೆ ಅವನ ಮದುವೆಯ ಚಿಂತೆ; ಆ ದಿನದಿಂದ ಹೆಣ್ಣು ಗೊತ್ತಾಗುವ ತನಕ ಅದರ ಪ್ರಸ್ತಾಪವೇ. ತನ್ನ ಪಾಲಿಗೆ ದೊರೆತ ಹುಡುಗಿಯ ಕತ್ತಿಗೆ ತಾಳಿ ಕಟ್ಟುವವರೆಗೆ ಇವನು ಕೈಗೂಸಾಗಿದ್ದಾಗ ಎಷ್ಟು ಜನ ಕೈಗೂಸುಗಳನ್ನು ನೋಡಿಯಾಯಿತೋ, ತಾಯ ತೊಡೆಯ ಮೇಲೆ ಕೂತು ತೊದಲು ನುಡಿ ಆಡುತ್ತಿದ್ದಾಗ ಎಷ್ಟು ಜನ ಹುಡುಗಿಯರನ್ನು ಲೆಕ್ಕವಿಟ್ಟರೋ, ಓದಿಗೆ ಹಾಕಿದಾಗ, ಕಾಲೇಜಿಗೆ ಕಳಿಸಿದಾಗ ಎಷ್ಟು ಮಂದಿ ಕನ್ನೆಯರ ಜಾತಕ ನೋಡಿದರೋ ಲೆಕ್ಕವುಂಟೇ! ಕೊನೆಗೆ ಅವನ ಮನಸ್ಸು ಒಪ್ಪಿಸಿಯೋ ಆ ಗೊಡವೆಗೆ ಹೋಗದೆಯೋ ಒಂದು ಹೆಣ್ಣು ನಿಶ್ಚಯವಾಗಿ ಮದುವೆಯೂ ಆಗು

ತ್ತದೆ. ಈ ವಿವಾಹ ವೈಭವಕ್ಕಾಗಿಯೇ ಹಡೆದ ತಾಯಿ ಹದಿನೆಂಟು ಇಪ್ಪತ್ತು ವರ್ಷಗಳಿಂದಲೂ ಕಾದಿದ್ದುದು, ಇದಿರು ನೋಡುತ್ತಿದ್ದುದು. ಈ ಎಂಟೋ ಹತ್ತೋ ಹದಿನಾಲ್ಕೋ ವಯಸ್ಸಿನ ಸೊಸೆಯೆಂಬ ಮಗು ವಿನ ಆಗಮನಕ್ಕಾಗಿಯಲ್ಲವೆ ಆ ಮುದುಕಿ ನಿರೀಕ್ಷಿಸುವದು? ಆದರೆ ಈ ಮಗು, ಈ ಕಿರುಜೀವ, ಹೊಸದಾಗಿ ಹೆಂಡತಿಯ ಪಟ್ಟವೇರಿ ಸೊಸೆಯಾದ ಈ ಪ್ರಾಣಿ, ಬಂದೊಡನೆ ಕಪಟವರಿಯದ ತಾಯಿ-ಮುಗ್ಧ ನಾದ ಮಗ, ಇವರಿಬ್ಬರ ಬಾಳಿನಲ್ಲೂ ಹೊಸದೊಂದು ಕಾಲ ಚಿಗುರು ತ್ತದೆ. ಪಕ್ಕಿಯ ಮರಿಗೆ ಹಾರಲು ಕಲಿಸುವವರು ಯಾರು? ಸಿಂಹದ ಮರಿಗೆ ಅಡವಿಯಲ್ಲಿ ಅಲೆಯಲು ಹೇಳಿಕೊಡಬೇಕೆ? ಯಾರೂ ಬೇಕಿಲ್ಲ. ಅವುಗಳ ಸ್ವಭಾವವೇ ಅವಕ್ಕೆ ಹೇಳಿಕೊಡುತ್ತದೆ, ಕಲಿಸು ತ್ತದೆ. ಹಾಗೆಯೇ ತನ್ನ ಅಭಿಮಾನ ವ್ಯಾಮೋಹಗಳನ್ನು ಆದರವನ್ನು ಬೇರೊಂದು ಜೀವಕ್ಕೆ, ಬೇರೆ ಸಂಸಾರಕ್ಕೆ, ಬೇರೆ ಕೇಂದ್ರಕ್ಕೆ ತಿರುಗಿಸು ವಂತೆ ವರನಿಗೆ ಅವನ ಸ್ವಭಾವವೇ ಹೇಳುತ್ತದೆ. ನನ್ನ ಮಾವ, ನನ್ನ ಭಾವ, ನನ್ನ ಅತ್ತೆ ಅನ್ನಲು ಮೊದಲುಮಾಡುತ್ತಾನೆ. ಈ ಶಬ್ದ ಗಳೆಲ್ಲ ತಾಯ ಬೆನ್ನಮೇಲೆ ಕಾಸಿದ ಕಬ್ಬಿಣದಿಂದ ಬರೆಯೆಳೆದ ಹಾಗೆ. "ಈ ಹುಡುಗ ನನ್ನನ್ನು ಮರೆತೇ ಬಿಟ್ಟನಲ್ಲ. ರಜೆ ಬಂದರೆ ಮಾವನ ಮನೆಯಲ್ಲೇ ಕಾಲಕಳೆಯುತ್ತಾನೆ. ಹೊತ್ತು ಹೆತ್ತು ಸುಖ ವಾಗಿ ಸಲಹಿ ಬೆಳೆಸಿ, ರೋಗ ಬಂದಾಗ ಅನ್ನನಿದ್ರೆಯಿಲ್ಲದೆ ಆರೈಕೆ ಮಾಡಿದ ನನ್ನ ಹತ್ತರ ಇರುವುದೇ ಬೇಡಾಗಿದೆಯಲ್ಲ." ಇಷ್ಟಾದರೂ ತಾಯ ಕರುಳಿನಲ್ಲಿ ಕಿಚ್ಚುಹೊತ್ತುವದಿಲ್ಲ. ಆದರೆ ಸೊಸೆ ಮನೆಗೆ ಸಂಸಾರಮಾಡಲು ಬಂದಳೋ ಕಿಚ್ಚೆಲ್ಲ ಒಂದೇ ಸಲ ಹೊತ್ತಿ ಉರಿಯು ತ್ತದೆ. ಹೊಸದರಲ್ಲಿ ಸೊಸೆ ತಾನು ಬಂದಾಗ ಯಾವ ಬಿರುಗಾಳಿ ಯನ್ನೂ ತರುವುದಿಲ್ಲ. ಯಾರ ಮನಸಿನಲ್ಲೂ ಮತ್ಸರವಿಲ್ಲ. ಆಕೆಯೂ ಒಬ್ಬ ಮಗಳಿದ್ದಂತೆ. ಬಹುಶಃ ಆಕೆಯ ಓರಗೆಯ ಅತ್ತಿಗೆ ನಾದಿನಿ ಯರು ಇರಬಹುದು. ಅವರ ಜೊತೆಯಲ್ಲಿ ಆಟವಾಡುತ್ತಾಳೆ. ಮನೆ

ಯಲ್ಲಿನ ಹಿರಿಯರು ಕಿರಿಯರು ಎಲ್ಲರೂ ಮಗಳ ಹಾಗೆಯೋ ತಂಗಿಯ ಹಾಗೆಯೋ ಮುದ್ದಾಡುತ್ತಾರೆ. ಹಿರಿಯ ಸೊಸೆ ಕಿರಿಯವಳಿಗೆ ಸ್ವಾಗತ ಬಯಸುತ್ತಾಳೆ. ಇವಳ ಸ್ನಾನ, ಉಡಿಗೆ ತೊಡಿಗೆ, ತಿಂಡಿ ತೀರ್ಥ ಎಲ್ಲವೂ ಅವಳಿಗೆ ಸೇರಿದ ಕೆಲಸ. ತಾನೇ ತಲೆ ಬಾಚುತ್ತಾಳೆ. ಅಂಗಡಿಯಿಂದ ತಿನಸು ತರಿಸಿ ಕೊಡುತ್ತಾಳೆ. ತನ್ನ ಒಡಹುಟ್ಟಿದ ತಂಗಿಗೆ ಮಾಡಿದ ಹಾಗೆ ಉಪಚಾರವೆಲ್ಲ ಮಾಡುತ್ತಾಳೆ. ಅತ್ತೆಗೂ ಅಷ್ಟೆ, ಬೇಕಾದಷ್ಟು ಪ್ರೀತಿ. ಬಹು ಬೇಗನೆ ಈ ಹೊಸ ಜೀವ ಜಗಳದ ಬೀಜವಾದಾಳೆಂದು, ಅಸೂಯೆಯ ವಿಷಯವಾದಾಳೆಂದು ಆಕೆಗೆ ಅನಿಸುವದಿಲ್ಲ. ಅತ್ಯಲ್ಪ ಕಾಲದಲ್ಲಿಯೆ ಆ ತಾಯಿ ವಿಧವೆ ಯಾಗಿ ಕುಟುಂಬಕ್ಕೆ ರಾಣಿಯಾಗಿದ್ದವಳು ಒಂದೇ ಗಳಿಗೆಯಲ್ಲಿ ಅವ ಲಕ್ಷಿಗೆ ದಂಡವಾದ ಪ್ರಾಣಿಯಾಗಬಹುದು. ಮೊದಲಿನಂತೆ ಮಗ ಆಕೆಯನ್ನು ಯಾವ ವಿಚಾರವಾಗಿಯೂ ಕೇಳುವುದಿಲ್ಲ. ಗೃಹಕೃತ್ಯ ಪ್ರಸ್ತಾಪವೇ ಇಲ್ಲ. ತಂಗಿಯೋ ಅಕ್ಕನೋ ಮನೆಗೆ ಬಂದರೆ ಮೊದಲಿ ನಂತೆ ಸೀರೆ ಕುಪ್ಪಸ ಕೊಡುತ್ತಾನಾಗಲಿ ಎಂಥದು, ಏನು ಕೊಡಬೇ ಕೆಂದು ಈಕೆಯನ್ನು ಕೇಳುವದಿಲ್ಲ. ಅವನ ಮಂತ್ರಾಲೋಚನೆ ಹೆಂಡತಿಯ ಹತ್ತಿರ. ಗಂಡನ ಹಣವನ್ನು ಎಣಿಸಿರಿಸಿ ಬಳಸಿ ಮಾಡು ವವಳು ಆಕೆಯೇ, ತಾಯಲ್ಲ. ಸಂತೆ ಮಾಡುವವಳು ಅವಳು, ಕಾಯಿ ಪಲ್ಯ ತರಿಸುವವಳು ಅವಳು. ಆಳುಕಾಳಿಗೆ ಕೆಲಸ ಹೇಳುವವಳೂ ಮನೆ ನಡಸುವವಳೂ ಅವಳೇ. ಹುಡುಗರಿಗೆ ಬಟ್ಟೆ ಹುಡುಗಿಯರಿಗೆ ಒಡವೆ ಅವಳೇ ಕೊಡಬೇಕು. ಅಜ್ಜಿಯ ಬಳಿಗೆ ಹೋಗೆಕೂಡದೆಂದು, ಆಕೆಯ ಕೈಯಲ್ಲಿ ಸ್ನಾನಮಾಡಿಸಿಕೊಳ್ಳಕೂಡದೆಂದು, ಆಕೆಯ ಹತ್ತಿರ ಮಲಗಬಾರದೆಂದು ಸೂಚನೆ ಕೊಡುತ್ತಾಳೆ. ಅಕಸ್ಮಾತ್ತಾಗಿಯೋ ಅಜ್ಜಿಯ ಅಣಗಿಸಲಾರದ ಅಭಿಮಾನದಿಂದಲೋ ಈ ಕೆಲಸ ಯಾವು ದಾದರೂ ಒಮ್ಮೆ ನಡೆದರೆ ಇವಳಿಗೆ ಎಲ್ಲೂ ಇಲ್ಲದ ಆವೇಶ ಬಂದು ಚಂಡಿಯಂತೆ ಕನಿಕರವಿಲ್ಲದೆ ಮಕ್ಕಳನ್ನು ಚಚ್ಚಿಬಿಡುತ್ತಾಳೆ. ಈ ಅನಾಹುತವನ್ನು ನೋಡಿ ಸೈರಿಸಲಾರದೆ ಅತ್ತೆ ಗೊಣಗುತ್ತಾಳೆ. ಮಗ

ನಿಗೆ ಹೇಳುತ್ತಾಳೆ. ಅತ್ತ ದರಿ ಇತ್ತ ಪುಲಿ. ಮೊಪಮೊದಲು ಮಗ ಹೆಂಡತಿಯನ್ನು ದಂಡಿಸಿ ಯಾವಾಗಲಾದರೂ ಒಂದೇಟು ಕೂಡ ಹಾಕುತ್ತಾನೆ. ಆದರೆ ಈ ತರುಣಿಗೆ ಗೊತ್ತಿಲ್ಲವೆ ಇವನನ್ನು ಪಳಗಿಸುವ ವಿದ್ಯೆ? ಅನ್ನ ನೀರು ಬಿಡುತ್ತಾಳೆ. ಕೂದಲು ಬಾಚಳು; ಸರಿಯಾದ ಸೀರೆ ಉಡಳು; ಒಡವೆ ಬೇಡ; ಸದಾ ಸಿಡಿಮಿಡಿಯಾಗಿ ಇರುತ್ತಾಳೆ. ಕೈಸಾಲೆಯಲ್ಲೋ ಅಡಿಗೆಮನೆಯಲ್ಲೋ ಮಲಗುತ್ತಾಳೆ. ಸಂದರ್ಭ ಸಿಕ್ಕಾಗಲೆಲ್ಲ ಕಿರಿಕಿರಿ, ಲೊಟಲೊಟ; ಮಕ್ಕಳಿಗಂತೂ ಕೊಂಚ ಕೊಂಚಕ್ಕೆಲ್ಲ ಗದಾಪ್ರಹಾರ. ಪಾಪ, ಆ ಬಡಪಾಯಿ ಗಂಡ ಒಪ್ಪಂದಕ್ಕೆ ಬರಲೇಬೇಕು ತಾನೆ. ಮೆಲ್ಲಮೆಲ್ಲನೆ ಗಂಡನ ಮೇಲೆ ಹೆಂಡತಿ ಅಧಿಕಾರ ಸಂಪಾದಿಸಿಕೊಳ್ಳುತ್ತಾಳೆ. ಅದೇನು ಅಷ್ಟು ಕಷ್ಟವಲ್ಲ. ಅವನು ತಾಯಿಗೆ ವೈರಾಗ್ಯೋಪದೇಶಮಾಡಲು ಪ್ರಾರಂಭಿಸುತ್ತಾನೆ. ಆಕೆಗೆ ಅರಳುಮರುಳೆಂದೂ ಜಗಳಗಂಟಿತನದ ಸ್ವಭಾವವೆಂದೂ ವಾದಿಸುತ್ತಾನೆ. ವ್ಯವಹಾರವೆಲ್ಲ ಕಡಡಿ ಕೊಚ್ಚೆಯಾಗುತ್ತದೆ. ಬೆಳಗ್ಗೆ ತಾಯಿ ಅನ್ನ ಬಡಿಸಿದರೆ ಮಗನಿಗೆ ಅದು ಸವಿಯಿಲ್ಲ. ಮುಖ ಮುದುಡಿಕೊಂಡಿರುತ್ತಾನೆ. ಅದೇ, ರಾತ್ರಿ ಹೆಂಡತಿ ಬಡಿಸಿದಾಗ ಮೋರೆ ಅರಳಿರುತ್ತದೆ. ಬೇಕಾದಷ್ಟು ಮಾತು ಹೊರಡುತ್ತವೆ.

ಬೆಳಗ್ಗೆ ಮಾಡಿದ್ದ ಬದನೆಕಾಯಿ ಪಲ್ಯವನ್ನು ಚೆಲ್ಲಿ, ಹುಳಿಯನ್ನು ಬಿಟ್ಟುಬಿಡುತ್ತಾನೆ. ಹೆಂಡತಿ ಹೊಸದಾಗಿ ಕರೆದ ಹಪ್ಪಳ ಕೇಳುತ್ತಾನೆ. ತಾಯಿಗೆ ಇದರಿಂದ ಸಿಟ್ಟು ಬರುತ್ತದೆ. ಒಂದೆರಡು ದಿನದಲ್ಲಿ ತಾಯಿಗೂ ಮಗನಿಗೂ ಮಾತಿಲ್ಲದಾಗುತ್ತದೆ. ತಂದೆ ಸತ್ತಾಗ ತನ್ನ ಹೆಂಡತಿಗೆ (ತಾಯಿಗೆ) ಪ್ರತ್ಯೇಕವಾಗಿ ಏನೂ ಅನುಕೂಲ ಮಾಡಿರಲಿಲ್ಲ. ಗಂಡ ಸಾಯುವಾಗ ಉಳಿದಿದ್ದ ಒಂದೋ ಎರಡೋ ಒಡವೆಯನ್ನು ವೈಧವ್ಯ ಬಂದ ಹೊಸದರಲ್ಲಿ ಮಗಳ ಸೀಮಂತಕ್ಕಾಗಿಯೋ ಮಗನ ಓದಿಗಾಗಿಯೋ ಆಕೆ ಮಾರಿದಳು. ಆ ಓದೇ ಆಕೆಗೆ ಈಗ ಈ ಗತಿ ತಂದಿದೆ. ಈಗ ನಿರ್ಗತಿಕಳಾಗಿ ಅನಾಥಳಾಗಿದಾಳೆ. ಮಗಳ ಮನೆಗೆ ಹೋಗಲು ಒಂದು ರೂಪಾಯಾದರೂ ಇಲ್ಲ; ಕೆಲಸಿಗನಿಗೆ ಕೊಡಲು ಎರಡಾಣೆ

ಇಲ್ಲ; ಕಡೆಗೆ ಅಫೀಮಾದರೂ ತಿನ್ನಲು ಒಂದಾಣೆ ಕೂಡ ಗತಿಯಿಲ್ಲ. ಸೊಸೆಗಂತೂ ಅತ್ತೆಯ ಯೋಚನೆಯೇ ಇಲ್ಲ. ಮಗನೂ ಮಾತಾಡಿಸದಾಸ. ತನ್ನ ಕಷ್ಟವನ್ನೂ ಸಂಕಟವನ್ನೂ ಯಾರ ಮುಂದೆ ಯಾದರೂ ಹೇಳಿಕೊಳ್ಳೋಣವೆಂದರೆ ಹಿರಿಯ ವಯಸ್ಸು; ಮನೆತನದ ಗೌರವ ಬೇರೆ. ಹೀಗಿರುವಾಗ ದಮ್ಮಿನ ರೋಗವೋ ಅತಿಮೂತ್ರವೋ ಪಾರ್ಶ್ವವಾಯುವೋ ಬಂದು ಗಂಟು ಬೀಳುತ್ತದೆ. ಆಕೆಗೆ ಔಷಧ ತರುವವರಿಲ್ಲ, ಉಪಚಾರ ಮಾಡುವವರಿಲ್ಲ; ಪಥ್ಯಕ್ಕೆ ಅನುಕೂಲವಿಲ್ಲ, ಹಣ್ಣಿಗೆ ಕಾಸಿಲ್ಲ. ಕೊನೆಗೆ ಮಗಳ ಮನೆಯಲ್ಲಿ ದುರ್ಮರಣ. ಅಂತ್ಯ ಕಾಲದಲ್ಲಿ ತನ್ನ ಬಳಿ ಮಗ ಇಲ್ಲವಲ್ಲ ಎಂಬ ತಡೆಗಾಣದ ಕೊರಗು. ಮಗನ ಮನೆಯಲ್ಲಿ ಮರಣವಾದರೆ ಮಗಳು ಇಲ್ಲವೆಂಬ ದುಃಖ. ತನ್ನ ಒಡವೆಗಳನ್ನು ಸಂಸಾರಕ್ಕಾಗಿ ಕಳೆದುದು ತಪ್ಪೆಂದು ಆಕೆಗೆ ಆಗ ಅನ್ನಿಸುತ್ತವೆ. ತನಗೆ ಮುದಿತನಕ್ಕೆಂದು ತನ್ನ ಗಂಡ ಕೊಂಚವೂ ತೆಗೆದಿಡದೆ ಈ ಗತಿಗೆ, ಈ ಕಷ್ಟಕ್ಕೆ ನೂಕಿದ್ದು ಮಹಾಪ್ರಮಾದವೆಂದುಕೊಳ್ಳುತ್ತಾಳೆ. ತಂದೆ ತಾಯಿ ಮಗ ಸೊಸೆ ಎಲ್ಲರಿಗೂ ಇದೊಂದು ನೀತಿಪಾಠ. ಕುಟುಂಬದಲ್ಲಿ ಹೆಣ್ಣಿನ ಸೊತ್ತು ಬೇರೆ ತೆಗೆದಿಡಬೇಕು. ಪ್ರತಿಯೊಂದು ಕುಟುಂಬದಲ್ಲಿಯೂ ಹೆಣ್ಣುಮಕ್ಕಳಿಗೆ, ಅಕ್ಕ ತಂಗಿಯರಿಗೆ, ಹೆಂಡತಿಗೆ, ಆಸ್ತಿವಿಭಾಗದಲ್ಲಿ ಲೆಕ್ಕಾಚಾರದಲ್ಲಿ ಕೆಲವೊಂದು ಪಾಲು ತೆಗೆದಿಡಬೇಕು. ಮಾತಾಪಿತೃಭಕ್ತಿಯುಳ್ಳ ವಿವೇಕಿಗಳಾದ ಹುಡುಗರೆಷ್ಟೋ ಜನ ಇದಾರೆ. ಆದರೆ ಈ ಹೊಸ ನಾಗರಿಕತೆಯ ಹೊಡೆತಕ್ಕೆ ಹೊಸ ಸಮಸ್ಯೆ, ಹೊಸ ಸನ್ನಿವೇಶ, ಹೊಸ ವಿಚಾರ ತೇಲಿಬಂದಿವೆ. ಅವಕ್ಕೆ ಹೊಸ ರಾಮಬಾಣೌಷಧಿ ಬೇಕು.

೬

# ಮಗಳು

ಈ ಹೆಣ್ಣುಮಕ್ಕಳನ್ನೇಕೆ ಇಷ್ಟು ಪ್ರೀತಿಯಿಂದ ಬೆಳೆಸುತ್ತಾಇದೀರಿ?'' ಹಿರಿಯರೊಬ್ಬರು ಗ್ರಂಥಕರ್ತನನ್ನು ಕೇಳಿದರು. "ಈ ಹುಡುಗಿಯರು ಮನೆಬಿಟ್ಟು ಹೋಗುವುದಲ್ಲದೆ ನಮಗೆ ಅದು ಕೊಡಲಿಲ್ಲ ಇದು ಕೊಡಲಿಲ್ಲ ಎಂದು ಹೀನಯಿಸುತ್ತಾರೆ.''

''ಇಷ್ಟೇಯೆ ನಿಮ್ಮ ಆಕ್ಷೇಪಣೆ? ನೀವು ಅವರನ್ನು ದೂರುವ ಮೊದಲು ಅವರಿಗೆ ನಿಮ್ಮ ಮೇಲೆ ಏನಾದರೂ ದೂರು ಇದೆಯೇನೋ ನೋಡಿ. ನಿಮ್ಮ ಆಸ್ತಿಯನ್ನೆಲ್ಲ ನಿಮ್ಮ ಪ್ರೀತಿ ಮಕ್ಕಳಿಗೆ ಕೊಟ್ಟು ಹುಡುಗಿಯರಿಗೆ ಏನೂ ಇಲ್ಲದಂತೆ ಮಾಡುತ್ತೀರಲ್ಲ. ಅದು ಸರಿಯೆ?"

''ಅದು ನಿಜ. ಆದರೆ ಅವರು ಬೇರೆ ಕುಟುಂಬಕ್ಕೆ ರಾಣಿಯರಾಗುತ್ತಾರೆ. ಆ ಮನೆತನದ ಸುಖದುಃಖಗಳನ್ನು ಅವರು ಅನುಭವಿಸಬೇಕು."

"ಸರಿ. ಆದರೆ ಅವರಿಗೂ ಕೊಂಚ ಆಸ್ತಿ, ತಮ್ಮದು ಎಂಬ ನಾಲ್ಕು ಒಡವೆ, ತಮ್ಮ ಕೈವೆಚ್ಚಕ್ಕಾಗಿ ನಾಲ್ಕು ಹಣ - ಇಷ್ಟು ವ್ಯವಸ್ಥೆ ಮಾಡಬೇಡವೆ?''

ನಿಮ್ಮ ಮಗಳಿಗೆ ವರ್ಷಕ್ಕೆ ಒಂದು ನೂರು ರೂಪಾಯಿ ಕೊಟ್ಟರೆ ಅದು ದುರುಪಯೋಗವಾಗುತ್ತದೆ ಎನ್ನಬಹುದೆ? ಒಂದು ಹೊಸ ಸೀರೆ ಕೊಂಡಾಳು. ಮಂಗಳೂರು ಮಾದರಿ ಬಳೆ ಮಾಡಿಸಲು ಅಕ್ಕಸಾಲೆಗೆ ನಾಲ್ಕು ಹಣ ಕೂಲಿ ಸಂದೀತು. ಯಾವಾಗಾದರೂ ಒಂದು ಉಂಡೆ ಉಣ್ಣೆದಾರವನ್ನು ಕೊಂಡಾಳು ಕಸೂತಿಗೆ. ಸ್ವಲ್ಪ ವಿದ್ಯೆ ಬಲ್ಲವರು ಚಿತ್ರ ಬರೆದಾರು, ವಾದ್ಯ ಬಾರಿಸಿಯಾರು; ಬಣ್ಣಕ್ಕೆ ನಾಲ್ಕು

ಹಣ, ತಂತಿಗೆ ನಾಲ್ಕುಹಣ ವೆಚ್ಚಮಾಡಿಯಾರು, ಆದರೂ ಹಿಂದೂ ಪುತ್ರಿಯರು - ಬಾಲ್ಯ ಕಳೆವ ಮೊದಲೇ ಸತಿಯರಾಗುವ, ಸುತೆಯ ಆಟಪಾಟ ಮುಗಿವ ಮೊದಲೇ ಸೊಸೆಯರಾಗುವ ಇವರು – ಸದ್ಗುಣ ವತಿಯರು, ಮಿತವ್ಯಯಿಗಳು, ಉತ್ತಮ ಗೃಹಿಣಿಯರು. ಅವರ ಲೌಕಿಕಜ್ಞಾನ ಅಸಾಧ್ಯವಾದುದು. ಇಂಗಿತಜ್ಞಾನ ಅಪಾರ. ಹೊಸ ಸನ್ನಿವೇಶ ಸಂದರ್ಭಗಳಿಗೆ ಸಮನಿಸಿಕೊಂಡು ನಡೆವ ಸ್ವಭಾವ ಅದ್ಭುತವಾದುದು.

ಸಾಧಾರಣವಾಗಿ ತಾಯಿಗೆ ಗಂಡುಮಕ್ಕಳ ಮೇಲೂ ತಂದೆಗೆ ಹೆಣ್ಣುಮಕ್ಕಳ ಮೇಲೂ ಪ್ರೀತಿ ಹೆಚ್ಚು. ಈ ರೂಢಿಗೆ ಮನಶ್ಶಾಸ್ತ್ರದ ಕಾರಣವೇನೋ ಗೊತ್ತಿಲ್ಲವಾದರೂ ಈ ವೈಚಿತ್ರ್ಯದ ಗುಟ್ಟನ್ನು ಅರಿಯುವ ಪ್ರಯತ್ನ ಮಾಡಬೇಕು. ತಂದೆತಾಯಿಗಳಲ್ಲಿ ಗಡುಸಾದವರು (ಮಿದುವಾದವರಿಗಿಂತ ಹೆಚ್ಚಾಗಿಯೇ) ಹೆಣ್ಣು ಗಂಡು ಎಲ್ಲ ಮಕ್ಕಳನ್ನೂ ಪ್ರೀತಿಸುತ್ತಾರೆ. ಆದರೆ ಹೆಣ್ಣು ಗಂಡಿನಲ್ಲಿ ಯಾರ ಮೇಲೆ ಹೆಚ್ಚು ಪ್ರೀತಿ ಎನ್ನುವ ಮಾತು ಬಂದರೆ, ಮಗಳು ಎಂಬ ಜೀವ ಬೇರೆಯೊಂದು ಮನೆತನದ ಕ್ಷೇತ್ರ, ಹೊಸದೊಂದು ಸೃಷ್ಟಿಯ ಮೂಲ ಶಕ್ತಿ ಎಂದು ತಾಯಿಗೆ ಅನಿಸುತ್ತದೆ ಮತ್ತಾವುದೋ ಹೊಸ ಪ್ರಪಂಚದಲ್ಲಿ ನಿಂತು ಅಲ್ಲಿಂದ ಜಗತ್ಸೃಷ್ಟಿಯನ್ನು ಮುಂದೆ ಸಾಗಿಸುವ ಶಕ್ತಿಸ್ವರೂಪಿಣಿ; ಈಗ ತಾಯಿಯಾದವಳು ಹಿಂದೆಯೆ ತನ್ನ ತೌರುಮನೆಯನ್ನು ಬಿಟ್ಟು ಬಂದ ಹಾಗೆ ಕಾಲಬಂದಾಗ ಮಗಳೂ ಬೇರೆಲ್ಲಿಗೋ ಪ್ರಸ್ಥಾನಮಾಡುತ್ತಾಳೆ. ತೌರುಮನೆಗಾಗಿ ಆಕೆ ಹಂಬಲಿಸುತ್ತಾಳೆಯೆ? ಇಲ್ಲ. ಅದೇ ರೀತಿ ಹೊಸದಾಗಿ ಅವತರಿಸಿದ ಮಗಳಿಗೂ ಅದೇ ಸಂಪ್ರದಾಯವನ್ನು ಕಲಿಸಬೇಕು; ಅವಳ ಮಗಳ ವಿಧಿಯೂ ಅಷ್ಟೆ. ಆದರೆ ತಂದೆಯ ಭಾವನೆ ವಿಚಾರಗಳೇ ಬೇರೆ. ತನಗೆ ಸೇವೆಮಾಡುವುದರಲ್ಲಿ ಹುಡುಗರಿಗಿಂತ ಇವಳೇ ಮೊದಲು. ತನ್ನ ಶುಶ್ರೂಷೆಗೆ ಇವಳು ಸದಾ ಸಿದ್ಧ; ಯಾವಾಗಲೂ ಅದೇ ದೃಷ್ಟಿ. ತನ್ನ ಮನೆಯಲ್ಲಿರುವವರೆಗೆ ಒಂದು ಕಾಸನ್ನೂ ಕೇಳುವವಳಲ್ಲ. ಇಂಥ

ಕುವರಿಯನ್ನು ಕಳಿಸಿಕೊಡಬೇಕೆಂದರೆ ತಂದೆಗೆ ನೋವು. ಅಂತೂ ಮಕ್ಕಳಲ್ಲಿ ಮಗಳೇ ತಂದೆಗೆ ಹೆಚ್ಚು ಬೇಕಾದವಳು, ತಂದೆಯನ್ನು ಹೆಚ್ಚು ಪ್ರೀತಿಸುವವಳು. ಈ ವಿವರಣೆ, ಈ ಅರ್ಥ ಓದುಗರಿಗೆ ಸರಿ ಕಾಣಲಿಕ್ಕಿಲ್ಲ. ಹಾಗಿದ್ದರೆ ಅವರಿದನ್ನು ಖಂಡಿಸಿ ಈ ಹಳೆಯ ಸಮಸ್ಯೆಯನ್ನು ಬಿಡಿಸುವ ಯತ್ನ ಮಾಡಲಿ.

ಈಗಿನ ಕಾಲದಲ್ಲಿ ಮದುವೆಯ ವಯಸ್ಸು ಬರುವತನಕ ಹೆಣ್ಣು ಮಕ್ಕಳನ್ನೂ ಗಂಡುಹುಡುಗರಂತೆಯೇ ನೋಡಿಕೊಳ್ಳುತ್ತಾರೆ. ಆಚಾರ ಸಂಪನ್ನರಾದವರ ಮನೆಯಲ್ಲಿ ಹುಡುಗಿಯರನ್ನು ಹತ್ತು ವರುಷವಾಗುವ ತನಕ ಓದಿಸಲು ಯಾವ ಅಭ್ಯಂತರವೂ ಇಲ್ಲ. ವರದಕ್ಷಿಣೆಗಳ ದರ ಏರಿರುವ ಈ ಕಾಲದಲ್ಲಿ ಗಂಡುಹುಡುಗರು ಕಾಲೇಜಿಗೆ ಸೇರುವವರೆಗೋ ಕಾಲೇಜು ಬಿಟ್ಟು ಬರುವವರೆಗೋ ಮದುವೆ ಮಾಡಿಕೊಳ್ಳದೆ ತಡೆದು ನಿಂತು, ತಮ್ಮ ಧಾರಣೆ ಹೆಚ್ಚಿಸಿಕೊಳ್ಳುತ್ತಾರೆ. ಇದರಿಂದ ಹುಡುಗಿಯರ ಮದುವೆಯ ವಯಸ್ಸೂ ಏರಿದೆ. ಸಂಘ ಸುಧಾರಣೆಯ ಮಹೋದ್ದೇಶದಿಂದೇನಲ್ಲವಾದರೂ ಆರ್ಥಿಕ ಕಾರಣಗಳಿಂದ ವ್ಯಾವಹಾರಿಕ ಅವಶ್ಯಕತೆಯಿಂದ ಬ್ರಾಹ್ಮಣ ಸಮಾಜದಲ್ಲಿ ಕೂಡ ಹುಡುಗಿಯರು ಮೈನೆರೆದ ಮೇಲೆಯೇ ಮದುವೆಮಾಡುವ ರೂಢಿ ಬಂದಿದೆ. ಹೆಣ್ಣುಮಕ್ಕಳೆಂದರೆ ಪಾಪಫಲ ಎನ್ನುವ ಹಾಗಾಗಿದೆ. ಮನಸ್ಸು ಹದಕ್ಕೆ ಬಂದು ಕೊಂಚ ನಿರಭಿಮಾನ ನಿರ್ಮಮತೆಗಳು ಅಭ್ಯಾಸವಾಗದಿದ್ದರೆ ಒಬ್ಬಳೇ ಮಗಳಾದರೂ ತಂದೆಯ ಪಾಲಿಗೆ ದೊಡ್ಡ ಭಾರ, ಚಿಂತೆಗೆ ಕಾರಣ. ಮಗಳಿಂದ ಹೊಸ ಸಂಬಂಧ ಸನ್ನಿವೇಶಗಳಿಗೆ ಕಾರಣವಾಗುತ್ತದೆ. ಪರರು ನಿಮ್ಮ ಬಳಗವಾಗಿ ಬಿಡುತ್ತಾರೆ. ಅವರ ಘನತೆ ಗೌರವಗಳಿಗೆ ಕುಂದಕ ಬಾರದಂತೆ ನೀವು ನಡೆದುಕೊಳ್ಳಬೇಕು. ನೀವು ಆಡಿದ ಮಾತು ಮಾತಿಗೂ ಅವರಿಗೆ ಅನುಮಾನ; ಮಾಡಿದ ಕೆಲಸದಲ್ಲಿ ಸಂಶಯ. ಯಾವುದೋ ಒಂದು ದಿನ ನಿಮ್ಮ ಅಳಿಯನ ತಂದೆಯ ಸೋದರಮಾವನ ಮಗನನ್ನು ಗೌರವವಾಗಿ ನಡೆಸಿಕೊಳ್ಳಲಿಲ್ಲ. ಬಹುಶಃ ನೀವು ನವರಾತ್ರಿಯಲ್ಲಿ ಅಳಿಯ

ನಿಗೆ ಕೊಟ್ಟ ಉಡುಗೊರೆ ಅಂತಸ್ತಿಗೆ ಸರಿಯಾಗಿಲ್ಲ. ಹಣ, ನಡತೆ, ಉಡುಗೊರೆ, ಸಂಪ್ರದಾಯ, ಆಚಾರ, ಇಷ್ಟಪೂರ್ತಿ, ಇಂಗಿತಾನುಸರಣೆ - ಇಂಥ ಹಲವಾರು ಸಂದರ್ಭಗಳಲ್ಲಿ ಹೊಸದಾಗಿ ಬಳಗ ಬಳೆಯಿಸಿಕೊಂಡ ಕುಟುಂಬಗಳ ನಡುವೆ ಜಗಳ, ವಿರೋಧಗಳು ಬಂದುಬಿಡುತ್ತವೆ. ಕಾಲ ಕಳೆದಹಾಗೆ ಇವೆಲ್ಲವೂ ಮಾದುಹೋಗುತ್ತವೆ. ನಿಜವಾಗಿ ಜಗಳ, ಮನಸ್ತಾಪಗಳೇ ಇಲ್ಲದಿದ್ದರೆ ಆಶ್ಚರ್ಯವೆನಿಸುತ್ತದೆ. ಅನೇಕ ವೇಳೆ ಈ ಅನಿವಾರ್ಯವಾದ ಜಗಳಗಳಿಂದ ನಂಟತನ ಮತ್ತಷ್ಟು ದೃಢವಾಗುತ್ತದೆ, ಪ್ರೀತಿ ಬಲವಾಗುತ್ತದೆ. ಕೆಲವು ಸಲ ಬದುಕಿದಷ್ಟು ದಿನವೂ ನಿಲ್ಲುವ ಅಸಮಾಧಾನ, ಹಗೆತನಗಳು ಬೆಳೆಯಬಹುದು. ಇವೆಲ್ಲ ಅವರವರ ಸ್ವಭಾವಾನುಗುಣವಾಗಿ ನಡೆಯತಕ್ಕವು. ಈ ಪ್ರಪಂಚದಲ್ಲಿ ಸ್ವಭಾವ ವೈವಿಧ್ಯಕ್ಕೆ ಏನು ಕಡಮೆ ?

೭

# ಅಳಿಯ

ಮದುವೆಯಾದ ಮೇಲೆ ಮಗಳು ಅಳಿಯ, ಮಗ ಸೊಸೆ ದಾಂಪತ್ಯಾನುಭವಕ್ಕಾಗಿ ಎಲ್ಲಾದರೂ ಹೊರಟು ಹೋಗುತ್ತಾರೆ. ತಂದೆ ತಾಯಿಗಳಿಗೆ ಇವರು ಎಲ್ಲಿಗೆ ಹೋಗುತ್ತಾರೋ ಎಲ್ಲಿರುತ್ತಾರೋ ಏನೂ ಗೊತ್ತಾಗುವುದಿಲ್ಲ. ಆ ಪ್ರಕರಣ ಇವರಿಗೆ ಸಂಬಂಧಿಸಿದ್ದಲ್ಲ, ಹುಡುಗರದು. ಇದು ನಮಗೆ ತಿಳಿದ ಹಾಗೆ ವಿಲಾಯತಿಯ ಪದ್ಧತಿ. ಆದರೆ ಹಿಂದುಸ್ಥಾನದಲ್ಲಿ ಹಾಗಲ್ಲ. ಮದುವೆ ಆದ ಕೂಡಲೆ ಅಳಿಯ ಹಕ್ಕಿ ಮಾವನ ಮನೆ ಗೂಡಿಗೆ ಸೇರಿದಂತೆ. ಮಾವನೇ ತತ್ಕಾಲಕ್ಕೆ ಅವನಿಗೆ ತಂದೆಯಿದ್ದ ಹಾಗೆ. ಒಂದು ವರುಷದ ದಿನ ಮನೆಯಲ್ಲಿ ಹಬ್ಬ ಹರಿದಿನವಾದರೆ ಅವನನ್ನು ಕರೆಯುತ್ತಾನೆ; ಒಳ್ಳೊಳ್ಳೆ ಉಡುಗೊರೆ

ಕೊಡುತ್ತಾನೆ; ಪ್ರಥಮ ವರ್ಷದಲ್ಲಿ ಮಾಡಬೇಕಾದ ವಿಧ್ಯುಕ್ತ ಸಂಪ್ರದಾಯಗಳನ್ನೆಲ್ಲ ಆಚರಿಸುತ್ತಾನೆ. ಅನುಕೂಲವಂತರ ಮನೆಯಲ್ಲಾದರೆ ಭಾದ್ರಪದಮಾಸದಲ್ಲಿ ಅಳಿಯನಿಗೆ ಬೆಳ್ಳಿ ಮಸಿಕುಡಿಕೆ ಬೆಳ್ಳಿ ಲೇಖನಿಗಳನ್ನು ಕೊಡುತ್ತಾನೆ. ಶ್ರಾವಣಮಾಸದಲ್ಲಿ ಬೀಗರು ಸೊಸೆಗೆಂದು ಕಳಿಸಿದ ಉಡುಗೊರೆಗೆ ಇದು ಮುಯ್ಯಿ. ಎರಡನೆ ವರ್ಷ ಅಳಿಯ ಮಾವನ ಮನೆಯಲ್ಲಿ ಕೊಂಚವಾಗಿ ಬೇರುಬಿಡುತ್ತಾನೆ. ಭಾವಮೈದನರ ಜೊತೆಗೆ ಸ್ನೇಹ ಬೆಳೆಸುತ್ತಾನೆ. ಅವರಿಗೆ ಇವನು ಸಂಪ್ರದಾಯಸಿದ್ಧವಾಗಿ ಸಿಕ್ಕ ಕುಚೇಷ್ಟೆಯ ವಸ್ತು. ಇವನನ್ನು ನಾನಾರೀತಿಯಲ್ಲಿ ಗೇಲಿಮಾಡುತ್ತಾರೆ. ಇವನಿಗೆ ಒಬ್ಬ ಎಳೆಯ ನಾದಿನಿಯೂ ಇದ್ದಾಳೆ. ಹೆಂಡತಿಯ ಗಮನವನ್ನು ಸೆಳೆಯಲು ಇವಳು ಒಂದು ಸಾಧನ. ಆ ಆಸೆಯಿಂದ ಅವಳೊಡನೆ ಸಲಿಗೆ ಬೆಳೆಸುತ್ತಾನೆ. ಕ್ರಮವಾಗಿ ತನಗೂ ತನ್ನ ಪುಟ್ಟರಾಣಿಗೂ ನಡುವೆ ದೌತ್ಯಕ್ಕಾಗಿ ಅವಳನ್ನು ಉಪಯೋಗಿಸುತ್ತಾನೆ. ಆ ಪುಟ್ಟ ಅರಸಿಗೆ ಸದಾ ಅವನ ಕಡೆಯೇ ಕಣ್ಣು. ಆದರೆ ಇವನು ಅವಳ ಹತ್ತಿರ ಸೇರಿ ಮಾತಾಡಬೇಕೆಂದನೋ ಅವಳು ಅಲ್ಲೇ ಅದೃಶ್ಯ. ಎಷ್ಟೇ ಹಳೆಯ ಅಳಿಯನಾದರೂ ಪ್ರತಿವರ್ಷವೂ ಹೊಸ ಪಂಚೆ ಜೊತೆಯನ್ನು ಕಳಿಸುವುದು ದಕ್ಷಿಣ ದೇಶದಲ್ಲಿ ಮಾವನ ಮನೆಯ ಸಂಪ್ರದಾಯ ಆಂಧ್ರ ದೇಶದಲ್ಲಿ ಮದುವೆಯಾದ ಎರಡು ಮೂರು ವರ್ಷಕ್ಕೇ ಈ ಆಚಾರ ನಿಲ್ಲುತ್ತದೆ.

ಹೊಸದಾಗಿ ಬಂದ ಇಂಗ್ಲಿಷು ವಿದ್ಯಾಭ್ಯಾಸವೂ ಪರಿಣತನಾದ ವರನಿಗೆ ಸಲ್ಲಬೇಕಾದ ದಕ್ಷಿಣೆಯ ದರವೂ ಎಷ್ಟೋ ಜನ ಮಾವಂದಿರಿಗೆ ಮಗಳ ಮದುವೆಗಾಗಿ ಆಗಿನ ಪೂರ್ತಿ ಸಾಲವಲ್ಲದೆ, ಮುಂದಕ್ಕೂ ಭಾರವಾದ ಸಾಲದ ಹೊರೆಯನ್ನೇ ಹೊರಿಸಿ ಬಿಡುತ್ತವೆ. ಆಂಧ್ರ ದೇಶದ ಮದುವೆಗಳಲ್ಲಿ 'ಮುನಿಸಿನ ನಲುಗು' ಎಂಬ ರೂಢಿಯಿದೆ. ಅಳಿಯನಿಗೆ ಮದುವೆಯಲ್ಲಿ ಸಿಟ್ಟು ಬರಬೇಕು, ಅದನ್ನು ಮಾವ ತೀರಿಸಬೇಕು. ಆ ಸಂದರ್ಭದಲ್ಲಿ ಕೋಪ ಶಾಂತಿಗಾಗಿ ಇವರು ಮೇರೆ

ಮಾರಿ ಕೇಳಿದ ಮಾತನ್ನೆಲ್ಲ ಮಾವನಾದವನು ದೂರಾಲೋಚನೆಯಿಲ್ಲದೆ ನಡೆಸಲು ಒಪ್ಪುವುದು. ಆಗ ಕೊಟ್ಟ ಮಾತನ್ನು ಮುಂದೆ ನಡೆಸ ಬೇಕಾದಾಗ ಮೋಟಾರುಬೈಸಿಕಲ್ಲೋ ಮೋಟಾರೋ ಕೆಲವು ಎಕರೆ ಜಮೀನೋ ಅಂತೂ ಅವನ ಮನೆ ಮುಳುಗಬೇಕು. ಮುಖ್ಯವಾಗಿ ಆ ಮಾತನ್ನು ನಡೆಸುವ ಯೋಗ್ಯತೆಯೂ ಇಲ್ಲ, ಇಷ್ಟವೂ ಇಲ್ಲ. ಇತ್ತ ಅಳಿಯದೇವರು ನಿಜವಾಗಿಯೂ ಮುನಿದು ಹಲ್ಲು ಮಸೆಯುತ್ತ ಹೆಂಡತಿ ನಿಷೇಕಕ್ಕೆ ಎದಗುವವರೆಗೆ ಕಾಯುತ್ತಾನೆ. ಆಗ ಎಲ್ಲವನ್ನೂ ಕಕ್ಕಿಸದೆ ಅವನು ಶೋಭನದ ಕೊಠಡಿಗೆ ಕಾಲಿಟ್ಟರೆ ಅಲ್ಲವೆ! ಇದ ರಿಂದಾಗುವ ಅನರ್ಥ ಅಷ್ಟಿಷ್ಟಲ್ಲ. ಎಷ್ಟೋ ಮನೆ ಮುರಿದಿವೆ; ಸುಖ ಮಣ್ಣು ಪಾಲಾಗಿದೆ. ಅರಿಯದೆ ಹಸುಳೆಯರನ್ನು ನಿರ್ದಯೆ ಯಿಂದ ಗಂಡಂದಿರು ಬಿಟ್ಟಿದಾರೆ. ಅದರಿಂದ ಸಾವಿರ ಸಂಕಟ ಸಾವಿರ ಸಮಸ್ಯೆ ಬಗೆಹರಿಸಲಾರದಂತೆ ಏಳುತ್ತವೆ. ಎಷ್ಟೋ ಮಂದಿ ಬಾಲ ಸತಿಯರು ಏಟಿಗೆ ತಾಳಲಾರದೆ ಕೆರೆ ಬಾವಿಯ್ಹ ತಳ ಕಂಡಿದಾರೆ. ಅನೇಕರಿಗೆ ತಂದೆತಾಯಿಗಳನ್ನು ನೋಡದಂತೆ ಅಷ್ಟದಿಗ್ಬಂಧನವಾಗು ತ್ತದೆ. ಈ ಚಿತ್ರ ಬಹಳ ಭೀಕರವಾಗಿದೆ. ಅಂತಲೇ ಸಾಮಾನ್ಯ ವಾಗಿ ಕಂಡುಬರುವುದಿಲ್ಲ. ತೆಲುಗು ನಾಡಿನಲ್ಲಂತೂ ಅಪರೂಪ. ನೆರೆನಾಡವರ ಬಗ್ಗೆ ಹೇಳಲು ನನಗೆ ಅಧಿಕಾರ ಸಾಲದು.

ಕಾಲಕಳೆದಂತೆ ಬಾಳಿನ ಒಡಕು ಮುಚ್ಚಿಕೊಳ್ಳುತ್ತವೆ. ಎರಡೂ ಕಡೆಯಲ್ಲಿ ಸ್ವಭಾವ ದೋಷಗಳು ಸರಿಯಾಗುತ್ತ ಬರುತ್ತವೆ. ಅಥವಾ ಅಳಿಯನೇ ಆದರ್ಶ ಪುರುಷನಾಗಿ ಮಾವನ ಮನೆಗೆ ಹೊಂದಿಕೊಂಡು ಕಿರಿ ವಯಸಿನ ಅತ್ತೆಗೆ ಅಚ್ಚುಮೆಚ್ಚಾಗಿ, ದಿನದಿನಕ್ಕೆ ಬೆಳೆದು ಬರು ತ್ತಿರುವ ಮಡದಿಯ ಮೋಹಕ್ಕೆ ಸೋತು ರಜೆಯ ದಿನಗಳನ್ನು ಅತ್ತೆಯ ಮನೆಯಲ್ಲೇ ಕಳೆಯುತ್ತ ತಂದೆತಾಯಿಗಳಿಗೇ ಬೇಸರವುಂಟು ಮಾಡ ಬಹುದು. ನಾದಿನಿಯರ ಸೇವೆ, ಅತ್ತಿಗೆಯರ ಸರಸ, ಮೈದುನರ ಹಾಸ್ಯ ಎಲ್ಲವೂ ಆತನ ಮನಸ್ಸನ್ನು ಎಳೆಯುತ್ತವೆ. ಅತ್ತೆಯೋ ಈಗ ಗೋಡೆಯ ಆ ಬದಿಗೆ, ಮರುಗಳಿಗೆ ಎರಡೇ ಹೆಜ್ಜೆ ಹತ್ತಿರ;

ಕೊಂಚ ಸಲಿಗೆ, ಕೊಂಚ ಬಿಗುವು. ಕೆಲವು ದಿನಗಳಲ್ಲಿ ನಾದಿನಿಯ ಮದುವೆಯಾಗಬೇಕು. ಆಗ ಅಳಿಯನೆ ಮಾವನ ಹಿರಿಯ ಮಗ ನಾಗುತ್ತಾನೆ. ಮದುವೆಯ ಏರ್ಪಾಡಿನ ಮೇಲ್ವಿಚಾರಣೆ ಇವನದು; ಬಂಧುಮಿತ್ರರನ್ನು ಕರೆವವನು, ಬಂದವರನ್ನು ಬರಮಾಡಿಕೊಳ್ಳು ವವನು, ತಾಂಬೂಲ ಚಂದನ ಕೊಡುವವನೂ ಇವನೇ. ಮೈದುನರು ಎಳೆಕರಾಗಿದ್ದಾಗ ಎಲ್ಲ ರೀತಿಯಲ್ಲೂ ಅಳಿಯನೇ ಮಾವನ ಬಲಭುಜ. ಮಾವನಿಗೇನಾದರೂ ಅಕಸ್ಮಾತ್ ಅಪಾಯವಾಯಿತೋ ಆ ಸಂಸಾರ ವೆಲ್ಲ ಇವನ ತಲೆಯ ಮೇಲೆಯೇ. ನಾದಿನಿಯರ ಮದುವೆ, ಮೈದು ನರ ಓದು, ಸಂಸಾರ ನಿರ್ವಹಣ—ಎಲ್ಲಕ್ಕೂ ಇವನು ದುಡಿಯಬೇಕು. ಒಂದು ಮಾತಿನಲ್ಲಿ, ಮಾವನ ಮನೆಗೇ ಹೊಂದಿಕೊಂಡು ಅಳಿಯನಲ್ಲ, ಮಗನಾಗುತ್ತಾನೆ ಆ ಮನೆಗೆ. ಪಡೆಯಲಲ್ಲ, ದುಡಿಯಲು ಮಗ.

೮

## ಸೊಸೆ

ಹಿಂದೂ ಜನರಲ್ಲಿ ಸೊಸೆಯಿಲ್ಲದ ಮನೆ ಪಾಳು; ಮಕ್ಕಳಿಲ್ಲದ ಮನೆ ಮನೆಯೇ ಅಲ್ಲ. ವಂಶ ಬೆಳೆಯಬೇಕಾದರೆ ಸೊಸೆಯೇ ದಾರಿ. ಆದ್ದರಿಂದ ವಂಶೋದ್ಧಾರಿಣಿಯಾದ ಸೊಸೆ ಮನೆಗೆ ಬರುವಾಗ ಕುಟುಂಬದವರಿಗೆಲ್ಲ ಸಂಭ್ರಮವೋ ಸಂಭ್ರಮ. ವಧುವು ಕನ್ಯೆ, ಎಳೆ ಕುವರಿಯಿರಬಹುದು. ಆದರೂ ಬೆಳೆದು ಬಂದ ಪತ್ನಿಗಿದ್ದಷ್ಟೇ ಈಕೆಗೂ ಗೌರವ. ಪ್ರೌಢೆಯಾದ ವಧುವಿಗೆ ಇಷ್ಟು ಮಮತೆ ಆದರ ದೊರೆಯುವುದು ಕಷ್ಟ. ಮದುವೆ, ಶೋಭನ, ಸಂಸಾರ—ಒಡ ನೆಯೆ ಎಲ್ಲರಂತೆ ಅವಳೂ ಒಬ್ಬ ಗೃಹಿಣಿಯಾಗಿ ಹೋಗುತ್ತಾಳೆ. ಆದರೆ ಹಿಂದೂ ಸಂಪ್ರದಾಯಕ್ಕನುಸಾರವಾಗಿ ಬಾಲ್ಯದಲ್ಲೇ ಮದುವೆ

ಯಾಗಿ ಬಂದ ವಧುವು ಮನೆಗೆ ಬಂದರೆ ಒಂದು ವೈಭವ. ಅತ್ತೆ ಮಾವಂದಿರಿಗೆ ಉಡುಗೊರೆ, ಅತ್ತಿಗೆ ನಾದಿನಿಯರಿಗೆ ಅರಿಸಿಣ ಕುಂಕುಮ, ಫಲವಸ್ತ್ರಗಳನ್ನು ತರುತ್ತಾಳೆ. ಗಂಡನ ಮನೆಗೆ ಆ ಹುಡುಗಿ ಬಂದರೆ ಊರಿನವರಿಗೆಲ್ಲ ಅದೊಂದು ಹಬ್ಬ; ಮಹಾ ಸಮಾರಂಭ. ಆ ಸಡಗರ ನಿಶ್ಶಬ್ದವಾಗಿ ಆಗಕೂಡದು. ಓಲಗ ಮದ್ದಲೆ ಆಗಬೇಕು. ಊರಿನವರಿಗೆಲ್ಲ ಯಥಾಶಕ್ತಿ ದಾನ ನೀಡಬೇಕು. ಮೊದಲ ಸಲಕ್ಕೆ ಹುಡುಗಿಯ ಜೊತೆಗೆ ಅಕ್ಕಅತ್ತಿಗೆಯರೋ ಅತ್ತೆ ಚಿಕ್ಕಮ್ಮಂದಿರೋ ಬರುತ್ತಾರೆ. ಹತ್ತು ಹನ್ನೆರಡು ವರುಷದ ಆ ಹುಡುಗಿಗೆ ಮಾವ ಅತ್ತೆ ತೋರಿಸುವ ಆದರವೆಷ್ಟು; ಆವಳ ಬರವಿನ ಉತ್ಸವಕ್ಕಾಗಿ ನಡೆವ ಗದ್ದಲ್ಲವೆಷ್ಟು; ಹುಡುಗಿಗೆ ಏನಲಂಕಾರ; ಊರಿನವರಿಗೆಲ್ಲ ಅವಳನ್ನು ತೋರಿಸುವ ಸಡಗರವೇನು! ಆಕೆ ಮನೆಗೆ ಬಂದ ದಿನ ಎಲ್ಲವೂ ಮಂಗಳಮಯ, ಆನಂದೋತ್ಸಾಹಪೂರ್ಣ. ಆ ಹಳ್ಳಿಗೇ ಒಂದು ಹೊಸ ಜೀವ ಬಂದಂತೆ, ಹೊಸ ಶಕ್ತಿ ಬಂದಂತೆ. ಎಲ್ಲರೂ ಮನೆಗೆ ಬರುವವರೇ. ಆಳುಗಳೆಲ್ಲ ಬರುತ್ತಾರೆ. ಎಲ್ಲೆಲ್ಲೂ ಆನಂದ.

ಹೊಸದಾಗಿ ಬಂದ ಈ ಹುಡುಗಿ ಪೂರಾ ಮನೆಯವಳಾಗಬೇಕಾದರೆ ಮೂರು ನಾಲ್ಕು ವರ್ಷವಾದರೂ ಬೇಕು. ಆಗ ನಿಷೇಕಪ್ರಸ್ತ ಸಮಾರಂಭ. ಕೆಲವು ದೇಶಗಳಲ್ಲಿ ಈ ಉತ್ಸವ ಹುಡುಗಿಯ ಮನೆಯಲ್ಲಿ—ಅಂದರೆ ತವರಿನಲ್ಲಿ-ನಡೆಯುತ್ತದೆ. ಕೆಲವು ಕಡೆ ಹುಡುಗನ ಮನೆಯಲ್ಲಿ ನಡೆಯುತ್ತದೆ. ಮಂತ್ರಪಾಠ, ಅಗ್ನಿಯ ಉಪಾಸನೆ, ಋತುಶಾಂತಿ, ವಿವಾಹಮಂತ್ರ ಇವೆಲ್ಲ ಈ ಉತ್ಸವವನ್ನು ಇಂದ್ರಿಯ ಸೀಮೆಯಿಂದ ಮೇಲಕ್ಕೆ, ಧಾರ್ಮಿಕಪ್ರಾಂತಕ್ಕೆ ಒಯ್ಯುತ್ತದೆ. ಇದು ಸಾಮಾಜಿಕ ಉತ್ಸವವೂ ಅಲ್ಲ ಕ್ರೀಡಾವಿನೋದವೂ ಅಲ್ಲ; ಧರ್ಮಕಾರ್ಯ. ವಧೂವರರ ಮನಸ್ಸು ತಮ್ಮ ತಮ್ಮ ಸುಖಕ್ಕಿಂತ ದೈವದ ಕಡೆಗೆ ಹರಿಯುತ್ತಿರುತ್ತದೆ. ರಾತ್ರಿಗೆ ಸುಸ್ವಾಗತವೇ. ಗಂಡನ ಬಳಿ ಹೇಗೆ ನಡೆದುಕೊಳ್ಳಬೇಕೆಂಬುದನ್ನು ವಧುವಿಗೆ ಕಲಿಸುತ್ತಾರೆ. ಅತಿ

ನಾಚಿಕೆಯೂ ಕೂಡದು, ಅತಿ ಸಲಿಗೆಯೂ ಸಲ್ಲದು. ಕೆಲವು ವೇಳೆ ಹುಡುಗಿ ತನ್ನ ಜವಾಬ್ದಾರಿಯನ್ನು ಹೇಗೆ ನಿರ್ವಹಿಸುತ್ತಾಳೆಂಬುದನ್ನು ತಿಳಿಯಲು ಬಾಗಿಲ ಸಂದಿಯಿಂದಲೋ ಮತ್ತೆಲ್ಲಿಂದಲಾದರೂ ಇಣಿಕಿ ಹಾಕಿ ನೋಡುತ್ತಾರೆ ಹಿರಿಯರು. ಈಗ ಈ ಆಚಾರ ಕಡಮೆಯಾಗಿದೆ. ನಿಷೇಕ ಗೃಹದಲ್ಲಿ ನಾನಾ ಬಗೆಯ ತಿನಸನ್ನು ಇಡುತ್ತಾರೆ. ಮುಹೂರ್ತಕ್ಕೆ ಮೊದಲು ಕೆಲವು ಜನ ದಂಪತಿಗಳು ನಿಷೇಕಗೃಹದೊಳಗೆ ಹೋಗಿ ಮಂಚದ ಮೇಲೆ ಗಂಡ ಹೆಂಡತಿ, ತಾವು ಪರಸ್ಪರಾಭಿಮುಖವಾಗಿ ಕುಳಿತು ಸೋತವ ದಂಪತಿಗಳಿಂದ ಫಲ ತಾಂಬೂಲವನ್ನು ತೆಗೆದುಕೊಳ್ಳುತ್ತಾರೆ. ಅತ್ತಿಗೆ ನಾದಿನಿಯರಿಗೆ ಇದೊಂದು ಸುಸಮಯ ವಧುವನ್ನು ಪರಿಹಾಸ್ಯ ಮಾಡಲಿಕ್ಕೆ. ಒಮ್ಮೊಮ್ಮೆ ಈ ಪರಿಹಾಸ ಬಹಳ ದೂರ ಹೋಗುತ್ತದೆ. ಉತ್ಸವದ ಮರುದಿನ ಕಳೆದ ಮೇಲೆ ದಂಪತಿಗಳು ಸಂಚಾರಿಗಳಾಗುತ್ತಾರೆ.

ಆಮೇಲೂ ಹೆಂಡತಿ ಗಂಡನೊಂದಿಗೆ ಎಲ್ಲರೆದುರಿಗೆ ಮಾತಾಡಬಾರದು. ದೃಷ್ಟಿಯಿಟ್ಟು ನೋಡಬಾರದು. ಮಾವ, ಭಾವ ಮೊದಲಾದವರು ಬಂದಾಗ ಮರ್ಯಾದಾರ್ಥವಾಗಿ ಎದ್ದು ನಿಲ್ಲಬೇಕು. ಈ ರೂಢಿಯನ್ನು ಅತಿಯಾಗಿ ಮಾಡಿದರೆ—ಕೆಲವರು ಮಾಡುವುದೂ ಉಂಟು —ಈ ಎದ್ದು ನಿಲ್ಲುವ ಪ್ರಕರಣವು ಕಠಿಣಶಿಕ್ಷೆಯೇ ಆಗುತ್ತದೆ. ಆದರೆ ಈಗ ಅವೆಲ್ಲ ಹೋಗುತ್ತಿವೆ. ಕಾಲ ಬದಲಾಗುತ್ತಿದೆ. ಮೊದಲಿನ ಹಾಗೆ ಹೆಂಡಂದಿರು ಲಜ್ಜಾವತಿಯರಾಗಿ ಮೂಲೆ ಸೇರುವ ಅಂಜುಗುಳಿ ಹರಿಣಿಯರಲ್ಲ. ಈಗ [illegible] ಒಂದು ಕೋಣೆ. ಅಲ್ಲಿ ಅವಳಿಗೆ ಅವಳ ಗಂಡನಿಗೆ ಮಾತ್ರವೇ ಪ್ರವೇಶ. ಅದರಲ್ಲಿ ಅವಳ ತಂದೆ ಕೊಟ್ಟ ಬೀರು ಬಂದಿರುತ್ತದೆ ಅವಳಿಗೆ ಉಡಲು ಸೀರೆ ಕೆಲವು ವರ್ಷಗಳವರೆಗೆ ಉಣಲು ತಟ್ಟೆ, ನೀರು ಕುಡಿಯಲು ತಂಬಿಗೆ ಕೊಡುವುದು ತವರುಮನೆಯವರ ಸಂಪ್ರದಾಯವಾಗಿದೆ. ಗಂಡನ ಮನೆಗೆ ಬಂದ ಕೆಲವು ಕಾಲದವರೆಗೂ ಅವಳಿಗೆ ಬೇಕಾದುದನ್ನು ತವರುಮನೆಯವರೇ ತೆಗೆದುಕೊಡುತ್ತಾರೆ.

ಹೊಸದಾಗಿ ಮನೆಗೆ ಬಂದಾಗ ಅತ್ತೆಗೂ ಅತ್ತಿಗೆಗೂ ಸೊಸೆಯನ್ನು ಕಂಡರೆ ಬಹಳ ಮುದ್ದು. ಈ ಸಂತೋಷ ಬಹಳ ಕಾಲ ನಿಲ್ಲುವುದಿಲ್ಲ. ಮೊದಲು ಗುಸಗುಸ, ಅಸಮಾಧಾನ ಪ್ರಾರಂಭವಾಗಿ ಟೀಕೆ, ದೂರು, ನಿಂದೆಗಳು ಬರುತ್ತವೆ. ಹುಡುಗಿ ಮೂಕಿ ಇಲ್ಲವೆ ಹರಟೆಮಲ್ಲಿ; ಅತಿ ಸೋಮಾರಿ ಇಲ್ಲವೆ ಗಂಡುರಾಮಿ. ಏನು ಮಾಡಿದರೂ ಟೀಕೆಯೋ, ಹೇಗಿದ್ದರೂ ಆಕ್ಷೇಪಣೆಯೋ. ಇದೆಲ್ಲ ಸರಿಹೋಗಲು ಕೆಲವು ಕಾಲ ಬೇಕು. ಮೊದಲನೆ ಸಲ ಬಂದಾಗ ಸೊಸೆ ಅತ್ತೆಯ ಮನೆಯಲ್ಲಿ ಬಹಳ ಕಾಲವಿರುವುದಿಲ್ಲ. ತಿಂಗಳೊಪ್ಪತ್ತಿನೊಳಗೆ ತವರು ಮನೆಗೆ ಹೊರಟು ಹೋಗುತ್ತಾಳೆ. ಒಂದೆರಡು ತಿಂಗಳು ತವರಿನಲ್ಲಿ ಕಳೆದು ಮತ್ತೆ ಅತ್ತೆಯ ಮನೆಗೆ ಬರುತ್ತಾಳೆ. ಆ ವರ್ಷವೆಲ್ಲ ಇವೆರಡೂ ಮನೆಗಳ ನಡುವೆ ಹಂಚಿಹೋಗುತ್ತದೆ. ಎಲ್ಲ ಹಬ್ಬಹುಣ್ಣಿವೆಗಳಿಗೂ ತವರಿಗೆ ಹೋಗಬೇಕು. ಅಲ್ಲಿಂದ ಹೊಸಹೊಸ ಉಡುಗೊರೆ ತರಬೇಕು. ಹೀಗೆ ಒಂದೆರಡು ವರ್ಷ ಕಳೆದರೂ ಆಕೆ ಬಸುರಾಗದಿದ್ದರೆ ತೀರಿತು, ಮನೆಯವರಿಗೆಲ್ಲ ದೊಡ್ಡ ಚಿಂತೆ. ಅಲ್ಲಿಂದ ದೇವರ ಸೇವೆ, ತೀರ್ಥಯಾತ್ರೆಗೆ ಆರಂಭ. ವಿದುರಾಶ್ವತ್ಥವೋ ಮತ್ತೊಂದೋ ಸೇವೆ ಆಗಬೇಕು. ಆಗ ಅವಳು ಬಸುರಾದಂತೆ ಗುಲ್ಲು, ಗದ್ದಲ. ಕೊನೆಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಪರೀಕ್ಷೆಮಾಡಿಸಿದರೆ ಬಸುರಲ್ಲ, ಗರ್ಭಕೋಶದ ಕಾಯಿಲೆ ಎಂದು ಅವರು ಔಷಧಿ ಕೊಡುತ್ತಾರೆ. ಅಂತೂ ಸೊಸೆ ಬಸಿರಾದಾಗ ಎಲ್ಲರಿಗೂ ಸಂತೋಷ. ಊರ ಹೆಂಗಸರೆಲ್ಲ ಸೇರಿ ಏನೇನೋ ಹಬ್ಬ ಉತ್ಸವಗಳನ್ನು ಮಾಡುತ್ತಾರೆ. ಚೊಚ್ಚಲು ಮರುಸಲು, ಎರಡೂ ಬಾಣಂತನ ತವರುಮನೆಯಲ್ಲೇ ನಡೆಯಬೇಕು. ನಾಮಕರಣ, ಅಗತ್ಯವಿದ್ದರೆ ಗ್ರಹಶಾಂತಿ, ನಡೆಯುತ್ತವೆ. ಇದೆಲ್ಲ ಆಗಿ ಮಗು ತಂದೆಯ ಮನೆಗೆ ಬಂದಾಗ ಈ ಪುಟ್ಟ ಮುತ್ತೈದೆಯೂ ಒಬ್ಬ ತಾಯಿ, ಒಬ್ಬ ಹೆಂಗಸು. ಬಹು ಬೇಗನೆ ಯಜಮಾನಿಯೂ ಆಗುತ್ತಾಳೆ. ಎರಡು ಮೂರು ಮಕ್ಕಳಾದ ಮೇಲೆ ಎಲ್ಲಾ ಒಂದು ಕ್ರಮವಾಗಿ ಬಿಡುತ್ತದೆ.

ಅವಿಭಕ್ತಕುಟುಂಬದಲ್ಲಿ ಅತ್ತಿಗೆ ನಾದಿನಿಯರು, ಓರಗಿತ್ತಿಯರು ಇರುವುದರಿಂದ ಹೊಸ ಸೊಸೆಗೂ ಅವರಿಗೂ ಚಿಲ್ಲರೆ ಮನಸ್ತಾಪಗಳು ಬರುವುದು ಸಹಜ. ಅತ್ತೆಯ ಸಂಗಡಲೂ ಜಗಳ ಬರುತ್ತದೆ. ಇವಳ ಹೊಸಕಾಲದ ಬೆಡಗನ್ನು ಅತ್ತೆ ಸೈರಿಸದೆ ಏನಾದರೂ ಟೀಕೆ ಮಾಡುತ್ತಾಳೆ. ಇವಳು ಸೀರೆಯುಡುವುದು ಸರಿಯಾಗಿಲ್ಲ. ಕಿವಿಯಲ್ಲಿ ಲೋಲಕ್ಕುಗಳು ವಿಕಾರವಾಗಿವೆ. ಮೈಮೇಲೆ ಕಾಸಿಗೆ ತರವಲ್ಲದ ಗಾಜಿನ ಒಡವೆಗಳು ಮುಖ್ಯವಾಗಿ ಅತ್ತೆ ಸೊಸೆಯರ ಜಗಳ ಅಧಿಕಾರದ ಪ್ರಶ್ನೆ, ಒಡೆತನದ ಜಗಳ. ನಿನ್ನ ಮಗನಾದರೇನು ನನ್ನ ಗಂಡ ಎಂದು ಸೊಸೆ. ನಿನ್ನ ಗಂಡನಾರು, ನನ್ನ ಮಗನೇ ಅಲ್ಲವೆ ಎಂದು ಅತ್ತೆ. 'ಮಗನನ್ನು ಪಡೆದು, ಅವನು ಅಂಬೆಗಾಲಿಟ್ಟಾಗ ತಪ್ಪು ಹೆಜ್ಜೆಯಿಟ್ಟಾಗ ನಾನು ಪಟ್ಟ ಪಾಡು ಎಷ್ಟು? ಈ ಹೊತ್ತು ಮನೆಗೆ ಬಂದ ಈ ಹೊಸ ಹೆಣ್ಣು ಅವನನ್ನು ತನ್ನವನು ಎನ್ನುತ್ತಾಳಲ್ಲ. ಮಗನೋ ನನ್ನೊಡನೆ ಮಾತೇ ಆಡನು. ಬಳಿಯೇ ಸುಳಿಯನು. ನಾನು ಬದುಕಿದೇನೋ ಸತ್ತಿದ್ದೇನೆಯೋ ಕೂಡ ವಿಚಾರಿಸನು. ಮಗಳಿಗೆ ಏನು ಉಡುಗೊರೆ ಕೊಡಬೇಕೆಂದು ನನ್ನನ್ನು ಕೇಳುವುದಿಲ್ಲ, ಆ ಹೊಸ ಹುಡುಗಿಯನ್ನು ಕೇಳುತ್ತಾನೆ. ನಾನು ಎಂದರೆ ಯಾರಿಗೂ ಬೇಡವಾಗಿದೆ' ಎಂದು ಆ ತಾಯಿ ಗೊಣಗುತ್ತಾಳೆ. 'ಎಷ್ಟಾದರೂ ನನ್ನ ಗಂಡ. ನನ್ನ ಯಜಮಾನ, ನನ್ನ ಮುದ್ದು, ಸಹಶಾಯಿ. ಆತನ ಸೇವೆ ನನಗೆ ಸೇರಿದುದು. ಆತನ ಭಾಗ್ಯ ನನ್ನದು. ಆತನೇ ನನ್ನ ಸರ್ವಸ್ವ' ಎನ್ನುತ್ತಾಳೆ ಸೊಸೆ. ಮಗ ಸೊಸೆಯರಲ್ಲಿ ಅನ್ಯೋನ್ಯ ಹೆಚ್ಚಿದಷ್ಟೂ ಈ ಮುದುಕಿಗೆ ಕೋಪ ಹೆಚ್ಚು. ಹುಡುಗಿಗೆ ಕೆಲಸ ಬಲವಾದಾಗ ಅವನ ತನಕ ದೂರು ಹೋಗುತ್ತದೆ. ದೂರದ ಮನೆಯಿಂದ ತಂದುಕೊಂಡ ಹೆಣ್ಣು, ನಿರ್ದಯೆಯಿಂದ ದುಡಿಸುವ ತಾಯಿ - ಇಬ್ಬರ ನಡುವೆ ಆ ಬಡಪ್ರಾಣಿ ದಿಕ್ಕುಗಾಣದವನಾಗುತ್ತಾನೆ. ಯಾರನ್ನು ಅಸಮಾಧಾನಗೊಳಿಸುವುದೂ ಕಷ್ಟ. ಗಂಡ ದುರ್ಬಲನಾದರೆ ಎಷ್ಟೋ ಸಲ ಹೆಂಡತಿ ಆತ್ಮಹತ್ಯೆಮಾಡಿಕೊಂಡ ಉದಾಹರಣೆ

ಗಳಿವೆ. ಗಂಡ ಗಟ್ಟಿಗನಾದರೆ ತಾನು ತನ್ನ ಹೆಂಡತಿ ಬೇರೆ ಸಂಸಾರವನ್ನೇ ಹೂಡಿದ ನಿದರ್ಶನಗಳೂ ಬೇಕಾದಷ್ಟು ಇವೆ. ಅತ್ತೆಯದು ಹೀಗಾದರೆ ಅತ್ತಿಗೆ ನಾದಿನಿಯರದೂ ಅಷ್ಟೇ ಗೋಳೇ. ಮನೆಯಲ್ಲಿ ಹುಟ್ಟಿದವಳು ತಾನು, ತಾನೇ ಯಜಮಾನಿಯಾಗಬೇಕು ಎಂಬುದು ಅವರ ಅಭಿಪ್ರಾಯ. ತಾನು ಮನೆಗೆ ರಾಣಿ, ಒಡೆತನ ತನ್ನದು ಎಂದು ಸೊಸೆಯ ಮನಸಿನಲ್ಲಿ. ಮನೆಗೆ ಹೊಸದಾಗಿ ಬಂದ ಹುಡುಗಿಗೂ ಮನೆಬಿಟ್ಟು ಹೋಗಲಿರುವ ಹುಡುಗಿಗೂ ಪೋಟಿ. ಕಡೆಕಡೆಗೆ ಓರಗಿತ್ತಿಯರ ಜಗಳ. ಹಿರಿಯ ಸೊಸೆ ಮನೆಗೆ ಬಂದು ಕೆಲವು ಕಾಲ ಪಳಗಿದಾಳೆ. ಕಿರಿಯ ಸೊಸೆ ತನಗೆ ಅಧೀನಳಾಗಿರಬೇಕು ಎಂದು ಅವಳ ತರ್ಕ. ಹೊಸ ರಕ್ತಕ್ಕೆ ಯಾರ ಅಧೀನತೆಯೂ ಒಗ್ಗದು. ಅದಕ್ಕಾಗಿ ಜಗಳ ಬರಬೇಕು. ಮಕ್ಕಳು ಹುಟ್ಟಿದ ಮೇಲೆ ಅಜ್ಜ ಅಜ್ಜಿಯರಿಗೆ ತೀರ್ಮಾನ ಹೇಳುವ, ಶಿಕ್ಷೆ ಕೊಡುವ ಕಚೇರಿಯನ್ನೇ ಮನೆಯಲ್ಲಿ ನಡಸಬೇಕಾಗುತ್ತದೆ. ಎಲ್ಲವೂ ಮನಸ್ತಾಪ, ಕಲಹಗಳಿಗೆ ಕಾರಣ. ಎಷ್ಟೋ ಸಲ ಹುಡುಗರನ್ನಾಡಿಸುವ, ಮನೆಗೆಲಸ ಮಾಡುವ ಆಳುಕಾಳಿಂದಲೇ ಜಗಳ ಹುಟ್ಟುತ್ತವೆ. ಸರಿ, ಕೆಲವು ಕಾಲ ಕಳೆಯುವುದರೊಳಗಾಗಿ ಕುಟುಂಬದಲ್ಲಿ ಭಾಗಗಳಾಗುತ್ತವೆ. ಹಸುಳೆಯಂತೆ ಮನೆಹೊಕ್ಕು, ನಾಚಿಕೆಯ ಪುತ್ಥಳಿಯಂತೆ ಇದ್ದ ಸೊಸೆ ಈಗ ತಾಯಾಗಿ ಬೆಳೆದು ಬಾಯಿಮಾಡುವ ಹಾಗೆ ಆಗುತ್ತಾಳೆ. ಅಷ್ಟೇ ಅಲ್ಲ: ಗಂಡನ ಹಕ್ಕಿಗಾಗಿ ಹೊಡೆದಾಡುವ ಹಾಗೆ ಆಗಿದಾಳೆ. ಕೆಲವರು ಪಾಲುವಿಭಾಗದ ಪಂಚಾಯಿತಿಯಲ್ಲಿ ಹೀಗೆ ಹೀಗೆ, ಅದರ ಬೆಲೆ ಇಷ್ಟು, ಈ ಭಾಗ ಹೀಗಾಗಬೇಕು ಎಂದು ಹೇಳುವಷ್ಟು ಪ್ರೌಢೆಯರಾಗಿರುತ್ತಾರೆ. ಅವಳಿಗೆ ಬುದ್ಧಿ ಬಂದಿದೆ, ಧೈರ್ಯ ಬಂದಿದೆ. ಹಿಂದೂ ಗೃಹದ ಪ್ರತಿಯೊಬ್ಬ ರಾಣಿಯೂ ಸೊಸೆಯಾಗಿ ತನ್ನ ಕಾಲವನ್ನು ಕಳೆದು ಗೃಹಿಣಿಯಾಗಿ, ಕುಟುಂಬದ ಅಧಿದೇವಿಯಾಗಿ ನಿಲ್ಲುತ್ತಾಳೆ.

೬

## ತಂದೆ

ಹಿಂದೂ ಕುಟುಂಬದಲ್ಲಿ ತಂದೆಗಿರುವಷ್ಟು ಜವಾಬ್ದಾರಿ, ತೊಂದರೆ ಯಾರಿಗೂ ಇಲ್ಲ. ಕುಟುಂಬಕ್ಕೆ ಹಿರಿಯ, ಹೊಲಮನೆಯ ಆಡಳಿತಗಾರ, ಮನೆಯ ಪಂಚಾಯತದಾರ, ಬೇಸಾಯಕ್ಕೆ ಯಜಮಾನ, ದನಗಳ ಹಿರಿಗೌಡ. ಓದಿಸಬೇಕಾದ ತಮ್ಮ, ಮದುವೆ ಮಾಡಬೇಕಾದ ತಂಗಿ ಅವನ ಪಾಲಿಗೆ ಇದಾರೆ. ಇವೆರಡರಲ್ಲೂ ಅವನ ತಾಯಿಯ ಮನವೊಲಿಸಿ ಕೆಲಸಮಾಡಬೇಕು. ಅನೇಕ ಸಂದರ್ಭಗಳಲ್ಲಿ–ಅಂಥವೇ ಬಹಳ–ಮಗಳನ್ನು ತಮ್ಮ ಯೋಗ್ಯತೆಗೆ ಮೀರಿ ಶ್ರೀಮಂತರ ಮನೆಗೆ ಕೊಡಬೇಕೆಂದೂ, ಕಿರಿಯ ಮಗನನ್ನು ಬಹಳ ಮೇಲಿನವರೆಗೂ ಓದಿಸಬೇಕೆಂದೂ ತಾಯ ಇಷ್ಟ. ಇದರಿಂದ ಮನೆತನಕ್ಕೆ ಮಿತಿಯಿಲ್ಲದ ವೆಚ್ಚ; ಸಾಲವಾಗುವ ಸಂಭವವೂ ಇದೆ. ಇವನೋ ಇತ್ತ ಪೂರ್ಣವಾಗಿ ಮನೆಯ ಯಜಮಾನನೂ ಅಲ್ಲ, ನೌಕರನೂ ಅಲ್ಲ. ಬರೀ ಗಂಡುದಿಕ್ಕು, ಅಷ್ಟೇ. ಇಷ್ಟೇಕೆ ಸಾಲವಾಯಿತು ಎಂದು ತಮ್ಮ ಕೇಳುತ್ತಾನೆ. ಆದದ್ದೇನೊ ಅವನ ಓದಿಗಾಗಿಯೆ. ತಂಗಿಯ ಇಷ್ಟ ಪೂರ್ತಿ ಮಾಡುವುದಂತೂ ಬಹಳ ನಾಜೋಕಾದ ಕೆಲಸ. ಅದಕ್ಕಾಗಿ ಸ್ವಂತ ವೆಚ್ಚವನ್ನು ಬಹಳ ಕಡಮೆಮಾಡಬೇಕಾಗಿ ಬರುತ್ತದೆ. ಇಲ್ಲದಿದ್ದರೆ ಬರುವ ಆದಾಯದಲ್ಲಿ ಮೇಳಗೂಡದು. ಅಲ್ಲದೆ ತಂಗಿಯ ವಿಷಯದಲ್ಲಿ ತಾಯಿಯದು ಬೇರೆ ಬಹಳ ಹಟ.

ಹಿಂದೂ ಅವಿಭಕ್ತ ಕುಟುಂಬದಲ್ಲಿ ಮಿತಾಕ್ಷರ ಧರ್ಮಶಾಸ್ತ್ರದ ಪ್ರಕಾರ ಎಲ್ಲರ ಯೋಗಕ್ಷೇಮವೂ ತಂದೆಯಾದವನಿಗೆ ಸೇರಿದುದು.

ತನ್ನ ಮಕ್ಕಳು, ತಮ್ಮಂದಿರ ಮಕ್ಕಳು, ಕಿರಿಯ ತಮ್ಮಂದಿರು ಇದ್ದರೆ ಅವರು ಎಲ್ಲರೂ ಇವನ ಪಾಲಿಗೇ. ಪರ ಊರಿಗೆ ಹೋದರೆ ಹಿಂದಿರುಗುವಾಗ ಏನಾದರೂ ತಿಂಡಿ ಪದಾರ್ಥವನ್ನು ಮಕ್ಕಳಿಗಾಗಿ ತರಬೇಕು. ತಂದರೂ ತನ್ನ ಮಕ್ಕಳಿಗೆ ಕೊಡಕೂಡದು. ಕೊಟ್ಟರೆ ಮನೆ ನರಕವಾದೀತು. ಮೊದಲು ತನ್ನ ತಮ್ಮನ ಮಕ್ಕಳಿಗೆ ಕೊಡಬೇಕು. ಅವರಿಗೇ ಮೊದಲ ಪಾಲು. ಹಾಗಾದರೇನೇ ಅವಿಭಕ್ತ ಕುಟುಂಬ ಅವಿಭಕ್ತವಾಗಿ ಉಳಿಯಬೇಕಾದರೆ. ಇಲ್ಲದಿದ್ದರೆ ಮೂರು ಘಳಿಗೆಯಲ್ಲಿ ಒಡೆದುಹೋದೀತು ಮನೆತನ. ಕೇವಲ ತಮ್ಮ ಮಕ್ಕಳಿಗಾಗಿಯೆ ಆಸ್ತಿಯನ್ನೆಲ್ಲ ಹಾಳುಮಾಡುತ್ತಿದಾರೆಂದೂ ಬಹಿರಂಗವಾಗಿ ಹೀಗೆ ಮಾಡುವವರು ಗುಟ್ಟಾಗಿ ಇನ್ನೂ ಏನು ಮಾಡುತ್ತಿದಾರೋ ಎಂದೂ ಭಾವನವರ ಮೇಲೆ ತಮ್ಮನ ಹೆಂಡತಿ ತನ್ನ ಗಂಡನಿಗೆ ಚಾಡಿ ಹೇಳುತ್ತಾಳೆ. ತವರು ಮನೆಯವರು ಕೊಟ್ಟದ್ದು ಎಂದು ಯುಗಾದಿ ದಿನ ಭಾವನ ಹೆಂಡತಿ ಉಟ್ಟುಕೊಂಡ ಹೊಸ ಸೀರೆ ಇವರೇ ಕೊಂಡು ತಂದಿರಬಹುದು. ಒಳಗೊಳಗೇ ಒಡವೆ ಮಾಡಿಸಿಕೊಂಡಿರಬಹುದು. ಹೀಗೆ ಅವಳ ದೂರು. ಅವಿಭಕ್ತ ಕುಟುಂಬಗಳಲ್ಲಿ ಮೋಸದಿಂದ ಸ್ವಂತಕ್ಕೆ ತೆಗೆದಿಟ್ಟುಕೊಂಡ ಹಣಕಾಸಿಗೆ ಸಾಧಾರಣವಾಗಿ ಈ ರೀತಿ ಒಂದು ತೆರೆ ಹಾಕಿ ಮುಚ್ಚಿಬಿಡುವುದೂ ಉಂಟು. ಆದರೆ ಆ ಕಾಲ ಇಲ್ಲದಾಗುತ್ತಿದೆ. ಹಳೆಯ ಕಾಲದ ಒಟ್ಟು ಕುಟುಂಬ ಒಡೆದು ಹೊಸ ಕಾಲದ ಸಣ್ಣಪುಟ್ಟ ಸಂಸಾರಗಳಿಗೆ ಎಡೆ ಸಿಗುತ್ತಿದೆ. ಹಳ್ಳಿಗಳನ್ನು ಬಿಟ್ಟು ಬಿಡುವುದು, ವಿದ್ಯೆಯಿಂದ ದೊರೆವ ಆರ್ಜನೆ, ಯಥೇಚ್ಛವಾಗಿ ಕೂಲಿಯಾಳುಗಳು ಸಿಗುವುದರಿಂದ ಹೊಲದ ಕೆಲಸಕ್ಕೆ ಪರಸ್ಪರ ಸಹಾಯದ ಅನಗತ್ಯ, ಹಣಕಾಸಿನ ದುರಾಶೆ, ಬೇಸಾಯದ ದುಃಸ್ಥಿತಿ, ಹೊಲಗಳ ವಿಭಜನೆ, ಹೊಸ ಹೊಸದನ್ನು ಸಾಧಿಸುವ ಆಶೆ—ಇವೆಲ್ಲ ಅವಿಭಕ್ತ ಕುಟುಂಬವನ್ನು ಮುರಿದು, ಆ ಪದ್ಧತಿಯಲ್ಲಿದ್ದ ಲೋಪಗಳನ್ನೆಲ್ಲ ನಿವಾರಿಸಿವೆ.

ತಂದೆಯಾದವನ ಇದಿರು ನಿಲ್ಲುವ ಸಮಸ್ಯೆಗಳು ಅನೇಕ, ವಿವಿಧ.

ತನ್ನ ಮಕ್ಕಳಿಗೆ ಎಂಥ ಶಿಕ್ಷಣ ಕೊಡಿಸಬೇಕು? ಕಾಲೇಜಿನ ಓದಿಗೆ ತೊಡಗಿದರೆ ಇದ್ದ ಬಿದ್ದ ಆಸ್ತಿಯೆಲ್ಲ ಕರಗಿ ಕಡೆಗೆ ಬೂದಿಯಲ್ಲಿ ಮಾಡಿದ ಹೋಮದಂತಾಗುವುದೆಂದು ಅವನಿಗೆ ಗೊತ್ತು. ಹಾಗೆಂದು ಆ ಶಿಕ್ಷಣ ವನ್ನು ಕೊಡಿಸದೆ ಇದ್ದರೆ ಬೇರೆ ಏನು ಮಾಡಬೇಕು? ಮುಂದೆ ಮಗ ಹೇಗೆ ಬದುಕಬೇಕು? ಓದು ಎಂದರೆ ಕೆಲಸಕ್ಕೆ ಮಾರ್ಗ ಎಂತಲೇ ತಂದೆಗೆ ಭ್ರಾಂತಿ. ಕೆಲಸ ಸಿಗದಿದ್ದರೆ ಇಲ್ಲ, ಕಡೆಗೆ ಮದುವೆಗೆ ಯೋಗ್ಯತೆಯಾದರೂ ಬೇಡವೆ? ಇಂಗ್ಲಿಷು ವಿದ್ಯೆಯಿಲ್ಲದೆ ಯಾರು ಹೆಣ್ಣು ಕೊಡುತ್ತಾರೆ? ಮಗಳ ಮದುವೆಗೂ ಅಷ್ಟೆ: ಹೀಗೆ ಮನೆಗಳು ಮುರಿದು ಸಂಸಾರ ಸಿಡಿದು, ಹಳ್ಳಿಗಳ ಶಾಂತಿಪೂರ್ಣವಾದ ತೃಪ್ತಿಯ ಜೀವನ ಮಾಯವಾಗಿ ಹೋಗಿದೆ.

೧೦

## ತಾಯಿ

ಸಂಪ್ರದಾಯವಾದಿಗಳೂ ಯಾತ್ರಿಕರಾದ ಪರದೇಶಿಗಳೂ ಹಿಂದೂ ಸ್ತ್ರೀಗೆ ಸ್ವಾತಂತ್ರ್ಯ, ಸರಿಯಾದ ಸ್ಥಾನಮಾನ ಇಲ್ಲವೆಂದೂ ಆಕೆಗೆ ಸದಾ ಪರದಾಸ್ಯವೇ ಗತಿಯೆಂದೂ ವರ್ಣಿಸಿದಾರೆ. ಆಕೆಯ ದೌರ್ಭಾಗ್ಯ! ಮಗುವಾದಾಗ ತಂದೆಯ ಅಧೀನ, ಮದುವೆಯಾದ ಮೇಲೆ ಗಂಡನ ಅಧೀನ, ವಿಧವೆಯಾದರೆ ಮಗನ ಅಧೀನ. ಅಂತೂ ಒಂದಿಲ್ಲ ಒಂದು ರೀತಿಯಲ್ಲಿ ಆಕೆಗೆ ಬಂಧನ ತಪ್ಪಿದ್ದಲ್ಲ. ಹೀಗೆ ಸದಾ ಆಕೆ ಖೈದಿಯೇ. ಜನರಲ್ಲಿ ಈ ತೆರದ ಅಭಿಪ್ರಾಯ ರೂಢಿಯಾಗಿ ಹೋಗಿದೆ. ಸ್ತ್ರೀ ಕೂಡ ಹಾಗೆಯೇ ನಂಬಿಕೊಂಡು ಕೂತಿದಾಳೆ. ತಲತಲಾಂತರವಾಗಿ ಈ ನಂಬಿಕೆ ಅವರಲ್ಲಿ ನಡೆದು ಬಂದಿದೆ.

ಆದರೆ ಇದು ಸತ್ಯವಲ್ಲ. ಗಂಡಸಿಗೂ ಹೆಂಗಸಿಗೂ ಅಂಥ ಭೇದವೇನೂ ಇಲ್ಲ. ಗಂಡು ಅರ್ಧನಾರಿ. ಹೆಣ್ಣು ಅರ್ಧಪುರುಷ.

ಅರ್ಥ ಎಂದರೆ ಲೆಕ್ಕಾಚಾರವಾಗಿ ಸೇರಿಗೆ ಅಚ್ಚೇರಲ್ಲ. ಗಂಡು ನೂರಕ್ಕೆ ಎಂಭತ್ತುಪಾಲು ಗಂಡು, ಉಳಿದ ಇಪ್ಪತ್ತುಪಾಲು ಹೆಣ್ಣು. ಹೆಣ್ಣೊ ಅಷ್ಟೆ; ಎಂಭತ್ತುಪಾಲು ಹೆಣ್ಣು, ಇಪ್ಪತ್ತುಪಾಲು ಗಂಡು. ಇದು ಶರೀರಸೃಷ್ಟಿಯ ಕ್ರಮ.

ಈಗ ಹೆಣ್ಣು ಗಂಡನ್ನು ವಿರೋಧಿಸುತ್ತಿದಾಳೆ. ಅಬಲೆ ಸಬಲನ ಅಧಿಕಾರವನ್ನು ಇದುರಿಸುತ್ತಿದಾಳೆ. ಈಗ ಹೆಣ್ಣಿನಲ್ಲಿ ಮೊದಲಿಗಿಂತ ಹೆಚ್ಚುಪಾಲು ಗಂಡುತನ ಬಂದಿದೆ. ಇದರಿಂದ ಹೆಣ್ಣಿನ ಸ್ಥಾನಮಾನ ಕೊಂಚ ಬದಲಾಗಲೇ ಬೇಕು. ಹೆಣ್ಣಿನ ಪರಾಧೀನತೆಯ ವಿಚಾರ ವನ್ನು ಸತ್ತರೂ ತಪ್ಪದ ಹಾಗೆ ಬೆಳೆಸುತ್ತಾರೆ. ಇದೆಲ್ಲ ಬರೀ ನಮ್ಮ ಭ್ರಾಂತಿ, ಕಲ್ಪನೆ. ಪರಾಧೀನತೆಯೆನ್ನುವುದು ಇಲ್ಲಿ ಏಕಪಕ್ಷೀಯವಲ್ಲ. ಹಿಂದೂ ಕುಟುಂಬದಲ್ಲಿ ಒಬ್ಬರು ಇನ್ನೊಬ್ಬರ ಆಳಲ್ಲ. ಇಬ್ಬರೂ ಪರಸ್ಪರಾಧೀನರು. ಅವರು ಇವರಿಗೆ, ಇವರು ಅವರಿಗೆ ಅಧೀನರು. ಹಾಗೆ ಅನ್ಯೋನ್ಯತೆಯಿಲ್ಲದೆ ಪರಸ್ಪರ ಪ್ರೀತಿ ಗೌರವಗಳಿರುವುದಿಲ್ಲ. ಗೌರವ, ಆದರ ಇದ್ದರೆ ಪ್ರೀತಿ. ಇಲ್ಲದಿದ್ದರೆ ಪ್ರೀತಿ ಹುಟ್ಟುವುದೇ ಇಲ್ಲ. ಹೆಣ್ಣು ಪರಾಧೀನಳು ಎಂದರೆ ಅದರ ಅರ್ಥ ಹಿಂದೂ ಗೃಹ ದಲ್ಲಿ ಈ ಅಧೀನತೆ ಪರಸ್ಪರವಾದುದು, ಒಂದು ಪಕ್ಷಕ್ಕೆ ಮಾತ್ರವೇ ಸೇರಿದ್ದಲ್ಲ ಎಂದು. ಹಿಂದೂ ವಿವಾಹಗಳ ಸೌಖ್ಯದ ರಹಸ್ಯ ಇದೇ. ಮದುವೆಯ ಪ್ರಕರಣದಲ್ಲಿ ಈ ಬಗ್ಗೆ ಹೆಚ್ಚಿಗೆ ಬರೆಯಲಾದೀತು.

ಮದುವೆಯಾಗಿ ಪ್ರಾರಂಭಕಾಲ ಕಳೆದು ಎರಡು ಮೂರು ಮಕ್ಕಳಾದಮೇಲೆ ಹೆಣ್ಣಿನ ಚಿಕ್ಕೆಗೆ ಏರುಕಾಲ. ಮನೆಯ ಯಜಮಾನ್ಯ, ಹಣಕಾಸಿನ ಲೆಕ್ಕಾಚಾರ ಆಕೆಯದು. ಮೊದಲು ಬರೀ ಲೆಕ್ಕ ಬರೆಯು ತ್ತಿದ್ದವಳು ಆ ಒಣಗೆಲಸವನ್ನು ಬಿಡುತ್ತಾಳೆ. ಲೆಕ್ಕ ಬರೆಯುವ ಕೆಲಸ ದಲ್ಲಿ ಉತ್ಸಾಹ ತಗ್ಗುತ್ತದೆ. ಒಂದು ಕಡೆ ಮಕ್ಕಳು ಎರಡನೆ ಕಡೆ ಮನೆಗೆಲಸ, ಇತ್ತ ಗಂಡ ಅತ್ತ ಲೆಕ್ಕ—ಇವೆಲ್ಲ ಸೇರಿ ತಾಯ ಕೆಲಸ ಬಹಳ ಕಷ್ಟವಾಗುತ್ತದೆ. ನಮ್ಮ ಹಗೆಗೂ ಬೇಡ ಈ ಕಷ್ಟ ಅನಿಸುವ ಹಾಗಾಗುತ್ತದೆ. ಇಷ್ಟು ಹೊತ್ತಿಗೆ ಯಜಮಾನನಿಗೆ ಆಕೆಯಲ್ಲಿ

ನಂಬಿಗೆ ಹುಟ್ಟುತ್ತದೆ. ಅವರ ಬಾಳಿನಲ್ಲಿ ತಾದಾತ್ಮ್ಯಭಾವ ತುಂಬಿ ಬರುತ್ತದೆ. ತಾವು ಮಾಡುವುದೆಲ್ಲ ಮಕ್ಕಳಿಗಾಗಿ ಎಂಬ ಭಾವ ಬರುತ್ತದೆ. ವಯಸ್ಸಾದ್ದರಿಂದ ಗಂಡನಿಗೆ ಹಣಕಾಸಿನ ಯಜಮಾನ್ಯ ಬೇಡವಾಗುತ್ತದೆ. ಇವೆಲ್ಲ ಕಾರಣಗಳಿಂದ ತಾಯೇ ಮನೆಯ ಯಜಮಾನಿಯಾಗುತ್ತಾಳೆ. ಈ ಯಾಜಮಾನ್ಯ ಬರೀ ಹಣಕಾಸಿನ ದಲ್ಲ. ಮಕ್ಕಳ ಮದುವೆಗಳಲ್ಲಿ ಸಾಧಾರಣವಾಗಿ ತಾಯಿಯದೇ ಮಾತು, ತಂದೆಯದೇನೂ ಇಲ್ಲ. ಹೆಣ್ಣಾಗಲಿ ಗಂಡಾಗಲಿ ಮಕ್ಕಳ ಸುಖದುಃಖ ತಾಯಿಗೆ ಹೆಚ್ಚು. ತಾಯಿಯೇ ಅಲ್ಲವೆ ಸೊಸೆಗೆ ಅತ್ತೆ ಯಾಗಿ ಸೊಸೆಯೊಡನೆ ೨೪ ಗಂಟೆಯ ಕಾಲವೂ ಕಳೆಯಬೇಕಾದುದು. ಮದುವೆಯಾಗಿ ಗಂಡನ ಮನೆಗೆ ಹೋದ ಹೆಣ್ಣು ಮಕ್ಕಳ ಸುಖ ದುಃಖ, ಕಷ್ಟ ನಷ್ಟಗಳಲ್ಲಿ ತಾಯಿಗೆ ಹೆಚ್ಚು ತಾಪತ್ರಯ. ತಂದೆಗೆ ಹತ್ತು ಕೆಲಸ. ಮನೆಗೆಲಸ ಊರಗೆಲಸ ನೋಡಿಕೊಳ್ಳಬೇಕು, ಸಂಸಾ ರಕ್ಕೆ ಬೇಕಾದಷ್ಟು ಗೌರವವಾಗಿ ಗಳಿಸಬೇಕು. ಇವೆಲ್ಲ ಕೆಲಸಗಳಲ್ಲಿ ಸಾಂಸಾರಿಕ ಕ್ಲೇಶಗಳನ್ನು ಹಚ್ಚಿಕೊಳ್ಳಲು ಅವನಿಗೆ ವಿರಾಮವಿಲ್ಲ. ಆದ್ದರಿಂದ ಮನೆಗೆ ಸೊಸೆಯನ್ನು ತಂದುಕೊಳ್ಳುವಾಗಲೂ ಅಳಿಯ ನನ್ನು ಆರಿಸುವಾಗಲೂ ತಾಯಿಯದೇ ಕೊನೆಯ ಮಾತು. ಹಾಗೆ ನೋಡಿದರೆ, ಅಳಿಯನಿಗೆ ಕೈ ತುಂಬ ವರದಕ್ಷಿಣೆ ಕೊಡಲು ಗಂಡನನ್ನು ಬಲವಂತಪಡಿಸುವವಳು ತಾಯಿ. ಮಗಳಿಗೆ ಚಲೋ ವರ ಸಿಕ್ಕಿ ಮದುವೆ ವೈಭವದಿಂದ ನಡೆಯಲೆಂದು ಅವನನ್ನು ಸಾಲಕ್ಕೆ ನೂಕು ವವಳೂ ಆಕೆಯೇ. ಸೊಸೆತನದ ಕಾಲವನ್ನು ಅತ್ತೆಯ ಕೈಕೆಳಗೋ ಅತ್ತಿಗೆಯ ಕೈಕೆಳಗೋ ಕಳೆದು, ಹೆಣ್ಣು ತಾಯಿಯಾಗಿ ಮನೆಯ ರಾಣಿಯಾಗಿ, ಒಡತಿಯಾಗಿ, ಬೆಳೆದುಬರುತ್ತಿರುವ ಸಂಸಾರದ ಸುಖ ವನ್ನೋ ದುಃಖವನ್ನೋ ಅನುಭವಿಸುತ್ತಾಳೆ. ಮೊಮ್ಮಕ್ಕಳು ಹುಟ್ಟಿದರೆ ತಾಯಿಗೆ ತನ್ನ ಮುದಿತನದಲ್ಲಿ ಅದೊಂದು ಕ್ಲೇಶ. ಹುಟ್ಟದಿದ್ದರೂ ಒಂದು ಕ್ಲೇಶ.

೧೧

## ಹೆಂಡತಿ

ಹಿಂದೂ ವಿವಾಹದಲ್ಲಿ ಹೆಂಡತಿಯೆಂದರೆ ಒಂದು ಆಟದ ಗೊಂಬೆಯಿದ್ದ ಹಾಗೆ; ಏನೂ ಅರಿಯದ ಹಸುಳೆ ಎಂದು ಹಿಂದೆಯೇ ಹೇಳಿದೇವೆ. ಅತ್ತೆಯ ಮನೆಗೆ ಬಂದರೂ ಅವಳು ಅತ್ತೆಯ ಪಾಲಿಗೆ ಆಟದ ಗೊಂಬೆಯೇ. ತನ್ನ ಮಗಳನ್ನು ಪರರ ಮನೆಗೆ ಕೊಟ್ಟಿದ್ದರಿಂದ ತೆರವಾದ ಸ್ಥಳಕ್ಕೆ ಹೊಸ ಮಗಳು ಬಂದಂತಾಯಿತು. ಈ ಹೊಸ ಬಳಗ ಕಂಡು ಆಕೆಗೆ ಹೆಮ್ಮೆ. ಹೀಗೆ ಇರುತ್ತ ಇರುತ್ತ ಒಂದು ದಿನ ಸೊಸೆಯ ಸಂಗಡ ಜಗಳ ಕಾಯುತ್ತಾಳೆ. ಅತ್ತೆ ಸೊಸೆಯರು ಬಹಳ ದಿನ ಒಟ್ಟಿಗೆ ಇರುವ ಸಂಸಾರಗಳೇ ಕಡಮೆ.

ಹಿಂದೂ ವಿವಾಹಗಳೆಲ್ಲವೂ ಬಾಲವಿವಾಹಗಳಲ್ಲ. ಬ್ರಾಹ್ಮಣರು, ವೈಶ್ಯರು, ಚತುರ್ಥ ವರ್ಣದಲ್ಲಿ ಕೆಲವು ಗುಂಪುಗಳು—ಇವರನ್ನು ಬಿಟ್ಟರೆ ಉಳಿದವರಲ್ಲೆಲ್ಲ ಪ್ರೌಢವಿವಾಹವೇ ರೂಢಿಯಲ್ಲಿದೆ. ಕೆಲವ ರಲ್ಲಂತೂ ಮದುವೆಯಾದಮೇಲೂ ಹೆಣ್ಣು ತವರುಮನೆಯಲ್ಲೇ ಇರುತ್ತಾಳೆ. ಗಂಡನೇ ಅವಳಿದ್ದಲ್ಲಿಗೆ ಬಂದು ಹೋಗುತ್ತಿರು ತ್ತಾನೆ. ಎರಡು ಮೂರು ಮಕ್ಕಳು ಆದ ಮೇಲೆಯೆ ಅವಳು ಗಂಡನ ಮನೆಗೆ ಹೋಗುವುದು. ಆದರೆ ಬಾಲವಧು ಹೊಸದಾಗಿ ಅತ್ತೆಯ ಮನೆಗೆ ಹೋಗಿ ಎಷ್ಟೋ ತೊಂದರೆಗಳಿಗೆ ಗುರಿಯಾಗಬೇಕಾಗುತ್ತದೆ. ಮೊದ ಮೊದಲು ಎಲ್ಲರೂ ಅವಳನ್ನು ಮುದ್ದಿಸಿದರೂ ಅತ್ತೆಯ ಅತ್ತಿ ಗೆಯ ಅಧಿಕಾರ ದೌರ್ಜನ್ಯ ಕಳೆದು ಸೊಸೆಯದೂ ಕಾಲ ಬರಬೇಕಾ ದರೆ ಎಷ್ಟೋ ದಿನ ಕಾಯಬೇಕು. ಅವಳು ಮಾಡಿದ ಪ್ರತಿಯೊಂದು ಕೆಲಸದಲ್ಲೂ ತಪ್ಪು ಹಿಡಿಯುತ್ತಾರೆ. 'ಹೌದೆನ್ನಲಿಕ್ಕೂ ಇಲ್ಲೆನ್ನಲಿಕ

ಅತ್ತೆಯದೇ ಅಧಿಕಾರ' ಎಂಬ ಗಾದೆಯೊಂದಿದೆ. ಈ ಗಾದೆ ಹುಟ್ಟಿ ಹುಟ್ಟಿಕೊಂಡ ಸಂದರ್ಭದ ಕಥೆ ಬಹಳ ಸ್ವಾರಸ್ಯವಾಗಿದೆ. ಒಂದುದಿನ ಒಂದು ಮನೆಯಲ್ಲಿ ಭಿಕ್ಷುಕನೊಬ್ಬನಿಗೆ ಸ್ವಲ್ಪ ಕಾಳು ನೀಡಿದರು. ಸೊಸೆ ನೀಡಿದವಳು. ಅತ್ತೆ ಅದನ್ನು ಆಕ್ಷೇಪಿಸಿದಳು. ಆ ಭಿಕ್ಷುಕ ಮಾರನೆಯದಿನ ಬಂದಾಗ ಸೊಸೆ ಹೋಗಿಬಾರೆಂದಳು. ಹಾಗೆಂದರೂ ಅತ್ತೆಗೆ ಸಿಟ್ಟೇ. ಭಿಕ್ಷುಕನನ್ನು ಮತ್ತೆ ಕರೆದು ತಾನೇ ಹೋಗೆಂದಳು. ಹೀಗೇಕೆ ಎಂದರೆ 'ಹೌದೆನ್ನಲೂ ಇಲ್ಲೆನ್ನಲೂ ನನ್ನದು ಅಧಿಕಾರ, ಸೊಸೇಗೆನಧಿಕಾರ?' ಎಂದಳು. ಹೀಗಿದೆ ಸೊಸೆಯ ನಾಜೂಕು ಪರಿಸ್ಥಿತಿ ಗಂಡನ ಮನೆಯಲ್ಲಿ.

ಕೆಲವು ಸಂಸಾರಗಳಲ್ಲಿ ಹುಡುಗಿಯರು ಪಡುವ ಬಾಧೆ ವರ್ಣನೆಗೆ ಮೀರಿದುದು. ಆ ವಿವರಗಳನ್ನು ಇಲ್ಲಿ ಕೊಡಬೇಕಾಗಿಲ್ಲ. ಇಂಥಾ ದೃಷ್ಟಾಂತಗಳು ಎಲ್ಲೋ ಕ್ವಚಿತ್ತಾಗಿಯೇ ಇದ್ದರೂ ಪ್ರಜಾಭಿಪ್ರಾಯವು ಸುಮ್ಮನಿರಲಾಗದು. ದೌರ್ಜನ್ಯಕ್ಕೆ ಗುರಿಯಾಗಿ ಅನ್ಯಾಯವಾಗಿ ಕಷ್ಟಪಡುತ್ತಿರುವ ಒಂದೇ ಉದಾಹರಣೆಯಾದರೂ ಅದನ್ನು ಸುಮ್ಮನೆ ನೋಡುತ್ತ ಇರುವುದಾಗಲಾರದು. ನ್ಯಾಯವಾಗಲಿ ಅನ್ಯಾಯವಾಗಲಿ ಅಂಥ ಕಷ್ಟವೇ ಸಲ್ಲದು. ಹೆಂಡತಿಯೆಂದರೆ ನಿರ್ಜೀವವಾದ ಸ್ಥಾವರ ಪದಾರ್ಥವೆ? ಆಕೆಗೆ ಮೈಯಿದೆ, ಮನಸ್ಸಿದೆ, ಆತ್ಮವಿದೆ; ಅದೂ ಒಂದು ಮಾನವಪ್ರಾಣಿ. ಆಕೆಯ ಮೈಮೇಲೆ ಏಟು ಬೀಳಬಾರದು. ಆಕೆಯ ಮನಸ್ಸಿಗೆ ನೋವಾಗಬಾರದು; ಆತ್ಮಕ್ಕೆ ಹಿಂಸೆಯಾಗಬಾದು. ಹೆಂಗಸಿಗೆ ದೊರೆಯಬೇಕಾದ ನ್ಯಾಯ ಸಿಗುವವರೆಗೆ ಹಿಂದೂದೇಶದಲ್ಲಿ ಸಾಮಾಜಿಕಶಾಂತಿ ನೆಲೆಗೊಳ್ಳದು.

ಹೀಗೆ ಹೇಳಿದ್ದರಿಂದ ಮಿಸ್. ಮೇಯೋ ಮಾಡಿದ ಟೀಕೆಯನ್ನು ಸಮರ್ಥನಮಾಡಿದ ಹಾಗಲ್ಲ. ಮಹಾತ್ಮಾ ಗಾಂಧಿಯವರು ಹೇಳಿದ ಹಾಗೆ ಆಕೆ ಮಾಡಿದ್ದು, ಚರಂಡಿ ಇನ್ಸ್ಪೆಕ್ಟರರ ಕೆಲಸ. ಊರಿನಲ್ಲಿ ಕುಡಿಯುವ ನೀರಿನ ಶುಭ್ರವಾದ ನಲ್ಲಿಗಳೂ ಇವೆ; ಊರಿನವರು ಆ ನೀರನ್ನುಪಯೋಗಿಸಿ ಚೆಲ್ಲಿದ ಕೊಳೆಯ ನೀರಿನ ಚರಂಡಿಗಳೂ ಇವೆ.

ಹಿಂದೂಸಮಾಜದ ನಿತ್ಯಜೀವನದಲ್ಲಿ ಪ್ರಕಟವಾಗುವ ರಸಧರ್ಮದ, ಗುಣಾವಗುಣಗಳ ಮಲಿತ ಕೊಳೆನೀರು ಹಿಂದೂ ಸಮಾಜದ ದೋಷಗಳು. ಆರೋಗ್ಯಶಾಸ್ತ್ರ ಬಲ್ಲವನು ತನ್ನ ಮನೆಯ ಕೊಳೆ ನೀರನ್ನು ಚರಂಡಿಗೆ ಬಿಡದೆ, ತನ್ನ ಮನೆಯ ಹಿತ್ತಲಲ್ಲೇ ಇಂಗಿಸಿ ಅಲ್ಲಿ ಕೈತೋಟವನ್ನು ಬೆಳೆಯುತ್ತಾನೆ. ಹಾಗೆಯೇ ಸಂಸಾರದ ಮೈಲಿಗೆಯೆಲ್ಲವನ್ನೂ ಅಲ್ಲೇ ಇಂಗಿಸಿ ಮತ್ತೆ ಮನೆತನದ ಅಭಿಮಾನಗಳು ಬೆಳೆಯುವಂತೆ ಮಾಡಬೇಕು. ಹಿಂದೂ ಗೃಹಿಣಿ ಮಾಡುವ ಕೆಲಸ ಅದು. ಪರದೇಶದ ಯಾತ್ರಿಕರಿಗೆ ಕಾಣಬಾರದುದು ಅದು.

ತನ್ನ ಗಂಡನಮೇಲೆ ಪ್ರಭಾವ ಬೀರಲು ಹಿಂದೂ ಗೃಹಿಣಿಗೆ ಬಹಳ ಕಾಲ ಬೇಕಾಗಿಲ್ಲ. ಮಾವನಿಗೆ ಗೌರವ, ಅತ್ತಿಗೆಯೊಡನೆ ಸಲಿಗೆ, ಅತ್ತೆಯನ್ನು ಕಂಡರೆ ಅಂಜಿಕೆ, ಗಂಡನ ಮೇಲೆ ಪ್ರೀತಿ – ಹೀಗೆ ದಿನೇ ದಿನೇ ಎಲ್ಲರಿಗೂ ಬೇಕಾದವಳಾಗಿ ಬಹಳ ಬೇಗನೆ ಗಂಡನಿಗೆ ಹಿತಚಿಂತಕಳೂ ಸಲಹೆಗಾರಳೂ ಗೆಳತಿಯೂ ಆಗುತ್ತಾಳೆ. ಹತ್ತು ವರುಷ ಸಂಸಾರ ಮಾಡುವುದರೊಳಗಾಗಿ ಅವನ ಹಣಕಾಸನ್ನೆಲ್ಲ ಸ್ವಾಧೀನಪಡಿಸಿಕೊಂಡು, ಅವನ ಅದೃಷ್ಟಕ್ಕೆ ಕರ್ತಳಾಗಿ, ಅವನ ಉದ್ಯೋಗಕ್ಕೆ ಕೈಗಂಬವಾಗಿ, ಮಕ್ಕಳ ಮದುವೆಗೆ ಯಜಮಾನಿಯಾಗಿ ಮೆರೆಯುತ್ತಾಳೆ.

೧೨

## ಗಂಡ

ಹೆಂಡತಿಯ ಬಗ್ಗೆ ಹೇಳಿದ್ದೆಲ್ಲ ತಿರುವು ಮುರುವಾಗಿ ಗಂಡನಿಗೂ ಅನ್ವಯಿಸುತ್ತದೆ. ತಿರುವು ಮುರುವೇಕೆ, ಮೇರೆಗೆ ಬೆನ್ನಿದ್ದಂತೆ ಅವನು. ಮಾನವ ಜೀವದಲ್ಲಿ ಅವನು ಉಳಿದ ಅರ್ಧಭಾಗ; ಬಹುಶಃ ಅಧಮವಾದ ಅರ್ಧ ಭಾಗ. ಗಂಡು ಹೆಣ್ಣನ್ನು ಜರಿದರೆ,

ಹೆಣ್ಣು ಗಂಡಿಗೆ ಅಂಜಿದರೆ, ಗಂಡು ಹೆಣ್ಣು ಇಲ್ಲದ ಮಾನವ ಜಾತಿ ಎಲ್ಲಿದೆ ಎಂಬುದನ್ನು ನೆನೆದುಕೊಳ್ಳಬೇಕು. ಎತ್ತೋ ಕುಮರಿಯೋ ಇಲ್ಲದೆ ಗಾಡಿಯೆ? ಗಂಡು ಹೆಣ್ಣು ಪರಸ್ಪರಾವಲಂಬಿಗಳು, ಅನ್ಯೋನ್ಯಾಶ್ರಯಿಗಳು. ಈ ಗುಟ್ಟನ್ನರಿತು ತಾನೂ ಒಂದು ಅಂಗ ಮಾತ್ರ ಎಂಬ ಹಾಗೆ ಸಂಸಾರಮಾಡಿದವನ ವಿವಾಹಜೀವನವು ಸುಖಮಯವಾಗಿರುತ್ತದೆ. ವಿಲಾಯತಿಯಲ್ಲಿ ಮಾಡುವಂತೆ ಮೊದಲು ಪ್ರೀತಿಸಿ ಆಮೇಲೆ ಮದುವೆಯಾಗಬಹುದು; ನಮ್ಮ ದೇಶದಲ್ಲಿದ್ದಂತೆ ಮದುವೆಯಾದಮೇಲೆ ಪ್ರೀತಿಸಬಹುದು. ಹೇಗೇ ಆದರೂ ಹೊಸತನದಲ್ಲಿ ಕಂಡ ಸೊಬಗು ಸೊಗಸು ಮುಂದೆ ರುಚಿಗೆಡುತ್ತವೆಂಬುದು ನಿಜ. ಮಾನವ ಸ್ವಭಾವವು ವಿಶಿಷ್ಟ ಸಂದರ್ಭಗಳಲ್ಲಿ ತಿಳಿಯುತ್ತದೆ. ಅಂಥ ಸಂದರ್ಭಗಳು ನಾವು ಬೇಕೆಂದಾಗ ಹುಟ್ಟಿಕೊಳ್ಳುವುದಿಲ್ಲ. ಬಾಳಿನಲ್ಲಿ ತಮ್ಮ ಪಾಡಿಗೆ ತಾವು ಯಾವಾಗಲೋ ಹುಟ್ಟಿಬರುತ್ತವೆ. ಬಂದಾಗ ಅವನ್ನು ಇದುರಿಸಿ, ನಿಗ್ರಹಿಸಿ, ಶಾಂತವಾಗಿ ದಾಟಿಕೊಳ್ಳಬೇಕು. ಸುಖವಾಗಿ ಬದುಕುವ ದಂಪತಿಗಳಲ್ಲಿ ಒಬ್ಬರಿಗೆ ಸಿಟ್ಟು ಬಂದರೆ ಇನ್ನೊಬ್ಬರು ಶಾಂತವಾಗಿರುತ್ತಾರೆ. ಇಬ್ಬರೂ ಶಾಂತಿ ಕಳೆದುಕೊಂಡರೆ ಕಿಡಿ ಹಾರುತ್ತದೆ, ಜಗಳವಾಗುತ್ತದೆ.

ಬುದ್ಧಿವಂತನಾದ ಗಂಡ ಹೆಂಡತಿಯೊಡನೆ ಪರುಷನಂತೆ ವರ್ತಿಸಬಾರದು. ಮನೆಯಲ್ಲೂ ಹೊರಗಡೆಯೂ ಗೌರವ ಗಳಿಸಿ ಹೆಸರುಂಟುಮಾಡಿಕೊಳ್ಳುತ್ತಿದ್ದಾನೆಂಬುದನ್ನು ಅವನು ಮರೆಯಬಾರದು. ತನ್ನ ಬಗ್ಗೆ ತನ್ನ ಹೆಂಡತಿ ನೀಚವಾದ ಅಭಿಪ್ರಾಯವನ್ನು ಇಟ್ಟುಕೊಳ್ಳದಹಾಗೆ ನೋಡಬೇಕು. ಅಂಥದಕ್ಕೆ ಅವಕಾಶಕೊಡಬಾರದು. ಪ್ರಪಂಚದಲ್ಲಿ ಎಲ್ಲರ ಕೆಟ್ಟ ಅಭಿಪ್ರಾಯವೂ ಒಂದು ತೂಕ, ಮಾಡಿಕೊಂಡ ಹೆಂಡತಿಯ ಕೆಟ್ಟ ಅಭಿಪ್ರಾಯವೇ ಒಂದು ತೂಕ. ಎರಡನೆಯದರಿಂದ ಮನಸ್ಸಿಗೆ ಆಗುವ ನೋವು ಮೊದಲನೆಯದರಿಂದ ಆಗದು. ಆದ್ದರಿಂದ ಆಕೆಯ ಮನಸ್ಸಿನಲ್ಲಿರುವ ಗೌರವ ಬೆಳೆವ ಹಾಗೆ, ತನ್ನ

ನಡತೆಯಲ್ಲಿ ಸರಸಿಯೆನಿಸುವ ಹಾಗೆ, ವ್ಯವಹಾರದಲ್ಲಿ ಅಭಿಮಾನಶಾಲಿ ಬುದ್ಧಿಯಲ್ಲಿ ವಿವೇಕಿ ಎನಿಸುವ ಹಾಗೆ ಅವನ ನಡೆನುಡಿಯಿರಬೇಕು. ಹಿಂದೂ ದಂಪತಿಗಳು ಆಂತರಂಗಿಕವಾಗಿ ಸೇರುವುದು ನಿಷೇಕದ ಕೋಣೆಯಲ್ಲೇ ಮೊದಲು. ಬಾಲ್ಯವಿವಾಹವಲ್ಲದ ಇತರ ವಿವಾಹಗಳಲ್ಲಂತೂ ಗಂಡು ಹೆಣ್ಣು ಅವಕ್ಕೆ ಮೊದಲು ಅಪರಿಚಿತರು. ಬಾಲ್ಯ ವಿವಾಹದಲ್ಲಿ—ಹುಡುಗಿಗೆ ಪತ್ತುವರ್ಷವಾದಾಗ ಮದುವೆಯಾಯಿತೆನ್ನುವ—ಗಂಡ ಹೆಂಡತಿಯರು ಕೂಡಿ ಬೆಳೆಯುತ್ತಾರೆ. ಇಬ್ಬರೂ ಬೆರೆಯುವ ಮೊದಲು ನಾಲ್ಕು ವರ್ಷವಾದರೂ ಕಳೆಯಬೇಕು. ಈ ನಾಲ್ಕುವರ್ಷದಲ್ಲಿ ಅವರಿಗೆ ಪರಸ್ಪರ ಪರಿಚಯ ಬೆಳೆಯುತ್ತದೆ, ಪತ್ರ ವ್ಯವಹಾರ ನಡೆಯುತ್ತದೆ. ಕೊನೆಗೆ ಅವರು ಮೊಗ್ಗರಳಿ ಮನೆಗೆ ಬಂದಾಗ ಎಷ್ಟು ಲಜ್ಜೆ, ಎಷ್ಟು ಗಾಂಭೀರ್ಯ! ಗಂಡನಿಗೋ ಆತುರ, ಹರೆಯದ ಹಸಿವು. ತನ್ನ ಕಾತರ ಬಾಹುಗಳ ನಡುವೆ ಏಕೆ ಓಡಿ ಬರಬಾರದು? ತನ್ನ ಮನಸ್ಸಿಗೇಕೆ ಸುಖಕೊಡಬಾರದು? ಹಿಂದೂ ಸ್ತ್ರೀಗೆ ಎಷ್ಟೇ ಸ್ವಾತಂತ್ರ್ಯವಿರಲಿ, ಸ್ವಾತಂತ್ರ್ಯ ಬೇಕೆಂದು ಹಗಲೆಲ್ಲ ಎಷ್ಟೇ ಹೊಡೆದಾಡಲಿ, ರಾತ್ರಿಯಲ್ಲಿ ಆಕೆಗೆ ನಾಚಿಕೆ ಸಂಕೋಚಗಳು ಸಹಜ ಸ್ವಭಾವ. ಎಲ್ಲ ಹಿಂದೂ ಪತಿರಾಜರು ಇದನ್ನು ತಿಳಿದಿರಲಿ. ತಮ್ಮ ಸರಕನ್ನೆಲ್ಲ ಬಿಚ್ಚಿಬಿಟ್ಟು ತಮ್ಮ ಮೈಯನ್ನು ಮಾರಿಕೊಳ್ಳುವ ಬೆಲೆವೆಣ್ಣುಗಳೇ ಅವರು? ಅವರು ಧರ್ಮವಾಗಿ ಮಾಡಿಕೊಂಡ ಹೆಂಡಂದಿರು, ಹಿಂದೂ ಸತಿಯರು. ಈ ಗರತಿಯರ ಒಲವು ಪ್ರಯತ್ನ ಪೂರ್ವಕವಾಗಿ ಹುಟ್ಟಿಸಬೇಕಾದ ರಸಭಾವ. ಬೇಕೆಂದೊಡನೆ ಸಿದ್ಧವಾಗುವ ವ್ಯಾಪಾರವಲ್ಲ. ಸ್ಥೈರ್ಯಣೆಯಿಲ್ಲದ ಗಂಡ ಹೆಂಡತಿಯನ್ನು ಒಲಿಸಿ ರಮಿಸುವುದನ್ನು ಬಿಟ್ಟು ಸಿಟ್ಟುಗೊಂಡಾನು. ಸಿಟ್ಟಿನಿಂದ ಅಪ್ಪಣೆಮಾಡಿ ಬಲವಂತಮಾಡಿಯಾನು. ಹೀಗೆ ಮಾಡಿದವನು ಹೆಂಡತಿಯ ಸದಭಿಪ್ರಾಯ ಭಕ್ತಿಗಳನ್ನು ಖಂಡಿತವಾಗಿ ಕಳೆದುಕೊಳ್ಳುತ್ತಾನೆ. ಹೆಣ್ಣು ಹುಡುಗಿಯರಿಗೆ ಹುಚ್ಚು ಹಿಡಿಯಲಿಕ್ಕೂ ವಾಯುಬರುವುದಕ್ಕೂ, ಸಂಸಾರ ಸಿಡಿದು ಹೋಗುವುದಕ್ಕೂ ಇದೇ ಕಾರಣವಾಗುತ್ತದೆ. ಹರೆ

ಯದ ಹೆಣ್ಣಿನ ಮನಸ್ಸು ಗಾಜಿನಂತೆ. ಕ್ರೂರಕೃತ್ಯ ಹಾಗಿರಲಿ—ಕಠಿನವಾದ ಒಂದು ಮಾತು ಕೂಡ ಕಲ್ಲಿನಂತೆ ಆ ಗಾಜನ್ನು ಒಡೆಯುತ್ತದೆ. ಬುದ್ಧಿಗೆ ಹರಿತವಾದ ಗಾಯವಾಗುತ್ತದೆ. ನರಗಳು ಹರಿದು, ಮನಸ್ಸು ರೇಗಿ ಭಾವನೆ ಕಲಕಿಬಿಡುತ್ತದೆ. ಮೈ ಮನಸ್ಸಿನ ಅಧೀನ ತಪ್ಪುತ್ತದೆ. ಬೇಗನೆ ಮೈ ಸ್ವೇಚ್ಛೆಯಾಗಿ ಕೆಲಸಮಾಡಲು ಪ್ರಾರಂಭಿಸಿ ಕಡೆಗೆ ಮನಸ್ಸನ್ನೂ ತನ್ನಂತೆ ನಡೆಸಲು ಮೊದಲು ಮಾಡುತ್ತದೆ. ಅಲ್ಲಿಂದ ಉನ್ಮಾದವಾಯಿತು. ಮೈ ಮನಸುಗಳ ಲಗಾಮು ತಲೆಕೆಳಗಾಗಿ ಉಂಟಾಗುವ ಸ್ವಭಾವ ವಿಕಾರವೇ ಉನ್ಮಾದ. ಈ ಗಾಳಿ ತಗಲಿದ ಹುಡುಗಿಯರಿಗೆ ಪ್ರಜ್ಞಾರಹಿತ ಸ್ಥಿತಿಯಲ್ಲಿ ಅರ್ಧಮರ್ಧ ಪ್ರಜ್ಞೆಯಿರುತ್ತದೆ; ಪ್ರಜ್ಞೆಯಿದ್ದಂತೆ ಕಂಡಾಗ ಪ್ರಜ್ಞೆಯೇ ಇರದು. ಕಣ್ಣುಮುಚ್ಚಿಕೊಂಡೇ ನೋಡುತ್ತಾರೆ, ಕಣ್ಣು ತೆರೆದರೂ ಕಾಣದೆ ತಡವರಿಸುತ್ತಾರೆ. ಎಲೆ ಅಡಿಕೆ ಅಗಿದಂತೆ ಮೆಣಸಿನ ಕಾಯನ್ನು ನಿರ್ಲಕ್ಷ್ಯವಾಗಿ ಅಗಿದುಬಿಡುತ್ತಾರೆ. ಕಷ್ಟಸಾಧ್ಯವಾದ ಕೆಲಸಗಳನ್ನು ಅವಲೀಲೆಯಾಗಿ ಮಾಡುತ್ತಾರೆ. ಎಲ್ಲವೂ ಕನಸಿನಂತೆ ನಡೆಯುತ್ತದೆ. ಇದೆಲ್ಲ ಹಟ, ಮೊಂಡತನ, ಎಂದು ಹುಡುಗಿಯನ್ನು ಶಿಕ್ಷಿಸುತ್ತಾರೆ. ಅನೇಕ ಸಲ ಗಂಡ ತನ್ನ ತಪ್ಪಿಗೆ ತಾನೇ ಮರುಗಬೇಕಾದೀತು. ಹೆಂಡತಿಯ ಈ ರೋಗಕ್ಕೆ ತಾನೇ ಕಾರಣನಲ್ಲವೆ.

ಇದೆಲ್ಲವೂ ಅಡ್ಡಕತೆಯೆಂದು ಓದುಗರು ತಿಳಿದಾರು. ಇದರ ಉದ್ದೇಶ ಗಂಡನಾದವನು ಹೆಂಡತಿಯನ್ನು ಹೇಗೆ ನಡಸಿಕೊಳ್ಳಬೇಕೆಂಬುದನ್ನು ತಿಳಿದುಕೊಳ್ಳಲಿ ಎಂಬುದೇ. ಹೆಂಡತಿ ತನ್ನ ಅರ್ಧಾಂಗಿ—ಉತ್ತಮಾಂಗ–ಎಂಬುದನ್ನು ಅರಿಯಬೇಕು. ಆಕೆಯಲ್ಲಿ ತನ್ನ ನೆಳಲನ್ನು ಕಾಣಬೇಕು. ಆಕೆ ತನ್ನ ಸಂಸಾರದ ಕೇಂದ್ರ, ಮನೆಯ ರಾಣಿ, ಸಮಾಜದಲ್ಲಿ ತನ್ನ ಪ್ರತಿನಿಧಿ, ತನ್ನ ಕೀರ್ತಿ ಗೌರವಗಳ ದೇವಿ, ಮನೆತನದ ಮರ್ಯಾದೆಗಳ ನೆಲೆ, ತನ್ನ ಮಕ್ಕಳಿಗೆ ಮೇಲುಪಂಗ್ತಿ. ಆಕೆಯ ಈ ನಾನಾ ವೇಷಗಳಲ್ಲಿ ಸಾಫಲ್ಯ ಸಿಗಬೇಕಾದರೆ ತಾನೇ ಅದಕ್ಕೆ ಕಾರಣ. ತನ್ನ ಮಮತೆ ಸಹನೆ, ತನ್ನ ನಿಗ್ರಹ ಜಿತೇಂದ್ರಿ

ಯತ್ನ, ಪರಿಪುಷ್ಟತೆ, ಪ್ರಾಮಾಣಿಕತನ, ಪತಿಯಲ್ಲಿ ವಿಶ್ವಾಸ—ಇದೇ ಆಕೆ ತನ್ನ ಕರ್ತವ್ಯಗಳಲ್ಲಿ ನಿಪುಣೆಯಾಗಲು ಕಾರಣ. ಅನುಮಾನ ಸುಖಕ್ಕೆ ಮೃತ್ಯು. ಹೆಂಡತಿಯ ಬಗ್ಗೆ ಅನುಮಾನವೇನಾದರೂ ಇದ್ದರೆ ಗಂಡನಾದವನು ಸ್ಪಷ್ಟವಾಗಿ—ಆದರೆ ಮೃದುವಾಗಿ— ಆಕೆಯನ್ನು ಕೇಳಿ ತನ್ನ ಸಂಶಯವನ್ನು ಪರಿಚ್ಛೇದಮಾಡಿಕೊಳ್ಳಬೇಕು ಹಾಗೆಯೇ ಆಕೆಯು ಸಂದೇಹಗಳನ್ನು ನಿವಾರಣೆಮಾಡಿ ಸ್ಪಷ್ಟ ಭಾಷಣಕ್ಕೆ ಅವಕಾಶಕೊಡಬೇಕು, ಈ ತೆರದ ಸರಳವಾದ ಮಾತುಕತೆಯಿಂದ ಸಂಶಯ ಮೂಲವೇ ಕಡಿದುಹೋಗುತ್ತದೆ. ನಿಜವಾಗಿ ಸಂಸಾರಸುಖ ಎರಡು ಶಕ್ತಿಗಳ ಮೇಳನದ ಫಲ. ಗಂಡ ಹೆಂಡತಿಯರು ಎರಡು ನದಿಗಳಂತೆ ಸಂಗಮವಾಗಬೇಕು. ರಸ್ತೆಯ ಎರಡು ಅಂಚಿನಂತೆ [illegible] ದೂರವಾಗಿಯೇ ಉಳಿಯಬಾರದು.

## ೧೩

### ವಿಧವೆ

ಡಂಭವಿಲ್ಲದ ಪಾಂಡಿತ್ಯ, ಸನ್ಯಾಸವಲ್ಲದಿದ್ದರೂ ನಿಗ್ರಹಯುತವಾದ ವೈರಾಗ್ಯಜೀವನ, ಗರ್ವವಿಲ್ಲದ ಅಲಂಕಾರ—ಸಾಧಾರಣವಾಗಿ ಹಿಂದೂ ಗೃಹಜೀವನದಲ್ಲಿ ಈ ಲಕ್ಷಣಗಳು ಕಾಣುತ್ತವೆ. ಹಿಂದೂ ಪುರುಷನಿಗಾಗಲಿ ಹಿಂದೂ ಸ್ತ್ರೀಗಾಗಲಿ ಇವು ವಿಶಿಷ್ಟಗುಣಗಳಲ್ಲ. ಆದರೆ ಇದಕ್ಕೆ ಹಿಂದೂ ವಿಧವೆ ಅಪವಾದವಾಗಿದಾಳೆ. ಈ ವಿಧವಾತ್ವ ಒಂದು ಸಂಸ್ಥೆ, ಆಕಸ್ಮಿಕವಾದ ಒಂದು ಘಟನೆಯಲ್ಲ. ಬಾಲವಿಧವೆ ಬಾಲ್ಯವಿವಾಹದ ಒಂದು ಪರಿಣಾಮ. ಹಿಂದೂಸ್ಥಾನದಲ್ಲಿ ಅನೇಕ ಸಂದರ್ಭಗಳಲ್ಲಿ ಗಂಡನಿಗೋ ಹೆಂಡತಿಗೋ, ಯಾರಿಗಾದರೊಬ್ಬರಿಗೆ ತಮ್ಮ ಮದುವೆಯೇ ನೆನಪಿರುವುದಿಲ್ಲ. ಯಾವಾಗ ನಡೆಯಿತೋ

ಅವರಿಗೆ ತಿಳಿಯದು. ಇನ್ನೂ ಗೊಂಬೆಗಳಂತಿದ್ದಾಗಲೇ ಅವರ ಮದುವೆ ಆಯಿತು. ಆಮೇಲೆ ಅವರಿಗೆ ಇದು ತಿಳಿಯಿತು. ಹೊಸ ಬೆಳಕು ಬಂದಂತಾಗಿ ರಸಭಾವ ತುಂಬಿ ಸುಖವಾಯಿತು. ಆದರೆ ಬಾಲ ವಿಧವೆಗೆ ಮಾತ್ರ ತನ್ನ ಮದುವೆಯಾದದ್ದೂ ನೆನಪಿಲ್ಲ, ತಾನು ವಿಧವೆ ಯಾದದ್ದೂ ನೆನಪಿಲ್ಲ. ವೈರಾಗ್ಯವಿಲ್ಲದ ಬರೀ ನಿಗ್ರಹಜೀವನ ಆಕೆಯ ಪಾಲಿಗೆ ಏಕತಾನತೆಯೇ ಬರುತ್ತದೆ. ಆಕೆಗೆ ತನ್ನ ಪಾಡಿನ ಅರಿವು ಆದಂತೆ, ಆಕೆಗೆ ಹರೆಯ ಬಂದಂತೆ, ಆಕೆಯ ಆಕಾರ ರೂಪ ಬುದ್ಧಿ ಭಾವ ಬಲಿತು ಇದು ಅರಳುತ್ತಿರುವ ಮೊಗ್ಗಲ್ಲ, ಅರಳುವ ಮೊದಲೇ ಬಾಡಬೇಕಾದ ಹೂ ಎಂದು ಆ ದೇಹದಂಡನೆ ಬೆಳೆಯುತ್ತದೆ. ಈ ಕಾಲ ದಲ್ಲಿ ಬಾಲವಿಧವೆ ಪಡಬೇಕಾದ ಕಷ್ಟ, ಅನುಭವಿಸಬೇಕಾದ ಸಂಕಟ ಗಳನ್ನು ವರ್ಣಿಸಲು ಇದು ಸ್ಥಳವಲ್ಲ. ಎಂತಹ ವಿಪರೀತ ಸಂದರ್ಭ ಗಳಿಗೆ ಆಕೆ ಗುರಿಯಾಗಬೇಕೋ! ವಿಲಾಯತಿಯ ಹೆಂಗಸು ನಮ್ಮನ್ನು ಬೈದಾಗ ಅವರನ್ನು ತಿರುಗಿ ಬೈಯುವುದು ಫಲಕಾರಿಯಲ್ಲ. ಅಮೆರಿ ಕದ ಮೇಯೋ ನಮ್ಮನ್ನು ವಿಮರ್ಶಿಸಿದಾಗ ನಾವು ಅಮೇರಿಕವನ್ನು ಟೀಕಿಸಲೇನು ಫಲ. ನಮ್ಮ ಎಲೆಯ ಕತ್ತೆಯನ್ನು ತೆಗೆಯದೆ ಅವರ ಎಲೆಯ ನೊಣವನ್ನು ತೋರಿಸಬಹುದೆ?

ಆದರೆ ಸ್ವಲ್ಪ ಮಟ್ಟಿಗೆ ಸಂಸಾರ ಸುಖವನ್ನನುಭವಿಸಿ ಈ ಸರ್ವ ನಾಶಿಯಾದ ಜಗತ್ತಿನಲ್ಲಿ ಎಲ್ಲರ ಪಾಲಿಗೂ ಒಂದಿಲ್ಲೊಂದುಸಲ ಬರುವಂತೆ ತನ್ನ ಪಾಲಿಗೆ ಬಂದ ಬಾಳ ಕಹಿಯನ್ನು ಕುಡಿದುನಿಂತ ವಿಧವೆಗೆ ಎಲ್ಲ ಕಡೆಯಿಂದಲೂ ಆದರ ದೊರೆಯುತ್ತದೆ. ಆಕೆ ತನ್ನ ಗಂಡನ ಅರ್ಧಭಾಗ. ಆಕೆ ಬದುಕು ಅರೆಸಾವುಗಳಲ್ಲಿ ಬಾಳುತ್ತ ತನ್ನ ಪತಿದೈವದ ಸ್ಮರಣೆಯಲ್ಲಿ ದೇವರ ಸೇವೆಯಲ್ಲಿ ಕಾಲಕಳೆಯುತ್ತಾಳೆ. ಹಿಂದೂ ಸ್ತ್ರೀ ತನ್ನ ಪತಿಯಲ್ಲಿ ಲೀನವಾಗುವ ರೀತಿ, ಆತನ ಸೇವೆಗಾಗಿ ಬಾಳುವ ಬಗೆ, ಆತನ ರುಚಿಗೆ ತಕ್ಕ ಹಾಗೆ ನಡೆದು, ಅವನ ಬಯಕೆ ಗಳನ್ನು ತೀರಿಸುವ ರೀತಿ—ಇವೆಲ್ಲ ಹಿಂದೂ ವಿಧವೆಯ ಬಾಳಿನಲ್ಲಿ ಮತ್ತೊಂದು ರೀತಿಯಲ್ಲಿ ಕಾಣಬರುತ್ತವೆ. ಆ ಬಾಳು ತ್ಯಾಗಜೀವ

ಸದ ಪರಮಾವಧಿ. ದಿನಕ್ಕೆ ಒಪ್ಪೊತ್ತು ಊಟ, ಉಡಲು ಒರಟು ಬಟ್ಟೆ. ಸೀರೆಗೆ ಅಂಚಿನ ಅಲಂಕಾರವಿಲ್ಲ, ತಲೆಗೆ ತುರುಬಿನ ಸಿಂಗಾರ ವಿಲ್ಲ, ಮೈಗೆ ರವಿಕೆಯ ಬೆಡಗಿಲ್ಲ. ಹಣೆಗೆ ಕುಂಕುಮ ವರ್ಜ್ಯ, ಕೆನ್ನೆಗೆ ಅರಿಸಿನ ಬೇಡ, ಕತ್ತಿನಲ್ಲಿ ತಾಳಿ ಕೂಡದು. ಒಡವೆ ತೆಗೆದುಹಾಕು ತ್ತಾಳೆ. ಅಂದಚೆಂದವನ್ನು ಮರೆಯುತ್ತಾಳೆ. ಮೊದಲು ಒಂದು ವರ್ಷದವರೆಗೂ ಮನೆಬಿಟ್ಟು ಹೊರಗೇ ಬಾರಳು. ಊಟಮಾಡಬೇ ಕಾದರೆ ಎಷ್ಟೋ ಬಲವಂತದ ಮೇಲೆ. ಗಂಡ ಸತ್ತಮೇಲೆ ಮಕ್ಕಳೇ ಆಕೆಯ ಸರ್ವಸ್ವ. ಅವನ ಮೈಯಿಂದ ಮೂಡಿಬಂದ ಮೂರ್ತಿಗಳು ಅವು. ಆತನ ಪ್ರೀತಿಯ ಪ್ರತ್ಯಕ್ಷ ನಿದರ್ಶನ.

ಹಿಂದೂ ವಿಧವೆ ಕೇವಲ ಮನೆಯ ಯಜಮಾನಿಯಲ್ಲ. ಆಕೆ ಇಡೀ ಸಮಾಜಕ್ಕೇ ತಾಯಿ. ಊರಿನಲ್ಲಿ ಮದುವೆ ವ್ರತ ಸಂತರ್ಪಣೆ, ಏನೇ ಆಗಲಿ ಇಷ್ಟಮಿತ್ರರ ಮನೆಗೆ, ಬಂಧುಗಳ ಮನೆಗೆ, ಸಹಾಯಕ್ಕೆ ಆಕೆ ಸಿದ್ಧ. ಹಿಂದಿನ ಕಾಲದಲ್ಲಿ ಈಗಿನ ಹಾಗೆ ಅಡಿಗೆಯವರು ಪರಿ ಚಾರಕರು ಸಿಗುತ್ತಿರಲಿಲ್ಲ. ಆ ಮಹಾ ಲೋಪವನ್ನು ಹಿಂದೂ ವಿಧವೆ ಯರು ಸವರಿಸುತ್ತಿದ್ದರು. ಹೀಗೆ ಹಿರಿಯರ ಜೊತೆಗೆ ಸಹಾಯಕ ಳಾಗಿ ನಿಲ್ಲುವುದು ಮಾತ್ರವೇ ಅಲ್ಲ; ಹುಡುಗರೊಡನೆ ಆಡುತ್ತ ಅವರಿಗೆ ಕತೆಹೇಳುತ್ತ, ಹಾಡು ಕೀರ್ತನೆಗಳನ್ನು ಕಲಿಸುತ್ತ ಕಿರಿಯರ ಗೆಳತಿಯಾಗಿರುತ್ತಿದ್ದಳು. ಆಕೆಯ ದೇವರ ಪೂಜೆ, ಭಕ್ತಿ, ಸೇವೆ, ಪಾವಿತ್ರ್ಯ, ನಿಯಮ ಇವೇ ಆಕೆಯ ಭಾಗ್ಯ. ಆದರೆ ಈ ಭಾಗ್ಯ ಗಳಿಸಲು ಕೊಡಬೇಕಾದ ಬೆಲೆಯಾದರೂ ಏನು? ಹಿಂದಿನ ಕಾಲದ ಧರ್ಮಶ್ರದ್ಧೆ ಕಡಮೆಯಾಗಿದೆ. ಸನ್ಯಾಸದಿಂದಲ್ಲದೆ ಇಂದ್ರಿಯಾಭಿ ಲಾಷೆ ಸುಲಭವಾಗಿ ಗೆಲ್ಲಲು ಬರುವಂತಿಲ್ಲ. ಸನ್ಯಾಸ ಆಶ್ರಮವೂ ಬರೀ ನೆನಪು ಆಗಿದೆ. ಸದ್ಯ ಹಿಂದೂ ವಿಧವೆಯ ಬಾಳು ಬಹಳ ಶೋಚನೀಯವಾಗಿದೆ. ಅದನ್ನು ಉತ್ತಮಗೊಳಿಸಬೇಕು. ಎಷ್ಟೋ ಸಂದರ್ಭಗಳಲ್ಲಿ ಹಿಂದೂ ವಿಧವೆಗೆ ಆಧಾರವೇ ಇಲ್ಲದೆ ತಂದೆಗೆ ಭಾರ ವಾಗುತ್ತಾಳೆ. ತಂದೆತಾಯಿಗೆ ಮಗಳ ಮೇಲೆ ಪ್ರೀತಿಯಿಲ್ಲದೆ ಇಲ್ಲ.

ಆದರೆ ಕಾಲ ಕಳೆದಂತೆ ಅವರು ಉದಾಸೀನರಾಗುತ್ತಾರೆ. ಮಗಳು 'ನಿರ್ಭಾಗ್ಯ ನಿರ್ಮಲೆ' ಆಗುತ್ತಾಳೆ. ಇವರಿಬ್ಬರೂ ಸುಖವಾಗಿ ದಾಂಪತ್ಯವನ್ನು ಅನುಭವಿಸುತ್ತ ಮಕ್ಕಳನ್ನು ಪಡೆಯುತ್ತ, ಮದುವೆ ಮುಂಜಿಗಳನ್ನು ವಿಧವೆಯ ಕಣ್ಣೆದುರಿಗೆ ವೈಭವವಾಗಿ ಮಾಡುತ್ತ ಹೋಗುತ್ತಾರೆ. ಇತ್ತ ಇವಳಿಗೆ ಉಪವಾಸ ವನವಾಸ. ನಾಲ್ಕು ಜನರ ನಡುವೆ ಬಂದರೆ ಅವಳು ಅಪಶಕುನ. ಸರ್ವ ಅಮಂಗಲದ ಮೂರ್ತಿ ಅವಳು.

ಯಾವ ಸಂಸ್ಥೆಯನ್ನು ವಿಮರ್ಶಿಸಬೇಕಾದರೂ ಅದರ ವೈಭವದ ಕಾಲವನ್ನು, ದಾರಿದ್ರ್ಯವನ್ನು, ಆ ಸಂಸ್ಥೆಗೆ ಮೂಲಭೂತವಾದ ತತ್ವಗಳನ್ನು, ಅದು ಯಶಸ್ವಿಯಾಗಿ ಬೆಳಗಿದ ಕಾಲದ ಸನ್ನಿವೇಶವನ್ನು ಗಮನಿಸಬೇಕು. ಆದರೆ ಕಾಲವು ವ್ಯತ್ಯಾಸವಾಗುತ್ತದೆ. ನಮ್ಮಪಾಲಿಗೆ ಹಿರಿಯರು ಕಟ್ಟಿಕೊಟ್ಟ ಸಮಾಜದ ಕಟ್ಟಡಕ್ಕಾಗಿ ಅವರನ್ನು ನಾವು ನಿಂದಿಸುವುದಿಲ್ಲ. ಆದರೆ ಈಗಿನ ಕಾಲದಲ್ಲಿ ಹಿಂದೂ ವಿಧವೆ— ತರುಣಿಯಾದವಳ—-ಗೋಳನ್ನು ನೋಡಿ ಸುಮ್ಮನಿರಲು ಬರುವಂತಿಲ್ಲ. ಅದಕ್ಕೆ ತಕ್ಕ ಚಿಕಿತ್ಸೆಯನ್ನು ಮಾಡಬೇಕಾಗಿದೆ.

## ೧೪

# ಹೆಣ್ಣಿನ ಗೋಳು

ಹಿಂದೂ ಸಮಾಜದಲ್ಲಿ ಹುಟ್ಟಿದ್ದೇ ನನ್ನ ತಪ್ಪೆ? ಹಿಂದಿನ ಕಾಲದಲ್ಲಿ ಹೆಣ್ಣು ಹುಟ್ಟಿದರೆ ಗಂಗಾನದಿಯೊಳಕ್ಕೆ ಎಸೆಯುತ್ತಿದ್ದರಂತೆ. ಪರದೇಶದ ಯಾತ್ರಿಕರೆಲ್ಲ ನಮ್ಮ ಸಂಸ್ಕೃತಿಯ ಹುಳುಕುಗಳನ್ನು ಎತ್ತಿ ತೋರಿಸುತ್ತ ಇದನ್ನು ಬಹಳ ದೊಡ್ಡದಾಗಿ ತೋರಿಸಿದಾರೆ. ಹೆಂಗಸು ಸಮಾಜಕ್ಕೆ ಬಂಧನವೇ, ಭಾರವೇ? ಹೆಂಗಸಿಲ್ಲದೆ ಸೃಷ್ಟಿ ಹೇಗೆ ಮುಂದುವರಿಯಬೇಕು? ಹೀಗಿದ್ದರೂ ಹೆಣ್ಣು ಹುಟ್ಟಿದಾಗ ಇಷ್ಟು ಅಸಡ್ಡೆ, ಬೆಳೆದಾಗ ಇಷ್ಟು ತಿರಸ್ಕಾರ, ಏಕೆ?

ಹೆಂಗಸಿಗೆ ಸ್ವಾತಂತ್ರ್ಯವಿಲ್ಲ; ಹುಡುಗಿಯಾದಾಗ ತಂದೆಯ ಸೊತ್ತು, ಮದುವೆಯಾದಮೇಲೆ ಗಂಡನ ಅಧೀನ, ವಿಧವೆಯಾದರೆ ಮಗನ ಅಧೀನ ಎಂದು ಹಿಂದೂ ಗ್ರಂಥಕಾರರೆಲ್ಲ ಬರೆದಿದಾರೆ. ಹಾಗಾದರೆ ನನಗೆ ಯಾವಾಗ ಸ್ವಾತಂತ್ರ್ಯ? ಎಂದೋ ಹಿಂದಿನ ಕಾಲದವರು ಬರೆದ ಶಾಸ್ತ್ರ ಕಡೆತನಕವೂ ನಮಗೆ ಬಂಧನವಾಗಬೇಕೆ? ನನಗೆ ಓದುಬರೆಹ ಕೂಡದು ಎಂದು ಹೇಳಿ, ಜನ ಮುಂದೆ ಅವಿದ್ಯಾವತಿ ಎಂದು ನನ್ನನ್ನು ದೂರುತ್ತಾರೇಕೆ? ಮನೆಯ ಪಂಜರದಲ್ಲೇ ನನ್ನನ್ನು ಕೂಡಿ ನಾನು ಅಬಲೆ ಎಂದು ನನ್ನನ್ನು ದೂರುತ್ತಾರಲ್ಲ. ಅಡಿಗೆಯ ಮನೆಯಲ್ಲಿ ನನ್ನನ್ನು ಮೂರು ಹೊತ್ತೂ ಕೂಡಿಸಿ ನಾನೇನೂ ಸಂಪಾದಿಸಲೊಲ್ಲೆನೆಂದು ನನ್ನನ್ನು ಜರಿಯುತ್ತಾರೆ. ಒಬ್ಬಳೇ ಪ್ರಯಾಣಮಾಡುತ್ತೇನೆ ಎಂದರೆ ಬೇಡವೆನ್ನುತ್ತಾರೆ. ಜೊತೆಯಿಲ್ಲದೆ ಪ್ರಯಾಣಮಾಡಲಾರಳು ಎನ್ನುತ್ತಾರೆ. ಇದೇನು ಪರಸ್ಪರ ವಿರೋಧ! ನಿಜವಾಗಿ ಮನುಷ್ಯಪ್ರಾಣಿಯಂಥ ಅವಿವೇಕಿ ಜೀವ ಸೃಷ್ಟಿಯಲ್ಲಿ ಮತ್ತೊಂದಿಲ್ಲ.

ಶಾಲೆ ಕಾಲೇಜುಗಳಿಗೆ ನಾನು ಹೋಗಬಾರದೆ? ನನ್ನ ಬಟ್ಟೆ ನಾನು ಕೊಂಡು, ನನ್ನ ಉದ್ಯೋಗ ನಾನು ಮಾಡಿಕೊಂಡು, ನನ್ನ ಹೊಟ್ಟೆಗೆ ನಾನು ಗಳಿಸಿ ನನ್ನ ಬಾಳನ್ನು ನಾನು ಬಾಳಬಾರದೆ? ಇಂದು ಸಮಾಜದ ಸಂಪ್ರದಾಯಗಳನ್ನೆಲ್ಲ ನಾನು ಮುರಿದಿದೇನೆ. ಆದರೂ ಶಾಸನ ಮಾತ್ರ ಇನ್ನೂ ನನಗೆ ಸಂಕೋಲೆಯಾಗಿಯೇ ಇದೆ. ಜೀವನ ನಿರ್ವಾಹಕ್ಕಾಗಿ ಮಾತ್ರ ನನಗೆ ಆಸ್ತಿಯ ಅಧಿಕಾರ. ಗಂಡ ಬದುಕಿದ್ದಾಗ ನನ್ನ ಮನೆಗೆ ನಾನು ರಾಣಿಯಾಗಿದ್ದೆ. ಎಲ್ಲಕ್ಕೂ ಮೇಲು ವಿಚಾರಕಳಾಗಿದ್ದೆ. ಈಗ ಜೀವನಾರ್ಥಕ್ಕಾಗಿ ಮಗನನ್ನು ಬೇಡಿಕೊಳ್ಳಬೇಕಾಗಿದೆ. ನನ್ನ ಮುಂದೆ ತಲೆ ತಗ್ಗಿಸಿಕೊಂಡು ಉಸಿರು ಹಿಡಿದು ಓಡಾಡುತ್ತಿದ್ದ ಸೊಸೆ ಈಗ ಸೆಟೆದು ನಡೆಯುತ್ತಾಳೆ. ಈಗ ಅವಳು ಮನೆಗೆ ರಾಣಿ. ನಾನೋ ಅನ್ನವಿಲ್ಲದ, ಅಧಿಕಾರವಿಲ್ಲದ, ಗೌರವವಿಲ್ಲದ ಘನವಂತಿಕೆಯಿಲ್ಲದ ಗೂಬೆ. ನನ್ನ ಗಂಡನೊಡನೆ ನಾನು ಮಲಗಿ

ನಿದ್ರಿಸುತ್ತಿದ್ದ ಮಂಚ ಕೂಡ ನನ್ನ ಪಾಲಿಗೆ ಇಲ್ಲದಾಗಿದೆ. ನನ್ನ ಗಂಡನನ್ನು ಪ್ರೀತಿಸಿದಷ್ಟೇ ನಾನು ಪ್ರೀತಿಸುತ್ತಿದ್ದ ನನ್ನ ನಿಡಿಗೂದಲನ್ನು ಕತ್ತರಿಸಬೇಕು. ಅಷ್ಟು ಆಸೆಯಿಂದ ಧರಿಸುತ್ತಿದ್ದ ಒಡವೆಗಳನ್ನು ಮಾರಬೇಕು. ನನ್ನ ಹೆಣ್ತನ ಮರೆಮಾಡಲು ಒಂದು ರವಿಕೆಯುನ್ನು ತೊಡುವ ಹಾಗಿಲ್ಲ. ಅಂಚಿನ ಸೀರೆಯನ್ನೂ ಬಣ್ಣದ ಸೀರೆಯನ್ನೂ ಉಡುವ ಹಾಗಿಲ್ಲ. ನನ್ನ ಬಾಳಿನ, ಬೆಳಕಾದ ಪತಿಯನ್ನೇ ಕಳೆದುಕೊಂಡಿಕೊಂಡಿದೇನೆ. ಅದರ ಜೊತೆಗೆ ಬದುಕಿನಲ್ಲಿ ಎಲ್ಲ ರುಚಿಯನ್ನೂ ಕಳೆದುಕೊಳ್ಳಬೇಕೆ? ಅಂದಚೆಂದ, ಸೊಬಗು ಸೊಗಸು ಎಲ್ಲಾ ವರ್ಜ್ಯವೆ? ವೈರಾಗ್ಯ ತಾನಾಗಿ ಹುಟ್ಟಬೇಕಲ್ಲದೆ ಕಲಿಸಿದರೆ ಬಂದೀತೇ? ಸಮಾಜವೇ ಬಲವಂತಮಾಡಿದರೆ ತಾನೆ ಏನು ವೈರಾಗ್ಯ ಹುಟ್ಟೀತೇ? ನನ್ನ ಮಗಳಿಗೆ ಏನು ಉಡುಗೊರೆ ಕೊಡಬೇಕೆಂದು ನನ್ನ ಮಗ ನನ್ನನ್ನು ಕೇಳಬೊಲ್ಲ. ನನಗೆ ಖಾಯಿಲೆ ಬಂದರೆ ಮನೆಯಲ್ಲಿ ಕೇಳುವವರೇ ದಿಕ್ಕಿಲ್ಲ. ನನ್ನ ಹೆಣ್ಣುಮಕ್ಕಳು ನನ್ನನ್ನು ಬಿಟ್ಟು ಅತ್ತೆಯ ಮನೆಗೆ ಹೋಗಿದಾರೆ. ನನ್ನ ಹಾಗೇ ತಾವೂ ಕಷ್ಟ ಪಡಲಿಕ್ಕೆ. ಅಯ್ಯೋ ದೇವರೆ! ನನ್ನ ಗಂಡನ ಕಣ್ಣೆದುರಿಗೆ ನಾನು ಸಾಯುಬಾರದಿತ್ತೆ!

ಆದು ಹೇಗೆ ಸಾಧ್ಯ? ಅವರಿಗಿಂತ ನಾನು ಎಂಟು ಹತ್ತು ವರುಷ ಚಿಕ್ಕವಳು. ವೈಧವ್ಯ ತಪ್ಪಬೇಕು ಹೇಗೆ? ಹೆಂಡತಿ ಸತ್ತವರಿಗೆ ಎಷ್ಟೇ ವಯಸ್ಸಾಗಿರಲಿ ಅವರು ಮತ್ತೆ ಮದುವೆಯಾಗಬಹುದು. ನಮಗೇಕೆ ಆ ಅಧಿಕಾರ ಕೊಡದೊ? ಕಡೆಗೆ ಬಾಲವಿಧವೆಗಾದರೂ ಬೇಡವೆ? ಎಂಥ ದಾರುಣ! ಆ ಮಗು ವಿಧವೆಯಾಗಿ ಬಲವಂತ ಸನ್ಯಾಸಕ್ಕೆ ಗುರಿಯಾಗಿದ್ದರೆ ತಂದೆ ತಾಯಿ ಅವಳಿಂದ ಚಾಕರಿಮಾಡಿಸಿಕೊಳ್ಳುತ್ತ, ನಾಚಿಕೆಯಿಲ್ಲದೆ ಮಕ್ಕಳನ್ನು ಹಡೆಯುತ್ತ, ಮಗಳ ವಿಷಯವನ್ನೇ ಹಚ್ಚಿಕೊಳ್ಳದೆ ನಿಶ್ಚಿಂತೆಯಾಗಿರುತ್ತಾರೆ.

ಇಲ್ಲ. ನಾನು ತಿರುಗಿಬೀಳಬೇಕು, ದಂಗೆ ಏಳಬೇಕು. ಸಮಾಜವನ್ನು ತಲೆಕೆಳಗು ಮಾಡಬೇಕು. ಕುರಿಯು ಹಾಗೆ ಎಷ್ಟು

ದಿನ ಬಾಳುವುದು. ಕುರಿಯೂ ಹಾದೀತು ಮದುವೆಗೆ ಒಪ್ಪಬೇಕೇಕೆ ನಾನು? ಉಹೂಂ, ಒಪ್ಪುವುದಿಲ್ಲ. ಮದುವೆಯಾದ ಮಾತ್ರಕ್ಕೆ ಗಂಡನ ಮನೆಗೇಕೆ ಹೋಗಬೇಕು? ಗಂಡನೇ ಬಂದು ನನ್ನ ತವರು ಮನೆಯಲ್ಲೇಕೆ ಇರಬಾರದು? ಓಹೋ! ನನ್ನ ತಂದೆಯ ಆಸ್ತಿಯಲ್ಲಿ ನನಗೆ ಭಾಗವಿಲ್ಲ ಅನ್ನುತ್ತಾರೆಯಲ್ಲವೆ. ಅದೂ ಒಂದು ಲೋಪವೇ. ಮುಸ್ಲಿಮ್ ಹೆಂಗಸರಿಗಿದ್ದಷ್ಟಾದರೂ ನನಗೆ ಸ್ತ್ರೀಧನದ ಹಕ್ಕು ಬೇಡವೆ? ನನ್ನ ತಮ್ಮನಿಗೆ ಬಂದುದರಲ್ಲಿ ಅರ್ಧದಷ್ಟು. ನನ್ನ ಆಸ್ತಿಯನ್ನು ನನ್ನ ಮನಸ್ಸಿಗೆ ಬಂದಂತೆ ಬಳಸಿಕೊಳ್ಳಲು ನನಗೆ ಅಧಿಕಾರ ಬೇಡವೆ? ಕುರುಡನೋ ಕುಂಟನೋ, ಮನುಷ್ಯನೋ ಮೃಗವೋ, ಕುಡುಕನೋ ಸಿಡುಕನೋ, ಬಡವನೋ ಭಾಗ್ಯವಂತನೋ ಯಾರಿಗೋ ಕಟ್ಟಿಬಿಟ್ಟರಾಯಿತು; ಆಮೇಲೆ ಚಿಂತೆಯೇ ಇಲ್ಲ. ಅವನು ನನ್ನನ್ನು ಬಿಟ್ಟರೂ ಸರಿಯೆ, ಇನ್ನೊಬ್ಬಳನ್ನು ಮದುವೆ ಮಾಡಿಕೊಂಡು ಅವಳ ಚಾಕರಿ ನನ್ನಿಂದ ಮಾಡಿಸಿದರೂ ಸರಿಯೆ. ಏನು ಮಾಡಿದರೂ ಸಮಾಜ ತೆಪ್ಪಗಿರುತ್ತದೆ. ಆತನಿಗೆ ಕೊಳಕು ರೋಗ ತಗುಲಿದಾಗ, ಆತ ನೀತಿ ಬಿಟ್ಟು ನಡೆದಾಗ, ನಪುಂಸಕನಾದಾಗ, ಗಂಡನನ್ನು ಬಿಟ್ಟು ಬೇರೆಯಿರುವ ಸ್ವಾತಂತ್ರ್ಯ—ಕಡೆಗೆ ಆತ ಸತ್ತಾಗ ಬೇರೆ ಮದುವೆಯಾಗುವ ಸ್ವಾತಂತ್ರ್ಯ ಬೇಡವೆ ನನಗೆ? ರೈಲು ಗಾಡಿಗಳಲ್ಲಿ ನನಗೆ ಪ್ರತ್ಯೇಕವಾದ ಗಾಡಿ, ಸಭೆಗಳಲ್ಲಿ ಪ್ರತ್ಯೇಕ ಸ್ಥಳ. ರೈಲಿನಲ್ಲಿ ಸಿನಿಮಾಗಳಲ್ಲಿ ಗಂಡಸರಿಗಾಗಿ ಪ್ರತ್ಯೇಕ ಸ್ಥಳವನ್ನೇಕೆ ಏರ್ಪಡಿಸಬಾರದು? ನನಗೆ ಮದುವೆಯಾದಾಗ ನನ್ನನ್ನು ಗಂಡಸಿಗೆ ಕೊಟ್ಟು ಮದುವೆ ಮಾಡಬೇಕಂತೆ. ಅದೇಕೆ? ನನ್ನ ಗಂಡನನ್ನು ನನಗೆ ಕೊಟ್ಟು ಮದುವೆ ಮಾಡಿದರೆಂದು ಹೇಳಬಾರದೆ? ದೇಶಾಭಿಮಾನವುಳ್ಳವರು ನಮ್ಮ ಹಿರಿಯರನ್ನೂ ಅವರ ಸಂಪ್ರದಾಯ ಸಂಸ್ಕೃತಿಗಳನ್ನೂ ಬಾಯಿ ತುಂಬ ಹೊಗಳುತ್ತಾರೆ. ಹಿಂದೂ ಸ್ತ್ರೀ ಬಹಳ ಸುಖಿಯಾಗಿದಾಳೆ ಎನ್ನುತ್ತಾರೆ ಅವರು. ಜಗತ್ತಿನ ಹೆಂಗಸರೆಲ್ಲ ಹಿಂದುಸ್ತಾನದ ಹೆಂಗಸರ ಸ್ಥಿತಿಯನ್ನು ನೋಡಿ ಕರುಬುತ್ತಿದಾರೆಂದು ಮದರಾಸಿನ ಪ್ರಧಾನಿ

ಹೇಳಿದರು. ನಿಜವೇ ? ಹೌದು, ಅಲ್ಲಿನ ಹಾಗೆ ಇಲ್ಲಿ ಕುಡುಕತನವಿಲ್ಲ ; ವಿವಾಹ ವಿಚ್ಛೇದದ ಅವಾಂತರವಿಲ್ಲ ; ವೃದ್ಧ ಕನ್ಯೆಯರಿಲ್ಲ ; ಗಂಡ ಸರ ಹಾಗೆ ಕುಣಿವ ಭ್ರಾಂತಿಯಿಲ್ಲ. ಆದರೂ ಹಿಂದೂ ಸ್ತ್ರೀಯ ಪಾಡನ್ನು ನೋಡಿ ಯಾರೂ ಅಸೂಯೆ ಪಡುವ ಹಾಗಿಲ್ಲ. ಸ್ವಲ್ಪ ಸಮಾಜ ಸುಧಾರಣೆ ಬಂದರೆ ಹಿಂದೂ ಸ್ತ್ರೀ ಯಾರ ಸ್ಥಿತಿಯನ್ನು ನೋಡಿಯೂ ಮತ್ಸರಗೊಳ್ಳುವ ಕಾರಣವಿಲ್ಲ.

೧೫

# ಮಗುವಿನ ಗೋಳು

ಒಂದು ಕಾಲಕ್ಕೆ ನಾನು ಮಗುವಾಗಿದ್ದೆ. ಅನಂತರ ಹುಡುಗ ನಾಗಿ ಬೆಳೆದು ದೊಡ್ಡವನಾದೆ. ಈಗ ನಾನು ಪ್ರಾಪ್ತ ವಯಸ್ಕನಾಗಿ ದೇನೆ. ಈಗ ನನಗೇ ಮಕ್ಕಳಾಗಿವೆ. ಪೂರ್ವ ಜನ್ಮ ಸುಕೃತದಿಂದ ನನ್ನ ಎಳೆತನದ ಅನುಭವಗಳೆಲ್ಲ ನನಗೆ ನೆನಪಿನಲ್ಲಿವೆ. ಹುಟ್ಟಿದ ಕೂಡಲೆ ನನ್ನ ಕಷ್ಟ ಪ್ರಾರಂಭವಾಯಿತು. ಮಗು ಹುಟ್ಟಿದಾಗ ಅಳ ಬೇಕಂತೆ. ಅಳದಿದ್ದರೆ ಹೊಡೆದು ಚಿವುಟಿ ಅಳುವ ಹಾಗೆ ಮಾಡುತ್ತಾರೆ. ಹೊರಗಿನ ಶೀತಕ್ಕೆ ಹುಟ್ಟಿದ ಮಗು ಕೂಡಲೇ ಉಸಿರಾಡಬೇಕು. ಹಾಗೆ ಮಾಡದಿದ್ದರೆ ಹೀಗೆ ಹೊಡೆದು ಚಿವುಟಿ ಉಸಿರಾಡುವಂತೆ ಮಾಡುತ್ತಾರೆ. ಶರೀರ ಶಾಸ್ತ್ರ ಬಲ್ಲವರು ಹೇಳುವ ವ್ಯಾಖ್ಯಾನ ಇದು. ಇದ್ದರೂ ಇದ್ದೀತು. ಹೊರಗಿನ ತಂಗಾಳಿ ತಗಲಿ ಮಗುವಿನ ಎದೆ ಉಸಿರಾಡುವ ಹಾಗೆ ಪ್ರಕೃತಿ ಮಾಡಿದ ಉಪಾಯ ಮೃದುವಾದುದು, ಹಾಯಾದುದು. ಅದಕ್ಕೆ ಬದಲು ಮನುಷ್ಯ ಮಾಡುವ ಉಪಾಯ ಕ್ರೂರವಾದುದು. ನನ್ನನ್ನು ಉಸಿರಾಡಿಸಿ ಬದುಕಿಸಲು ಮೊದಲು ಪ್ರಾರಂಭವಾದ ಕ್ರೌರ್ಯ ನಾನು ಮಕ್ಕಳನ್ನು ಹೊಡೆಯುವ ಹಾಗೆ

ಆಗುವ ತನಕ ನಿಲ್ಲದು. ನಾನು ಪಟ್ಟ ಕಷ್ಟವೆಲ್ಲ ನನಗೆ ನೆನಪಿದೆ. ಆದುದರಿಂದಲೇ ತಂದೆಗಳಾದವರು ತಮ್ಮ ಮಕ್ಕಳನ್ನು ಬೆಳೆಸುವಾಗ ಜಾಗರೂಕರಾಗಿರಲಿ ಎಂದು ಎಚ್ಚರಿಕೆ ಕೊಡುತ್ತೇನೆ.

ಹಿಂದೂಗಳಲ್ಲಿ ಹೆಣ್ಣಿಗೆ ೧೫ ತುಂಬುವ ಮೊದಲೇ ಮಗುವಾಗುತ್ತದೆ. ಈ ಬಾಲ ಮಾತೆಗೆ ಮಗುವನ್ನು ಬೆಳೆಸುವ ರೀತಿ ಗೊತ್ತಿರುವುದಿಲ್ಲ. ತನ್ನ ಪೋಷಣೆ ಮಾಡಿಕೊಳ್ಳುವುದೇ ಸರಿಯಾಗಿ ತಿಳಿಯದ ಹಸುಳೆ ಮಗುವನ್ನು ಹೇಗೆ ನೋಡಿಕೊಂಡಾಳು. ಹುಡುಗಿಯಾದ್ದರಿಂದ ನಿದ್ದೆ ಕಟ್ಟಲಾರಳು; ತನ್ನ ಸೌಖ್ಯವನ್ನು ಬಿಡಲಾರಳು. ಮಗುವೆಂದರೆ ತಂದೆತಾಯಿಗಳಿಗೆ ಒಂದು ಪೀಡೆ. ಆದ್ದರಿಂದ ಅತ್ತಾಗಲೆಲ್ಲ ನನಗೆ ಏಟೇ ಸಿದ್ಧ. ಇವನು ಯಾಕೆ ಅಳುತ್ತಾನೆ ಎಂದು ವಿಚಾರಿಸುವವರೇ ಇಲ್ಲ. ನನ್ನ ತಾಯಿ ಅಪಥ್ಯ ಮಾಡಿದರೆ ನನಗೆ ಒಂದೊಂದು ಸಲ ಹೊಟ್ಟೆ ನೋವು ಬರುತ್ತದೆ. ಗಾಳಿಗೆ ನನ್ನನ್ನು ಬಿಟ್ಟು, ಬಯಲಲ್ಲಿ ನನಗೆ ಸ್ನಾನ ಮಾಡಿಸಿ, ಒಮ್ಮೊಮ್ಮೆ ನನಗೆ ಕಿವಿ ಶೂಲೆ ಬರುವ ಹಾಗೆ ಮಾಡುತ್ತಾರೆ. ಮತ್ತೊಮ್ಮೆ ಜ್ವರ, ವಾತ ಬಂದವು. ನನ್ನ ಹಣೆಗೆ ಬರೆಯಿಟ್ಟು, ಮೂಗು ಚಿವುಟಿ, ಕಣ್ಣಿಗೆ ಮದ್ದು ಹಾಕಿ, ಮೂಗಿಗೆ ಘಾಟಾದ ಉಪ್ಪು ಮೂಸಿಸಿ ನನ್ನ ವಾಯುವಿಕಾರವನ್ನು ಹೋಗಲಾಡಿಸಿ ನನ್ನನ್ನು ಬದುಕಿಸಿದ್ದು ನಿಜ. ಆದರೆ ಆ ಉಪಚಾರ ವಿಧಾನ ನೆನಪಾದರೆ ಇನ್ನೂ ಭಯವಾಗುತ್ತದೆ. ಈಗಿದ್ದಷ್ಟು ಬುದ್ಧಿ ಆಗೆಲ್ಲಿಯದು ನನಗೆ? ಕೈಗೆ ಏನು ಕೊಟ್ಟರೂ, ಆಟದ ಸಾಮಾನು ಕೊಟ್ಟರೂ ಮೊಟ್ಟ ಮೊದಲು ಬಾಯಿಯೊಳಗಿಟ್ಟುಕೊಂಡು ತಿನ್ನುವುದೇ ನನ್ನ ಚಪಲ. ತಿನ್ನುವುದಕ್ಕೆ ಆಗದಿದ್ದರೆ ಅತ್ತುಬಿಡುತ್ತಿದ್ದೆ. ಸರಿ, ಅತ್ತರೆ ಏಟು; ಗೊತ್ತೇ ಇದೆ ಬಾಯಿ ಮುಚ್ಚು ಎನ್ನುವದೊಂದೇ ಮಾತು. ಬೇರೆ ಇಲ್ಲವೇ ಇಲ್ಲ. ಎದೆ ತುಂಬ ಅಳುವು ತುಂಬಿರಲು, ತಲೆ ತುಂಬ ಸಿಟ್ಟು ಇರಲು, ಮೈಯೆಲ್ಲ ಕಾವೇರಿ ಕೆಂಪಗಾಗಿರಲು ನಾನು ಬಾಯಿ ಮುಚ್ಚುವುದು ಹೇಗೆ? ಇಂಜಿನ್ನಿನಿಂದ ಬರುವ ಹಬೆಯನ್ನು ತಟ್ಟನೆ ನಿಲ್ಲಿಸುವ ಹಾಗೆ ಅಳುವನ್ನು ಹೇಳಿದ ಕೂಡಲೇ ನಿಲ್ಲಿಸ

ಬಂದೀತೆ? ಮನಸಿನ ಉದ್ರೇಕವನ್ನು ಗುಂಡಿ ಒತ್ತಿದ ಹಾಗೆ ಪ್ರಾರಂಭಿಸಿ ಮುಗಿಸಿ ಮಾಡಲು ಬರುತ್ತದೆಯೇ? ಏಟಿನ ಹೆದರಿಕೆಗೆ ತಾನೆ ಅದು ಸಾಧ್ಯವೆ? ನನಗೆ ಅಳು ನಿಲ್ಲಿಸಲು ಸಾಧ್ಯವೂ ಇರಲಿಲ್ಲ; ಅಳು ನಿಲ್ಲಿಸಲೂ ಇಲ್ಲ. ಸರಿ, ಮತ್ತೆ ಏಟು ಬಿದ್ದರೆ ಮತ್ತೆ ಅಳು. ಅತ್ತರೆ ಪುನಃ ಏಟು. ಈ ಗಿರಗಿಟ್ಟಿ ರಾಟೆಯಲ್ಲಿ ನಾನು ಸೋತು ಸೊಪ್ಪಾಗುತ್ತಿದ್ದುದೊಂದೇ ಫಲ.

ಕೊಂಚ ದೊಡ್ಡವನಾದೆ. ತಪ್ಪು ಹೆಜ್ಜೆಯಿಟ್ಟೆ; ನಡೆಯಬೇಕಾದಲ್ಲಿ ಓಡಿದೆ; ಓಡಿ ಬಿದ್ದೆ. ಬಿದ್ದದ್ದಕ್ಕೆ ಬೈಗಳಾದವು. ಓಡಿದರೆ ಬಿದ್ದರೆ ಬೈಗಳು ತಪ್ಪುತ್ತಿರಲಿಲ್ಲ. ಹಿಂದೂ ಗೃಹಗಳಲ್ಲಿ ಬಾಗಲಿಗೆ ದೊಡ್ಡ ಹೊಸಲುಗಳಿರುತ್ತವೆ. ದಾಟುವುದು ಕಷ್ಟ. ಒಂದು ಕೋಣೆಯಿಂದ ಮತ್ತೊಂದು ಕೋಣೆಗೆ ಹೋಗಬೇಕಾದರೆ ಮೆಟ್ಟಿಲುಗಳು ಬೇರೆ. ಅವನ್ನು ಜೋಪಾನವಾಗಿ ಹತ್ತಿ ಇಳಿಯಬೇಕು. ಭವಂತಿ ಮನೆಗಳಲ್ಲಿ ಮಳೆನೀರು ನಿಂತು, ಹರಿದುಹೋಗಲು ತಗ್ಗುಗಳು ಬೇರೆ. ಪಡಸಾಲೆಯಲ್ಲಿ ನೆಲ ಸಮನಲ್ಲ. ಎತ್ತರ ತಗ್ಗು ಇರುತ್ತವೆ. ಸಲೀಸಾಗಿ ಓಡಾಡೋಣವೆಂದರೆ ಇವೆಲ್ಲ ನನಗೆ ಅಡ್ಡಿಗಳು. ಹುಡುಗರ ಸ್ವಭಾವವೇ ಅಂಥಾದ್ದು; ನಡೆಯುವಲ್ಲಿ ಓಡುತ್ತಾರೆ. ಬಾಳು ಎಂದರೆ ಸಿಪಾಯಿಗಿರಿಯೆ? 'ಟೆಂಚನ್' ನಿಲ್ಲುವುದು, ಎಡಬಲ ತಿರುಗುವುದು, ಕಾಲು ತಾಳಕುಟ್ಟುವುದು ಇವೇಯೆ ಬದುಕು? ನನಗೆ ಎಷ್ಟೋ ಉತ್ಸಾಹ. ಓಡಿದ್ದೂ ಓಡಿದ್ದೇ, ಬಿದ್ದದ್ದೂ ಬಿದ್ದದ್ದೇ. ಏಟೂ ತಿಂದದ್ದೇ.

ದೊಡ್ಡವನಾದ ಮೇಲೆ ಬೀದಿಯಲ್ಲಿ ಓಡಾಡದಂತೆ ಅಡ್ಡಿಮಾಡಿದರು. ಮೋಟಾರುಗಳ ಓಡಾಟ, ಜನಂಗದ್ದಲಗಳಿಂದ ಪ್ರಾಣಕ್ಕೇ ಅಪಾಯವಿದ್ದದ್ದು ನಿಜವೆ. ಬೀದಿಯ ಧೂಳು ಕುಡಿದರೆ ಆರೋಗ್ಯವೂ ಕೆಡುತ್ತದೆ. ಆದರೆ ಐದಾರು ವರ್ಷದ ಪ್ರಾಯಕ್ಕೆ ಇಷ್ಟೆಲ್ಲ ತರ್ಕ ಹೇಗೆ ಬರಬೇಕು? ನಮ್ಮ ತಾಯಿಯ ತವರುಮನೆಯೂ ನಮ್ಮೂರಿನಲ್ಲೇ ಇತ್ತು. ಎಷ್ಟೋ ಸಲ ನಾನೊಬ್ಬನೇ ನಮ್ಮ ಅಜ್ಜಿಯ ಮನೆಗೆ ಹೋಗುತ್ತಿದ್ದೆ. ಒಂಟಿಯಾಗಿ ಹೋದರೆ ಏಟು ಬೀಳುತ್ತಿತ್ತು. ಮಗು

ವಾಗಿದ್ದಾಗ ನನಗೆ ತಂದೆಯ ಜೊತೆಯಲ್ಲಿ ಊಟಮಾಡಲು ಮಲಗಲು ಬಹಳ ಆಸೆ. ತಂದೆತಾಯಿಗಳಿಬ್ಬರಲ್ಲಿ ತಂದೆ ನನ್ನನ್ನು ಮುದ್ದಿಸುತ್ತಿದ್ದರು. ತಾಯಿ ಅದಕ್ಕಾಗಿ ಅವರನ್ನು ಆಕ್ಷೇಪಿಸುತ್ತಿದ್ದಳು. ಅದಕ್ಕೆ ಕಾರಣವಿತ್ತು. ನಾನು ತಾಯಿಯನ್ನು ಹಗಲೆಲ್ಲ ಗೋಳಾಡಿಸುತ್ತಿದ್ದೆ. ತಂದೆ ಸಂಜೆಗೆ ಮನೆಗೆ ಬರುತ್ತಿದ್ದರು. ಬರುವಾಗ ಏನಾದರೂ ತಿಂಡಿಯನ್ನು ತರುತ್ತಿದ್ದರು. ಆದ್ದರಿಂದ ತಾಯಿಗಿಂತ ತಂದೆಯನ್ನು ಕಂಡರೆ ನನಗೆ ಹೆಚ್ಚು ಆಸೆಯಾಗಿತ್ತು. ತಾಯಿ ಆಗಾಗ ನನ್ನನ್ನು ಹೊಡೆಯುತ್ತಿದ್ದಳು. ತಂದೆ ಮನೆಗೆ ಬಂದಾಗ ತಾಯಿ ಹೊಡೆದಳೆಂದು ದೂರು ಹೇಳುತ್ತಿದ್ದೆ. ಇದರಿಂದ ತಾಯಿಗೆ ಮತ್ತಷ್ಟು ಸಿಟ್ಟು ಬರುತ್ತಿತ್ತು. ಒಂದೊಂದು ಸಲ ತಂದೆಗೂ ಸಿಟ್ಟುಬರುತ್ತಿತ್ತು. ಆಗ ಗಟ್ಟಿಯಾಗಿ ಕೂಗಾಡಿ ಬೈಯುತ್ತಿದ್ದರು. ಕೆಲವು ಕಾಲದ ಮೇಲೆ ತಂದೆಯವರೂ ನನ್ನನ್ನು ಬಲಾತ್ಕಾರವಾಗಿ ಹೊಡೆಯಲು ಪ್ರಾರಂಭ ಮಾಡಿದರು. ಕೈಗೆ ಸಿಕ್ಕದ್ದನ್ನು ತೆಗೆದುಕೊಂಡು ಅದರಿಂದ ಹೊಡೆಯಲು ಪ್ರಾರಂಭವಾಯಿತು. ನೆಲಕ್ಕೆ ಉರುಳಿಸಿ, ಕಾಲಿಂದ ಒದೆದು, ಎದೆಯಮೇಲೆ ಗುದ್ದಿ ಹಿಂಸಿಸುತ್ತಿದ್ದರು. ಆಮೇಲೆ ಅಯ್ಯೋ ಎಂದು ಪಶ್ಚಾತ್ತಾಪ ಪಡುತ್ತಿದ್ದರಂತೆ. ಆದರೇನು ? ಕುಡುಕರ ಹಾಗೆ ಅವರ ನಡೆವಳಿಯಾಗಿತ್ತು. ಪಶ್ಚಾತ್ತಾಪ ಪಟ್ಟರೇನು ಬಂತು? ಮತ್ತೆ ನಾಯ ಬಾಲವೇ.

ಇನ್ನೂ ಸ್ವಲ್ಪ ಬೆಳೆದಮೇಲೆ ಶಾಲೆಗೆ ಹೋಗತೊಡಗಿದೆ. ಅಲ್ಲಿ ಉಪಾಧ್ಯಾಯರಿಂದ ಏಟು ತಿನ್ನಬೇಕಾಯಿತು. ಎರಡು ಎರಡು ಎಷ್ಟು ಎಂದರೆ ಹೇಳದಿದ್ದಕ್ಕೆ ಅವರ ಏಟು. ಭಾಷೆಯಲ್ಲಿ ಬಲವಾದರೂ ಗಣಿತದಲ್ಲಿ ನಾನು ಯಾವಾಗಲೂ ಅಷ್ಟಷ್ಟೇ. ಗಣಿತದಲ್ಲಿ ಒಂದು ನಂಬರು ಕಡಮೆ ಬಂದದ್ದರಿಂದ ನಾನು ಪ್ರೌಢಶಿಕ್ಷಣಕ್ಕೆ ಹೋಗಲಾಗಲಿಲ್ಲ. ಉಪಾಧ್ಯಾಯರು ಸದಾ ನಿದ್ದೆಮಾಡುತ್ತಿದ್ದರು. ನಮ್ಮ ಕೈಗಳಮೇಲೋ ಬೆನ್ನಿನ ಮೇಲೋ ಅವರ ಬೆತ್ತ ಆಡಿಸಿದರೆ ಆಯಿತು, ಅದೇ ಅವರ ಕೆಲಸ. ಮನೆ ಲೆಕ್ಕವಂತೂ ಯಾವಾಗಲೂ ಹೆಚ್ಚೇ.

ಒಂದು ಸಲ ಒಬ್ಬ ಉಪಾಧ್ಯಾಯರನ್ನು ರೇಖಾಗಣಿತದ ಪ್ರಶ್ನೆಯೊಂದನ್ನು ಕೇಳಿದೆ. ಅವರು ಅದನ್ನು ಮರೆಯಿಸಲು ಪ್ರಯತ್ನಮಾಡಿದರು. ನಾನು ಕೈಯಲ್ಲಾಡಿಸಿ ಪಕ್ಕದಲ್ಲಿದ್ದ ಹುಡುಗನಿಗೆ ಉಪಾಧ್ಯಾಯರಿಗೇ ಬರುವುದಿಲ್ಲವೆಂದು ಸನ್ನೆ ಮಾಡಿದೆ. ಅದಕ್ಕೆ ಆರು ಏಟು ಬಿತ್ತು. ನನ್ನ ಪುಣ್ಯಕ್ಕೆ ನನ್ನ ಓದು ಮುಗಿಯಿತು. ನಮ್ಮ ಮಕ್ಕಳೇ ಏನಾದರೂ ತಿರುಗಿಬಿದ್ದರೆ ಹೊರತು ನನ್ನನ್ನು ಹೊಡೆಯುವವರು ಯಾರೂ ಇಲ್ಲ. ಒಳ್ಳೆಯ ಕಾಲ ಬಂದು ಎಲ್ಲರೂ ಶಿಶುಮನೋಧರ್ಮವನ್ನು ತಿಳಿದುಕೊಂಡು ಹುಡುಗರನ್ನು ಹೊಡೆಯುವುದನ್ನು ಬಿಟ್ಟುಬಿಡಲಿ. ಮನೆಯ ಮಮತೆಗಳಿಗೆ ಸಾಧ್ಯವಾಗದುದು ಶಾಸನಕ್ಕಾದರೂ ಆದೀತೆಂದು ಬಯಸಿದರೆ ಪೋಲೀಸರ ಲಾಠೀ ಪ್ರಹಾರಗಳನ್ನು ತಿನ್ನಬೇಕಾಯಿತು. ನಮ್ಮ ಮಂತ್ರಿಗಳು ಈ ಹಿಂಸೆಯನ್ನು ಶಾಶ್ವತವಾಗಿ ನಿಲ್ಲಿಸಲಿ. ಇಲ್ಲದಿದ್ದರೆ ಕಾಂಗ್ರೆಸ್ ಏಟು ಎಂದು ಮತ್ತೇನಾದರೂ ಸಪ್ಪನೆಯದನ್ನು ಕಂಡುಹಿಡಿಯಲಿ.

೧೬

## ಹಿಂದೂ ಮಹಿಳೆ

ಹಿಂದೂ ಸ್ತ್ರೀಯರನ್ನು ಗಂಡಸರು ಹೇಗೆ ನಡಸಿಕೊಳ್ಳುತ್ತಾರೆ ಎಂದು ಯಾರಾದರೂ ಹಿಂದೂ ಮಹಿಳೆಯನ್ನು ಕೇಳಿದರೆ, ಮೊಟ್ಟಮೊದಲು ಆಕೆ ಗಂಡಸರು ಮಾಡುವ ಸ್ತ್ರೀವರ್ಣನೆ ಸ್ತೋತ್ರಗಳನ್ನು ನಿಂದಿಸಿ, ತಮ್ಮ ಹೆಂಗಸರ ವಿಷಯದಲ್ಲಿ ಗಂಡಸರು ತೋರುವ ಔದಾಸೀನ್ಯವನ್ನು ಖಂಡಿಸಿಯಾರು. ಈ ನಿಂದೆ ಖಂಡನೆಗಳೇಕೆ? ಸ್ತೋತ್ರ ವರ್ಣನೆಗಳು ಪ್ರಾಮಾಣಿಕವಾಗಿರಬೇಕು, ಕಾರ್ಯಸಾಧನೆಯ ಭಟ್ಟಂಗಿತನವಾಗಬಾರದು. ನಮ್ಮ ತಾಯಿ ತಂಗಿಯರನ್ನು ಹೆಂಡಿರನ್ನು

ಅವರ ಶಾಂತತೆ, ಸ್ಥೈರಣೆ, ಧೈರ್ಯಗಳಿಗಾಗಿ ನಾವು ಅತಿಯಾಗಿ ಹೊಗಳುತ್ತೇವೆ. ಧೈರ್ಯದಲ್ಲಿ ವೀರಾಧಿವೀರರ ಸಮಾನ, ಶಾಳ್ಮೆಯಲ್ಲಿ ದೇವತೆಗಳ ಸರಿಸಮ, ವಿಶ್ವಾಸದಲ್ಲಿ ಆಪ್ತಮಿತ್ರರ ಹಾಗೆ. ಉದ್ದೇಶ ಹೇಗೇ ಇದ್ದರೂ ಪರಿಣಾಮದಲ್ಲಿ ಈ ಎಲ್ಲ ಸ್ತೋತ್ರದ ಫಲ ಸ್ವಾರ್ಥಸಾಧನೆಯಾದರೆ ಮನುಷ್ಯ ಸ್ವಭಾವಕ್ಕೇ ಇದು ವಿರೋಧವಾಗುತ್ತದೆ. ಹಿಂದಿನ ಸ್ವರ್ಣಯುಗದಲ್ಲಿ ಸ್ತ್ರೀಯರ ಆದರ್ಶವು ಸಮಾಜವನ್ನು ಕಾಪಾಡಿ, ಭದ್ರಗೊಳಿಸಿ ಏಳಿಗೆಗೆ ತಂದಿತು. ಗಾಳಿ ಹೊಡೆದತ್ತ ತಿರುಗುವ ಪುರುಷರ ಚಪಲಚಿತ್ತಕ್ಕೆ ಅಂಕುಶವಾಗಿ ನಿಂತು, ಸಂಪ್ರದಾಯಗಳ ಮಹಾನಿಧಿಯನ್ನು ಕೂಡಿಸಿ ಸಂಪ್ರದಾಯ ಶೀಲತೆಯನ್ನು ರೂಪಿಸಿತು. ಆದರೆ ಈಗ ಸಂಪ್ರದಾಯಗಳು ಏಳಿಗೆಗೆ ದಾರಿಗೊಡದೆ, ಕೊಳೆತು ಹೋಗಿ ಅಂಕುಶವಾಗುವ ಬದಲು ಆತಂಕವಾಗಿವೆ. ಅನೇಕ ಕಾರಣಗಳು ಸೇರಿ ಹೀಗಾಗಿದೆ. ದೇಶದಲ್ಲಿ ರಾಜಕೀಯ ನಾಯಕರ ಧರ್ಮಪೀಠಾಧಿಪತಿಗಳ ನಡುವೆ ಬೆಳೆಯುತ್ತಿರುವ ಭಿನ್ನಭಾವ ಈ ಕಾರಣಗಳಲ್ಲಿ ಬಹು ಮುಖ್ಯವಾದುದು. ಹಿಂದುಸ್ತಾನದಲ್ಲಿ ದೊರೆ ಬರೀ ರಾಜ್ಯವಾಳುವ ಪಾಳಿಯಗಾರನಾಗಿರಲಿಲ್ಲ. ಧರ್ಮದೇವತೆಯೂ ಆಗಿದ್ದ. ಪರಕೀಯರ ಆಡಳಿತಕ್ಕೆ ನಮ್ಮ ಧರ್ಮಾಚರಣೆಯಲ್ಲಿ ಕೈ ಹಾಕುವ ಬೆನ್ನುಮೂಳೆಯೆಲ್ಲಿದೆ? ಆಚಾರದಲ್ಲಿ ಕಾಲಾನುಗುಣವಾಗಿ ಭೇದವನ್ನು ನಿರ್ಣಯಿಸುವುದು ಹಾಗಿರಲಿ— ಭೇದ ರೂಢಿಗೆ ಬಂದರೆ ಅದನ್ನು ನೋಡಿ ಮೂಗು ಮುರಿಯುತ್ತದೆ. ಅದನ್ನು ವಿರೋಧಿಸುತ್ತದೆ. ಅಷ್ಟೇ ಅಲ್ಲ. ಪರಕೀಯ ರಾಜನು ಬಂದರೆ ತನ್ನ ಸಂಪ್ರದಾಯ ರುಚಿಗಳನ್ನು, ಸಂಸ್ಥೆ ಶಾಸನಗಳನ್ನು, ಮಾನ ಮರ್ಯಾದೆಗಳನ್ನು ತನ್ನ ಹಿಂದೆಯೆ ತರುತ್ತಾನೆ. ನಮ್ಮದನ್ನು ಬಿಟ್ಟು ವಿದೇಶೀ ಸಂಸ್ಕೃತಿಯ ಅನುಕರಣದ ಹುಚ್ಚು ದೇಶದಲ್ಲಿ ಹರಡುತ್ತದೆ. ಜನರ ಬುದ್ಧಿಭಾವ ಬದಲಾಗುತ್ತದೆ. ಸಂಪ್ರದಾಯ ಶರಣರಾದವರಿಗೆ ಈ ವೈಪರೀತ್ಯವನ್ನು ನೋಡಿ ಅಂಜಿಕೆಯಾಗುತ್ತದೆ. ಏನೋ ಪ್ರಳಯವಾದಂತೆ ಅನಿಸುತ್ತದೆ. ಪರಕೀಯರ ಪ್ರಭಾವದಿಂದ ಮನೆತನದ

ಸಂಪ್ರದಾಯ ಸಂಸ್ಕೃತಿಗಳು ನಿರ್ನಾಮವಾಗದಂತೆ ನೋಡಿಕೊಳ್ಳುವ ಕಾವಲುಗಾರಳಾಗುತ್ತಾಳೆ ಹೆಂಗಸು.

ಹಿಂದೂ ಮಹಿಳೆ ಹೀಗೆ ಸಂಸ್ಕೃತಿ ಸಂರಕ್ಷಕಳಾಗಿ ಕೆಲಸ ಮಾಡಿರದಿದ್ದರೆ ಇದುವರೆಗೇ ಹಿಂದೂ ಸಮಾಜದಲ್ಲಿ ನಾನಾ ವ್ಯತ್ಯಾಸಗಳಾಗಿ ಹೋಗಬೇಕಾಗಿತ್ತು. ಈ ಅಮೂಲ್ಯ ಸೇವೆಗಾಗಿ ಆಕೆಯನ್ನು ಹಿಂದೂ ಪುರುಷರು ಹೊಗಳಿದಾರೆ. ಯುಗ ಯುಗಾಂತರಗಳಿಂದ ಆಕೆ ಈ ಕಾವಲು ಕೆಲಸ ಮಾಡಿ ಮಾಡಿ ವ್ಯತ್ಯಾಸ, ಪರಿವರ್ತನ ಎಂದರೆ ಆಕೆಗೆ ಸೇರದಾಗಿದೆ. ಪ್ರಪಂಚದಲ್ಲಿ ನಿರ್ದೋಷವಾದ ಗುಣವೇ ಇಲ್ಲವಷ್ಟೆ. ಆದರೆ ಇದರಿಂದ ಆಕೆಗೆ ದೃಷ್ಟಿ ಸಂಕೋಚವಾಗಿದೆ. ಈ ಕಾವಲಿ ಕೆಲಸ, ಕಾವಲು ಕೆಲಸಗಳಿಂದ ಆಕೆಗೆ ಮುಕ್ತಿ ಕೊಡಬೇಕಾದ ಕಾಲ ಬಂದಿದೆ. ಹಿಂದೂ ಸಮಾಜವನ್ನು ಮತ್ತೆ ವ್ಯವಸ್ಥಿತವಾಗಿ ರಚಿಸುವ ಮಹಾಕಾರ್ಯವನ್ನು ಆಕೆ ಕೊಳ್ಳಬೇಕು. ಹಿಂದಿನ ಕಾಲದ ಕುರುಡು ನಂಬಿಕೆಯನ್ನು ಬಿಟ್ಟು ಹೊಸ ಕಾಲದ ವಿಚಾರಗಳನ್ನು ಆಕೆ ಗ್ರಹಿಸಬೇಕು. ಈ ಪುನರುಜ್ಜೀವನ ಪುನರ್ನಿರ್ಮಾಣ ಕಾರ್ಯದಲ್ಲಿ ಆಕೆಗೆ ಗಂಡಸರ ಸಹಾಯ ಅತ್ಯಗತ್ಯ. ಅನೇಕ ವೇಳೆ ಗಂಡಸರು ಆಕೆಗೆ ನೆರವಾಗದೆ ಪ್ರಗತಿಗೆ ಆಕೆ ವಿರೋಧಿಯೆಂದು ಆಕೆಯನ್ನು ಜರಿಯುತ್ತಾರೆ. ಹೌದು. ಆಕೆಗೆ ಪರಿವರ್ತನೆ ಅಗತ್ಯ, ಹಿತ ಅನ್ನಿಸದಿದ್ದರೆ ಆಕೆ ಏನು ಮಾಡಿಯಾಳು? ತನಗೆ ತಿಳಿದಿದ್ದೆಲ್ಲ ಹೆಂಗಸಿಗೆ ತಿಳಿದಿದೆಯೆಂದೂ ತಾನು ಮಾಡಿದಂತೆ ಆಕೆ ಮಾಡಬೇಕೆಂದೂ ಗಂಡಸು ತಿಳಿಯುತ್ತಾನೆ. ಸಮಯಾನುಸಾರ ಹೆಂಗಸು ಗಂಡಸಿಗೆ ಸರಿಸಮ ಎಂಬಂತೆ ನಡೆದುಕೊಂಡರೂ ಗಂಡಸು ಮಾತ್ರ ಆಕೆ ತನ್ನ ಸರಿಜೋಡಿ ಎಂದು ತಿಳಿದುಕೊಳ್ಳುವುದಿಲ್ಲ. ಹಾಗೆ ನಡೆದುಕೊಳ್ಳುವುದಿಲ್ಲ. ನಿಜವಾಗಿ ನೋಡಿದರೆ ಗಂಡಸು ಹೆಂಗಸಿಗೆ ಈ ಸಮಾನ ಸ್ವಂಥತೆಯನ್ನು ಅನುಗ್ರಹ ಎಂದು ಕೊಡಬೇಕಾಗಿಲ್ಲ. ಆಕೆಗೆ ಆ ಹಕ್ಕು ಇದ್ದೇ ಇದೆ. ಅದನ್ನು ಅವರಿಗೆ ಕೊಡುವುದು

ಗಂಡಸರ ಕರ್ತವ್ಯ. ಸಮಾನತೆ ತೋರಿಸದಿದ್ದರೆ ಹೆಣ್ಣು ಗಂಡಿನ ಸಹಕಾರ ಬಲವಂತ ಮಾಘಸ್ನಾನವಾಗುತ್ತದೆ. ಸಂದರ್ಭ ಸಿಕ್ಕಾಗ ಸಹಕಾರ ಇಲ್ಲದಾಗುತ್ತದೆ. ಹೀಗಾಗಿಯೆ ಸಮಾಜ ಸುಧಾರಣೆಯಲ್ಲಿ ನಾವು ಹಿಂದುಳಿದಿರುವುದು. ಗಂಡಸು ಹೆಂಗಸಿಗೆ ಅಂತರಂಗದಲ್ಲಿ ಸ್ಥಳ ಕೊಟ್ಟಿಲ್ಲ. ಗಂಡಿನ ಹಿಂದೆ ಹೆಣ್ಣು ನಡೆದು ಬರಬೇಕು, ಹಿಂಬಾಲಿಸಬೇಕು. ಕಡೆಗೆ ಹೆಣ್ಣು ಇವನಿಗೆ ಹೊರೆಯಾಗಿ ಭಾರವಾಗುತ್ತಾಳೆ; ಆತಂಕವಾಗುತ್ತಾಳೆ. ಅಲ್ಲಿಂದ ಈಕೆಗೆ ಸಹಸ್ರನಾಮ. ಅಜ್ಞಾನದ ಮೊಟ್ಟೆ, ಅವಿದ್ಯೆಯ ಕೂಪ ಇತ್ಯಾದಿ. ಗಂಡಸಿನ ಕರ್ತವ್ಯಲೋಪಕ್ಕೆ ಹೆಂಗಸು ಜವಾಬ್ದಾರಳಾಗಬೇಕಾಗುತ್ತದೆ. ಆಕೆ ಮಾಡಿದ ಪಾಪಕ್ಕಿಂತ ನಿಜವಾಗಿ ನಾವು ಕೊಟ್ಟ ಶಾಪವೇ ಹೆಚ್ಚು.

ನಮ್ಮ ತಾಯಿ ತಂಗಿ ಹೆಂಡತಿಯರ ಜೊತೆಗೆ ಕುಳಿತು ಎಷ್ಟು ಸಲ ನಾವು ಅವರಿಗೆ ಹೇಳಿಲ್ಲ? ಬಾಲ್ಯ ವಿವಾಹ ನಮ್ಮ ದೇಶಕ್ಕೆ ಎಷ್ಟು ತೊಂದರೆ ಮಾಡಿದೆ; ನಮ್ಮ ವಿದ್ಯಾಭ್ಯಾಸ ಹೇಗೆ ನಮಗೆ ಅನಿಷ್ಟಕಾರಕವಾಗಿದೆ; ಖಾದಿ, ನೂಲುವುದು ಮನೆಮನೆಗೂ ಒಂದು ವ್ರತವಾದಂತೆ ಆಗಬೇಕು; ಹೀಗೆ ನಾವು ಹೇಳಿದಾಗ ಹೊಸ ಕಾಲದ ವಿಚಾರವನ್ನು ಅವರು ಬೇಗನೆ ಗ್ರಹಿಸಿ ನಮಗೆ ನೆರವಾಗುವದಾಗಿ ಎಷ್ಟು ಸಲ ಹೇಳಿಲ್ಲ. ನಮಗೇನೋ ನೀವು ಹೇಳುವ ಪರಿವರ್ತನ ಸಮ್ಮತವೇ ಆದರೆ ನಾಲ್ಕು ಜನರ ಮಾತೋ ಎಂಬುದೇ ಎಲ್ಲರೂ ಕೇಳುವ ಪ್ರಶ್ನೆ. ಈ ನಿರಾಶೆಯ ನಿರುತ್ಸಾಹದಲ್ಲಿ ಎಲ್ಲವೂ ಶೂನ್ಯವೇ. ನಾವೆಲ್ಲ ಈ ಸಮಾಜ ಸುಧಾರಣೆಯ ತೊಡಕುಗಳನ್ನು ನಮ್ಮ ಹೆಂಗಸರಿಗೆ ತಿಳಿಯ ಹೇಳಿದರೆ ಅವರು ಸಹಾನುಭೂತಿಯನ್ನು ತೋರಿಸಿಯಾರು; ಸಹಾನುಭೂತಿಯಷ್ಟೇ ಏಕೆ, ಸಹಕರಿಸಿಯಾರು. ಗಂಡಸು ಮನೆಯ ಹೊರಗಡೆ ಸಾವಿರ ಕಡೆ ಹೋರಾಡಬೇಕು. ಇದರಲ್ಲಿ ಬಳಲಿ ಸೊಪ್ಪಾಗಿ ಮನೆಯಲ್ಲೂ ಹೋರಾಡಬೇಕೆಂದರೆ ಅವನಿಗೆ ಬಲವೂ ಸಾಲದು, ಇಷ್ಟವೂ ಇಲ್ಲ. ಹೋರಾಟಕ್ಕಿಂತಲೂ ವಿದ್ಯಾಭ್ಯಾಸ ಹೆಚ್ಚು ಕಷ್ಟಕರವಾಗಿದೆ. ಆದ್ದರಿಂದ ಹೆಂಗಸರ ಲೋಪಗಳಿಗಾಗಿ

ಅವರನ್ನು ಜರಿಯುವುದರಲ್ಲಿಯೆ ಗಂಡಸರು ತೃಪ್ತರಾಗುತ್ತಿದಾರೆಯೆ ವಿನಾ ಅವರ ಮನಸ್ಸನ್ನು ವಿಶಾಲಗೊಳಿಸಿ, ಅವರ ಸಾಹಚರ್ಯ ಸಹಕಾರಗಳನ್ನು ಉಂಟುಮಾಡಿಕೊಳ್ಳರು. ಇದೇ ಹಿಂದೂ ಕುಟುಂಬದ ಮಹಾ ದೌರ್ಭಾಗ್ಯ. ಪ್ರಗತಿಯು ಮಹಾ ಶಕ್ತಿಗಳು ಧಾರಾಳವಾಗಿ ಇವರ ಮನಸ್ಸಿನ ಮೇಲೆ ಪ್ರಭಾವ ಬೀರುವಂಥ ಸನ್ನಿವೇಶಗಳಿಗೆ ನಮ್ಮ ಹೆಂಗಸರನ್ನು ಬಿಡುವುದೂ ಇಲ್ಲ. ಗಂಡಸರಾದರೂ ಅವರಿಗೆ ತಿಳಿಯ ಹೇಳಿ ಅವರನ್ನು ದಾರಿಗೆ ತರುವುದೂ ಇಲ್ಲ. ಸುಮ್ಮನೆ ತಾವು ಮಾಡಿದಂತೆ ಮಾಡಬೇಕೆಂದು ಹುಕುಂ ಮಾಡುತ್ತಾರೆ.

ಸದ್ಯಕ್ಕೆ ದೇಶದಲ್ಲಿ ಹರಡಿರುವ ಪ್ರಶ್ನೆ ಸ್ತ್ರೀಯರಿಗೆ ಗಂಡಸಿನೊಡನೆ ಸರಿಸಮವಾಗಿ ವಾರಸು ಪಕ್ಕಿರಬೇಡವೇ ಎಂಬುದು ಗಂಡನದಾಗಲಿ ತಂದೆಯದಾಗಲಿ, ಆಸ್ತಿಯಲ್ಲಿ ಸರಿ ಪಾಲು ಬೇಕು. ಈ ಸಮಸ್ಯೆಯನ್ನು ಕುರಿತು ವಿಸ್ತಾರವಾಗಿ ಚರ್ಚಿಸಲು ಇದು ಸ್ಥಳವಲ್ಲ. ಇಷ್ಟು ಮಾತ್ರ ನಿಜ. ಹೆಂಗಸರ ಈ ಕೋರಿಕೆ ತಪ್ಪು, ಅನ್ಯಾಯ ಎನ್ನುವವರು ಬಹಳ ಕಡಮೆ. ಆದರೆ ಒಂದು ಮಾತು ಲಕ್ಷ್ಯದಲ್ಲಿರಬೇಕು. ಸ್ತ್ರೀ ಸ್ವಾತಂತ್ರ್ಯವನ್ನು ಒಪ್ಪಿಕೊಂಡ ಮೇಲೆಯೂ ಪ್ರಗತಿಪರರಲ್ಲಿ ಮುಂದಾಳಾದ ಸುಧಾರಕನಿಗೂ ಕೂಡ ಹೆಂಗಸರಿಗೆ ಸಹಜವಾದ ಕೆಲವು ದೌರ್ಬಲ್ಯಗಳಿವೆಯೆಂಬ ನಂಬಿಕೆ ಸುಲಭವಾಗಿ ಹೋಗದು. ಒಬ್ಬೊಬ್ಬ ವ್ಯಕ್ತಿಯ ಮನೋ ದೌರ್ಬಲ್ಯವನ್ನು ಸ್ತ್ರೀ ಜನ ಸಹಜವಾದ ಲೋಪವೆಂದು ತಿಳಿಯುತ್ತಾನೆ. ಏನು ಕಾರಣವೋ ಏನೋ ಹೆಂಗಸಿಗೆ ಸಹಜವಾಗಿಯೇ ಸತ್ಯಾಸತ್ಯಗಳನ್ನು ಹಂಸಕ್ಷೀರ ನ್ಯಾಯದಂತೆ ಗ್ರಹಿಸಬಲ್ಲ ಶಕ್ತಿಯಿದ್ದರೂ ಆಕೆಗೆ ಮನೋದಾರ್ಢ್ಯವಿಲ್ಲವೆಂದೂ ಇದಮಿತ್ಥಂ ಎಂದು ನಿರ್ಧಾರ ಮಾಡುವ ಗುಣವಿಲ್ಲವೆಂದೂ ಜನರಲ್ಲಿ ರೂಢಿಯಾಗಿದೆ. ಹೆಂಗಸರು ಸ್ತೋತ್ರಪ್ರಿಯರೆಂದೂ ಸ್ತುತಿ ಮಾಡಿದವರಿಗೆ ಅವರ ಅನುಗ್ರಹವೆಂದೂ ಅನ್ನುತ್ತಾರೆ. ಈ ಕೀರ್ತಿ ಕೇವಲ ಹೆಂಗಸರಿಗೇ ಇಲ್ಲ; ಹೈಕೋರ್ಟು ನ್ಯಾಯಾಧೀಶರಿಗೂ ಇದೆ. ಆದರೆ ಹೆಂಗಸರ ಪಕ್ಷವೂ ವಿಚಾರ ಯೋಗ್ಯವಾಗಿದೆ. ಗಂಡಸರದು

ನಿರ್ಧಾರವಾದ ಸ್ವಭಾವ, ಅವರ ಮನಸ್ಸು ದೃಢ ಎಂದು ಅವರು ಹೇಳಿಕೊಳ್ಳುತ್ತಾರೆ. ಒಂದು ವೇಳೆ ಅದು ನಿಜವೆಂದರೆ, ಅದಕ್ಕೆ ಕಾರಣವೂ ಇದೆ. ಗಂಡಸರು ಸದಾ ವ್ಯವಹಾರದಲ್ಲಿ ಮುಳುಗಿ ತಮ್ಮ ಸ್ವಭಾವ ಮನಸ್ಸುಗಳಿಗೆ ಆ ತರದ ರೂಢಿಯನ್ನು ಕಲಿಸುತ್ತಾರೆ. ಎಲ್ಲ ಯೋಗಕ್ಕಿಂತ ಅಭ್ಯಾಸಯೋಗ ದೊಡ್ಡದು. ಅಭ್ಯಾಸದಿಂದಲೇ ಗಂಡೂ ಪರಿಪೂರ್ಣನಾಗುತ್ತಾನೆ, ಹೆಣ್ಣೂ ಪರಿಪೂರ್ಣಳಾಗುತ್ತಾಳೆ. ಈಗಿರುವುದಕ್ಕಿಂತ ಹೆಚ್ಚು ಆಸ್ತಿಯ ಹಕ್ಕು, ಆಡಳಿತದೊಡನೆ ಸಮೀಪ ಸಂಬಂಧ, ಹೆಚ್ಚಾದ ಪ್ರಪಂಚಾನುಭವ ಹೆಂಗಸರಿಗೆ ದೊರೆತರೆ ಅವರು ಅನುಭವದಿಂದ ಕಲಿತಾರು. ತಮ್ಮ ಪಾಡಿಗೆ ತಾವು ಇರದೆ ತಮ್ಮ ಬಗ್ಗೆ ನಾಲ್ಕು ಜನ ಏನನ್ನುತ್ತಾರೆ ಎಂಬುದನ್ನು ನಮ್ಮ ಮಹಿಳೆಯರು ತಿಳಿಯುವುದು ಒಳಿತು.

ನಮ್ಮ ಹೆಂಗಸರ ಒಂದು ಅವಗುಣದಿಂದ ಅನೇಕ ಸಂಸಾರಗಳ ದುಃಖ ಬೆಳೆಯುತ್ತದೆ. ಹಗಲೆಲ್ಲ ಹುಡುಗರನ್ನು ಸುಧಾರಿಸಬೇಕಾಗಿ ಬರುವುದರಿಂದಲೋ ಏನೋ, ಅವರ ಚೇಷ್ಟೆಗೆ ಬೇಸತ್ತು ನಮ್ಮ ಹೆಂಗಸರು ಮಕ್ಕಳನ್ನು ಬಹಳ ನಿರ್ದಯೆಯಿಂದ ಶಿಕ್ಷಿಸುತ್ತಾರೆ. ಗಂಡಸರೂ ನಿರ್ದಯರೇ. ಆದರೆ ಹೆಂಗಸರು ಮಾತ್ರ ಮಕ್ಕಳ ವಿಷಯದಲ್ಲಿ ಕಠೋರರು. ಬೈದರೆ ಶಾಪದ ಸುರಿಮಳೆ. ಹೊಡೆದರೆ ಸಾಯ ಹೊಡೆಯುತ್ತಾರೆ. ಸಿಟ್ಟು ಇಳಿದಮೇಲೆ ತಮ್ಮ ನಡತೆಗೆ ತಾವೇ ಪಶ್ಚಾತ್ತಾಪಗೊಂಡು ಮಕ್ಕಳನ್ನು ಮುದ್ದಿಸುವುದು ದೊಡ್ಡ ಗುಣವೇ. ಆದರೆ ಏನು ಫಲ? ಆ ನೋವು ಮಕ್ಕಳಿಗೆ ತಪ್ಪೀತೇ! ಹಿಂದೂಗೃಹಗಳಲ್ಲಿ ಸಿಟ್ಟುಬಂದರೆ ಪ್ರಳಯರುದ್ರನ ಅವತಾರವಾದ ಹಾಗೆ. ಅದಕ್ಕೆ ಅಡ್ಡಿಯೇ ಇಲ್ಲ. ನಮ್ಮ ಮನೆಗಳಲ್ಲಿ ಸಿಟ್ಟನ್ನು ನಿಗ್ರಹಿಸುವ ಕಲೆಯನ್ನು ಕಲಿಯಬೇಕು. ಅನೇಕ ಸಲ ಮನೆಯ ಯಜಮಾನರೇ ಬಹಳ ಸಿಡುಕರಾಗಿರುತ್ತಾರೆ. ಅವನ ಕೈಯಲ್ಲಿ ಏಟು ತಿಂದು ತಿಂದು ಅವನ ಹೆಂಡತಿ, ಮಕ್ಕಳ ಮೇಲೆ ಆ ಸಿಟ್ಟನ್ನು ತೀರಿಸಿಕೊಳ್ಳುತ್ತಾಳೆ. ಹೀಗೆ ಸಿಡುಕಿನ ಸ್ವಭಾವ ಮಕ್ಕಳಲ್ಲಿ ಬೆಳೆಯುತ್ತದೆ. ಇಂಥ ಸನ್ನಿವೇಶದಲ್ಲಿ ಬೆಳೆದ

ಮಕ್ಕಳು ಶಾಂತಿದೇಪತೆಗಳಾಗುವುದು ಸಾಧ್ಯವೆ? ಹಿಂದೂ ಸಂಸಾರದಲ್ಲಿ ಮಕ್ಕಳ ಪೋಷಣೆಯ ಈ ಮಾತು ಅಲ್ಪವಾಗಿ ಕಂಡರೂ ಅದರ ಬಗ್ಗೆ ಹೇಳಬೇಕಾದ್ದು ಬಹಳವಿದೆ. ಹಾಗೆ ಮಾಡುವವರು ತಾವೂ ತಪ್ಪುಗಾರರೆಂಬ ಭಾವನೆಯಿಂದ ಬರೆಯುತ್ತಾರೆಂಬುದನ್ನು ಮರೆಯಬಾರದು. ಸಮಾಜಗ ಎಂದರೆ ಗಂಡಸರ ಹೆಂಗಸರ ತಪ್ಪುಗಳನ್ನು ವಿಮರ್ಶಿಸುವುದೇ – ಪಾಪಕರ್ಮಗಳ ಮಾತಂತಿರಲಿ - ಸುಧಾರಣೆಗೆ ಮೊದಲ ಮೆಟ್ಟಲು. ವ್ಯಕ್ತಿಸಂಸ್ಕಾರ, ಸಮಾಜಸುಧಾರಣೆಗೆ ಅದು ಅಗತ್ಯ. ಮೇಲೆ ಹೇಳಿದ ತಪ್ಪು ವಿಮರ್ಶಿಸಲು ಸೂಕ್ಷ್ಮ, ಬಿಡಿಸಲು ಕಷ್ಟ. ಅದಕ್ಕಾಗಿ ಈ ಲೇಖಕನು ಕ್ಷಮೆಬೇಡಬೇಕಾಗಿಲ್ಲ. ಆದರೆ ಜನಾಂಗದ ಪ್ರಗತಿ ಸರ್ವಾಂಗೀಣವಾದೀತೇ ವಿನಾ ಅಂಗಾಂಗಗಳಿಗೆ ಮಾತ್ರ ಆಗುವುದಿಲ್ಲ. ಪರದೇಶದ ವಿಮರ್ಶಕರು ಮಾಡಿದ ವಿಮರ್ಶೆ ಕಟುವಾಗಿದ್ದರೂ ಅದರಲ್ಲಿ ಸತ್ಯವಿದ್ದರೆ ನಮ್ಮ ಜನಕ್ಕೆ–ಗಂಡಸರಿಗೆ ಹೆಂಗಸರಿಗೆ ತಿಳಿಸಬೇಕು. ಅದರಿಂದ ನಾಳಿನ ಸ್ವತಂತ್ರ ಭಾರತದ ಮಕ್ಕಳಾದರೂ ನಿಗ್ರಹವಂತರಾದ ಸ್ತ್ರೀ ಪುರುಷರಾಗಿ, ಸ್ವತಂತ್ರ ಜನಾಂಗದ ವಿಧಿನಿರ್ಮಾಪಕರಾದಾರು.

## ೧೭

# ರಾಷ್ಟ್ರೀಯ ಚಳುವಳಿಯಲ್ಲಿ ಮಹಿಳೆಯರ ಸ್ಥಾನ

'ಮಹಿಳೆಯರು—ರಾಷ್ಟ್ರೀಯ ಚಳುವಳಿ.' ಇವೆರಡು ಶಬ್ದಗಳು ಪರಸ್ಪರ ವಿರೋಧಿಗಳೆಂದು ಆಶ್ಚರ್ಯ ಪಡಬಹುದು, ಆದರೆ ಎಲ್ಲ ದೇಶಗಳಲ್ಲೂ ಎಲ್ಲ ಕಾಲದಲ್ಲೂ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಮಹಿಳೆಯರು ಮುಖ್ಯ ಪಾತ್ರವನ್ನೇ ವಹಿಸಿದಾರೆ. ಗಂಡಸು ಮಾಡಿದಷ್ಟು ಗಡುಸಾಗಿ, ಗದ್ದಲವಾಗಿ ತನ್ನ ಕೆಲಸವನ್ನು

ಮಾಡಿರಲಿಕ್ಕಿಲ್ಲ. ಆದರೆ ಆಕೆಯ ಬಯಲಿಗೆ ಬಾರದಿರುವ ಸ್ವಭಾವವೇ ಆ ಪ್ರಭಾವ ಎಷ್ಟು ಸೂಕ್ಷ್ಮವೋ ದೇಶ ದೇಶಗಳ ಭಾಗ ನಿರ್ಮಾಣದಲ್ಲಿ ಅಷ್ಟು ಗಾಢವಾದುದು ಎಂದು ತಿಳಿಸುತ್ತಿದೆ. ಗೃಹಿಣಿಯಂತೆ—ತಂಗಿಯಂತೆ, ತಾಯಿಂತೆ, ಹೆಂಡತಿಯಂತೆ ಗಡುಸುಗಾರನಾದ ಗಂಡಸಿನ ಕಾಠಿಣ್ಯವನ್ನು—ಅಣ್ಣನ, ಮಗನ, ಗಂಡನ ಪಶುಸ್ವಭಾವವನ್ನು ಪಳಗಿಸಿ, ಹದಮಾಡಿ, ಮೃದುಗೊಳಿಸಿ ಸೌಮ್ಯ ಪ್ರಭಾವವನ್ನು ಬೀರುತ್ತಾಳೆ. ಗಂಡು ಮೃಗವನ್ನು ಹೆಣ್ಣು ಪಳಗಿಸುವ ಈ ಚೋದ್ಯ ಸೂಕ್ಷ್ಮವಾಗಿ ಸಂಸಾರ ಚಿತ್ರಗಳನ್ನು ಪರಿಶೀಲಿಸಿವರೆ ಮಾತ್ರ ಗೊತ್ತಾಗುತ್ತದೆ. ಉಳಿದವರಿಗೆ ತಿಳಿಯುವುದಿಲ್ಲ. ಹಿಂದಿನ ಕಾಲದಲ್ಲಿ ಸಾಧ್ಯವಿದ್ದರೂ ಹೆಂಗಸನ್ನು ಅಡಿಗೆ, ಮನೆಗೆಲಸಗಳ ತೊತ್ತಾಗಿ ಬಂಧಿಸಿಡಲು ಈಗಂತೂ ಸಾಧ್ಯವಲ್ಲ. ದೇಶಾಟನೆ, ಪ್ರವಾಸಗಳು ಆಕೆಯ ಹಕ್ಕಾಗಿದೆ. ಮನೆಗೇ ಅಂಟಿಕೊಂಡಿರುವುದಲ್ಲ. ಅಷ್ಟೇ ಅಲ್ಲ. ಜೀವನದ ವಿಶಾಲ ಕಾರ್ಯಕ್ಷೇತ್ರಗಳಲ್ಲಿಯೂ ಆಕೆಗೆ ಸರಿಯಾಗಿ ಅವಕಾಶ ಕೊಟ್ಟು, ಕೆಲಸದಲ್ಲೂ ಜವಾಬದಾರಿಯಲ್ಲೂ ಸಮತೆಯನ್ನು ತೋರಬೇಕಾದುದು ಗಂಡಸಿನ ಕರ್ತವ್ಯವಾಗಿದೆ. ಈ ಹೊಸತನವನ್ನು ಗಂಡಸು ಸ್ವಾರ್ಥವಿಲ್ಲದೆ ಒಪ್ಪಿಕೊಂಡಿಲ್ಲ. ಇದರಲ್ಲೂ ಕೊಂಚ ಲಾಭವಿದೆಯೆಂಬುದನ್ನು ಕಂಡುಕೊಂಡಿದಾನೆ. ಹೆಣ್ಣು ಇಲ್ಲದಿದ್ದರೆ ಗಂಡಸು ಅರ್ಧವ್ಯಕ್ತಿ ಮಾತ್ರ. ಗಂಡು ಇಲ್ಲದಿದ್ದರೆ ಹೆಣ್ಣೂ ಅಷ್ಟೇ. ಅರ್ಧನಾರೀಶ್ವರನ ರೂಪ ಈ ಸತ್ಯದ ಸಂಕೇತ. ಗಂಡಿನಲ್ಲಿ ಹೆಣ್ತನವಿದೆ, ಹೆಣ್ಣಿಗೆ ಗಂಡುತನವೂ ಇದೆ. ಗಂಡುಬೀರಿ, ಹೆಣ್ಣಿಗ ಎಂದರೆ ಹೆಣ್ಣಿನಲ್ಲಿ ಇರಬೇಕಾದುದಕ್ಕಿಂತ ಹೆಚ್ಚು ಗಂಡಸುತನ ಇದೆ, ಗಂಡಿನಲ್ಲಿ ಹೆಣ್ಣುತನ ಹೆಚ್ಚಾಗಿದೆ ಎಂದು ಅರ್ಥ. ಹೀಗಿರುವಾಗ ಸಮಾಜ ಜೀವನದಲ್ಲಿ, ರಾಜಕೀಯದಲ್ಲಿ ಹೆಣ್ಣು ಕಾಲಕ್ರಮೇಣ ತನಗೆ ಸರಿಯಾದ ಸ್ಥಾನ ಗಳಿಸಿದುದು ಏನಾಶ್ಚರ್ಯ!

೧೯೧೭ರಲ್ಲಿ ಮಾಂಟೆಗೂ ಹಿಂದುಸ್ಥಾನಕ್ಕೆ ಬಂದಾಗ ನಮ್ಮ ದೇಶದ ಮಹಿಳೆಯರು ಅವನನ್ನು ಕಂಡು ತಮ್ಮ ದುಃಖವನ್ನು ತಿಳಿ

ಸಿದರು. ಅವರು ಕೇಳಿದುದೇ ತಡ, ಈ ದೇಶದ ಹೆಂಗಸರಿಗೆ ಗಂಡಸರೊಡನೆ ಸಮಾನಾಧಿಕಾರವನ್ನು ಅವನು ನಿರ್ವಂಚನೆಯಿಂದ ಕೊಟ್ಟುಬಿಟ್ಟ. ಅದೇ ವರ್ಷ ಕಲಿಕತ್ತೆಯ ಕಾಂಗ್ರೆಸ್ಸು ಹೆಂಗಸರಿಗೂ ಗಂಡಸರಿಗಿದ್ದಂತೆ ಮತಪ್ರದಾನಾಧಿಕಾರ, ಸವಸ್ವತ್ವದ ಹಕ್ಕು ಇರಬೇಕೆಂದು ತೀರ್ಮಾನ ಮಾಡಿತ್ತು. ಆ ವರ್ಷ ಕಾಂಗ್ರೆಸ್ಸಿನ ಅಧ್ಯಕ್ಷಪದವಿ ಜಗದ್ವಿಖ್ಯಾತಳಾದ ಆನಿಬಿಸೆಂಟೆಸದು. ಆ ಕಾಂಗ್ರೆಸ್ಸಿನಲ್ಲಿ ಈ ತೀರ್ಮಾನವಾದದ್ದು ಯೋಗ್ಯವೇ. ೧೯೨೦ರಲ್ಲಿ ಗಾಂಧೀಜೀ ರಾಷ್ಟ್ರದ ಸೂತ್ರಧಾರಿಯಾದ ಮೇಲೆ ಹೆಂಗಸರು ಮುಂದೆ ಬಂದರೂ ಮೊದಲಿನ ಗಡುಸುತನ, ಕಡಿಮೆಯಾಯಿತು. ಆಕೆಯ ರಾಟೆ ಜನರ ಗೌರವಕ್ಕೆ ಪಾತ್ರವಾಯಿತು. ರಾಷ್ಟ್ರದ ಚಳುವಳಿಗೆ ನೂಲುವುದೇ ತಿರುಗಲಿಯಾದಾಗ ಹೆಣ್ಣಿಗೆ ವಿಶಿಷ್ಟಸ್ಥಾನ ದೊರೆಯಿತು. ದೇಶಕ್ಕೆ ಅನ್ನ ಬಟ್ಟೆ ಒದಗಿಸುವವರು ನಾವು ಎಂಬ ತಿಳಿವು ಅದರಲ್ಲಿ ಹರಡಿತು. ಈ ತಿಳಿವಿನಿಂದ ಅವರಲ್ಲಿ ಹೆಮ್ಮೆಯೂ ಹುಟ್ಟಿತು, ಜವಾಬದಾರಿ ದಕ್ಷತೆಗಳೂ ಬೆಳೆದವು. ರಾಷ್ಟ್ರೀಯ ಕಾರ್ಯಕ್ರಮದ ಸಾಮಾಜಿಕ ವಿಭಾಗದಲ್ಲಿ ಹೆಂಗಸರು ಹೆಚ್ಚು ಹೆಚ್ಚು ಭಾಗವಹಿಸಿದರು. ೧೯೩೦ರಲ್ಲಿ ಉಪ್ಪಿನ ಸತ್ಯಾಗ್ರಹದ ಸಂದರ್ಭದಲ್ಲಿ ದೇಶದೊಳಗೆ ಮಹಾ ಸಮರ ಪ್ರಾರಂಭವಾದಾಗ, ದಾಂಡಿಯಲ್ಲಿ ಉಪ್ಪಿನ ಶಾಸನ ಮುರಿದ ಮೇಲೆ ರಾಷ್ಟ್ರೀಯ ಚಳುವಳಿಯಲ್ಲಿ ಹೆಂಗಸರೂ ಯೋಗ್ಯ ಸ್ಥಾನವನ್ನು ಆಕ್ರಮಿಸಬೇಕೆಂದು ಗಾಂಧೀಜೀ ಒಂದು ಫರ್ಮಾನನ್ನೇ ಹೊರಡಿಸಿಬಿಟ್ಟರು. ಬೀದಿಗಳಲ್ಲಿ ಅಲೆದು, ಹೆಂಡದಂಗಡಿಗಳ ಮುಂದೆ ಕುಡುಕರ ನಡುವೆ, ಪಟಿಂಗರ ನಡುವೆ ನಿಂತು ಅಂಗಡಿಗಳನ್ನು 'ಪಿಕೆಟ್' ಮಾಡಿರೆಂದು ಗಾಂಧೀಜೀ ಹೆಂಗಸರಿಗೆ ಹೇಳಿದಾಗ ಸುಶಿಕ್ಷಿತ ಸಮಾಜವೆಲ್ಲ ಹೌಹಾರಿಹೋಯಿತು. ಅವರ ಮಾನ ಉಳಿದೀತೇ? ಅತ್ಯಾಚಾರವಾಗದೆ? ಎಳಷ್ಟೂ ಇಲ್ಲ. ಜನರ ಅಂಜಿಕೆ ಸುಳ್ಳಾಯಿತು. ಕುಡುಕರೂ ಪರದೇಶೀಬಟ್ಟೆ ವ್ಯಾಪಾರಿಗಳೂ ಹೆಂಗಸರಿಗೆ ಅವಮಾನ ಮಾಡಲಿಲ್ಲ. ಶಾಂತಿ ಸಂರಕ್ಷಕರಾದ ಸರಕಾರದವರು ಹಾಗೆ ಮಾಡಿ

ದವರು. ಹೆಂಗಸರನ್ನು ಬಸ್ಸುಗಳಲ್ಲಿ ತುಂಬಿ ರಾತ್ರಿ ಹೊತ್ತಿನಲ್ಲಿ ಊರ ಹೊರಗೆ ಕತ್ತಲಲ್ಲಿ ಅಡವಿಯ ಬಳಿ ಬಿಟ್ಟು ಬಂದರು. ಒಬ್ಬ ಹೆಂಗಸು ಭಾಷಣ ಮಾಡುತ್ತಿರುವಾಗ ಕೈಕಾಲು ಹಿಡಿದೆತ್ತಿ ಬಿಸುಟರು. ೧೯೩೧ರ ಜನವರಿ ೬ರ ದಿನ ಬೋರ್‍ಸಾದಿನ ಹೆಂಗಸರು ತೋರಿಸಿದ ಸಾಹಸದ ಕತೆ ನೆನಪಿಡಬೇಕಾದುದು. ಈಗಿನ ಕಾಲದಲ್ಲಿ ಸರಕಾರ ಅಂಥ ಅಕೃತ್ಯಗಳನ್ನು ಮಾಡೀತು ಎಂದು ನಾವು ಊಹಿಸಲು ಕೂಡ ಸಾಧ್ಯವಿಲ್ಲ. ಬೋರ್‍ಸಾದಿನ ಹೆಂಗಸರಿಗೆ ಸರಕಾರದವರು ಅಷ್ಟು ಅವಮಾನ ಅವಹೇಳನಗಳನ್ನು ಆ ದಿನ ಮಾಡಿದರು. ಆ ದಿನ ಅಷ್ಟೆಲ್ಲ ನಡೆದು ಹೋಯಿತು. ದಬ್ಬಾಳಿಕೆ ದೌರ್ಜನ್ಯಗಳು ಶಿಖರವನ್ನೇ ಮುಟ್ಟಿದ ಕಾಲ ಅದು. ಆ ದಿನ ಮಿತಿಮೀರಿ ಹೋಯಿತು. ಅದರ ಫಲವಾಗಿ ಐದೇ ದಿನಗಳೊಳಗಾಗಿ, ಎಂದರೆ ೧೯೩೧ ಜನವರಿ ೨೬ಕ್ಕೆ ಗಾಂಧೀಜಿಯನ್ನೂ ಉಳಿದವರನ್ನೂ ಸೆರೆಯಿಂದ ಬಿಡಬೇಕಾಯಿತು. ಮುಂಬಯಿಯ ಹೆಂಗಸರು ಪೇಟೆಗಳನ್ನೂ ವ್ಯಾಪಾರವನ್ನೂ ಹೇಗೆ ತಮ್ಮ ಪ್ರಭಾವಕ್ಕೆ ಸ್ವಾಧೀನ ಪಡಿಸಿಕೊಂಡರೆಂಬುದು ಒಂದು ಪುರಾಣಕಥೆಯ ಹಾಗೆ ವಿಚಿತ್ರವಾಗಿದೆ. ಸೈರಣೆ ಅವರ ಸರ್ವಬಲ. ದೀರ್ಘಕಾಲದ ಕಷ್ಟ, ಸೈರಣೆಗಳನ್ನು ನೋಡಿ ಕರಗದ ಮಾನವ ಹೃದಯವೂ ಉಂಟೆ? ಸಿಟ್ಟಿನಿಂದ ಗಂಡುಸು ಕೆಟ್ಟುಮೃಗವಾಗುತ್ತಾನೆ. ಅಂಥ ಸಿಟ್ಟನ್ನು ಹೆಣ್ಣು ಬಹಿರಂಗವಾಗಿ ತೋರಿಸಳು. ಸಿಟ್ಟನ್ನು ಗೆದ್ದವರು ಏನು ಗೆಲ್ಲಲಾರರು? ಹೆಂಗಸರೂ ಸತ್ಯಾಗ್ರಹ ಯುದ್ಧದಲ್ಲಿ ಕಾದಲಿ ಎಂದು ಗಾಂಧೀಜೀ ಹೇಳಿದಾಗ ಇದನ್ನೇ ಅವರು ನೆಚ್ಚಿದ್ದು. ಹೆಂಗಸರು ಕಾದಿಯೂ ಕಾದಿದರು, ಗೆದ್ದೂ ಗೆದ್ದರು.

ಸಮರದಲ್ಲಿ ಮಾತ್ರವೇ ಅಲ್ಲ. ಬುದ್ಧಿ ರಂಗದಲ್ಲೂ ಹಿಂದೂ ಮಹಿಳೆ ಗಂಡಸರಿಗೇನು ಕಡಿಮೆಯಿಲ್ಲ. ಕಾಂಗ್ರೆಸ್ಸಿನ ಸಮಾವೇಶಗಳಲ್ಲಿಯೂ, ಕಾಂಗ್ರೆಸ್ಸು ಶಾಸನಸಭಾ ಪ್ರವೇಶ ಮಾಡಿದ ಸಂದರ್ಭದಲ್ಲೂ ಕಾಂಗ್ರೆಸ್ಸಿನ ಮಹಿಳಾ ಸದಸ್ಯರ ಶಕ್ತಿ ಪ್ರಕಟವಾಗಿದೆ. ಮೊದಲಿಂದಲೂ ಅವರ ವಿಚಾರ ರೀತಿಯಲ್ಲಿ ಒಂದು ಗಾಂಭೀರ್ಯವಿದೆ,

ನಡತೆಯಲ್ಲಿ ಧೀರತೆಯಿದೆ. ಹೆಂಗಸಿಗೆ ಗೌರವ ತರುವುದು ವೈಯ ರೂಪು, ವೇಷದ ಬೆಡಗು ಅಲ್ಲ; ಆಕೆಯ ವಿಮರ್ಶೆಯ ಬುದ್ಧಿ, ತೀಕ್ಷ್ಣ ಹಾಸ್ಯ, ನಿಜಾನಿಜ ಪರಿಜ್ಞಾನ, ಇವು ಆ ಗೌರವ ತರುತ್ತವೆ. ಹೆಂಗಸು ಸಂಪ್ರದಾಯಕ್ಕೆ ಜೋತುಬಿದ್ದ ಪ್ರಾಣಿ ಎನ್ನುತ್ತಾರೆ. ಆದರೆ ಕಾಂಗ್ರೆಸ್ಸಿನ ಶಿಸ್ತಿನಿಂದ ತಯಾರಾದ ಹೆಂಗಸರು ಸಮಾಜ ಸುಧಾರಣೆಯ ಕೆಲಸದಲ್ಲಿ ತೊಡಗಿ, ಅಸ್ಪೃಶ್ಯತಾ ನಿವಾರಣೆಯಲ್ಲಿ ಬಹಳವಾಗಿ ದುಡಿದಿದಾರೆ. ಮಹಿಳೆಯರ ಸಹಾಯ ಸಹಕಾರಗಳಿಲ್ಲದಿದ್ದರೆ ಹಿಂದೂ ಧರ್ಮಕ್ಕೆ ಹತ್ತಿದ್ದ ಈ ಕಲಂಕ ಇಷ್ಟು ಬೇಗನೆ ಅಳಿಸುತ್ತಿರಲಿಲ್ಲ.

ಗಂಡಸರ ಮೊಂಡ ಬುದ್ಧಿ, ಶಾಸನಸಭೆಗಳನ್ನು ಹೊಗಬೇಕೆಂಬ ಅವರ ಆಸೆ, ಶತ್ರುವಿನ ಗುಹೆಯೊಳಗೆ ನುಗ್ಗಬೇಕೆಂಬ ಅವರ ಆತುರ ಬುದ್ಧಿ, ಕಾಂಗ್ರೆಸ್ಸು ಬೇಡವೆಂದ ಸುಧಾರಣೆಗಳನ್ನು ಅಧಿಕಾರ ಸೂತ್ರಗಳನ್ನು ಅವರು ಒಪ್ಪಿಕೊಂಡುದು—ಇವೆಲ್ಲವೂ ನಾಡಿನಲ್ಲಿ ಬೇಸರವನ್ನೂ ಮುಂದೇನುಗತಿ ಎಂಬ ಅಂಜಿಕೆಯನ್ನೂ ಹುಟ್ಟಿಸಿದಾಗ, ಸ್ವಾರ್ಥಿಗಳಾದ ಗಂಡಸರು ಸೋತರೂ ಆದರ್ಶವಾದಿಗಳಾದ ಹೆಂಗಸರಾದರೂ ಸ್ವಾತಂತ್ರ್ಯ ಸಮರವನ್ನು ನಿಸ್ವಾರ್ಥ ಬುದ್ಧಿಯಿಂದ ಸಾಗಿಸಿಕೊಂಡು ಹೋದಾರೆಂಬ ಆಸೆಯೇ ನಮ್ಮ ಬಲ. ಅವರ ಶಕ್ತಿ ಅಜೇಯವಾದುದು, ಅವರ ಶ್ರದ್ಧಾ ಭಕ್ತಿಗಳು ಅದಮನೀಯವಾದವು. ಐವತ್ತು ವರ್ಷದಿಂದ ಕಾಂಗ್ರೆಸ್ಸಿನಲ್ಲಿ ನಡೆದು ಬಂದಿರುವ ಧರ್ಮವನ್ನು ಅವರು ಬಿಡಲಾರರು. ನಮ್ಮ ರಾಷ್ಟ್ರೀಯತೆ ಪರಕೀಯ ಸಂಸ್ಕೃತಿಯ ಹೊಡೆತಕ್ಕೆ ಸಿಕ್ಕಿಯೂ ಬದುಕಿದ್ದರೆ ಅದು ನಮ್ಮ ಹೆಂಗಸರ ಆದರ್ಶಪ್ರಿಯತೆಯ ಪ್ರಭಾವ. ನಮ್ಮ ತಾಯಿನಾಡನ್ನು ಸ್ವಾರ್ಥಿಗಳಾದ ಗಂಡಸರ ದುರಾಶೆ ದುರ್ಬುದ್ಧಿಗಳು ಪರಾಧೀನವನ್ನಾಗಿ ಮಾಡಿವೆ. ಇದುವರೆಗೆ ನಮ್ಮ ಸಂಸ್ಕೃತಿಯನ್ನುಳಿಸಿಕೊಂಡು ಬಂದ ನಮ್ಮ ಹೆಂಗಸರ ಆದರ್ಶಪ್ರೇಮವೇ ಆ ಸಂಕೋಲೆಗಳನ್ನು ಬಿಡಿಸೀತು.

## ೧೮

# ಮದುವೆ

ಹಿಂದುಸ್ಥಾನದಲ್ಲಿ, ಹಿಂದೂಗಳಲ್ಲಂತೂ ಮದುವೆ ಅನಿವಾರ್ಯ. ಮದುವೆಯಿಲ್ಲದ ಗುಂಡುಗೋವಿಗೆ ಅಪಕೀರ್ತಿ ತಪ್ಪಿದ್ದಲ್ಲ. ನಪುಂಸಕ, ಗತಿಯಲ್ಲದವ, ಹುಚ್ಚ, ಇತ್ಯಾದಿ. ಉತ್ತಮ ಸಂಸ್ಕಾರ ನಿಸ್ಸಂಗ, ತ್ಯಾಗಗಳಿಂದ ಶಂಕರಾಚಾರ್ಯರಂಥ ಒಬ್ಬಿಬ್ಬರಿಗೆ ಮಾತ್ರ ಮದುವೆಯಾಗದೆಯೆ ಸನ್ಯಾಸ ತೆಗೆದುಕೊಳ್ಳುವುದು ಸಾಧ್ಯ. ಸಾಧಾರಣ ಜನರಿಗೆ ಮದುವೆ ಅನಿವಾರ್ಯ ಎನ್ನುವುದು ಇದರಿಂದಲೇ ಸ್ಪಷ್ಟವಾಗುತ್ತಿದೆ. ಗಂಡಸಿಗೂ ಅಷ್ಟೆ, ಹೆಂಗಸಿಗೂ ಅಷ್ಟೆ. ಕುರುಡಿರಲಿ, ಕುಂಟರಲಿ; ಮೂಕಿಯಿರಲಿ, ಕಿವುಡಿಯಿರಲಿ, ಮದುವೆಯಾಗದ ಹುಡುಗಿಯೇ ಹಿಂದೂ ಸಮಾಜದಲ್ಲಿಲ್ಲ. ಗಂಡನ ಮನೆಗೆ ಹೋಗದೆಯೇ ಇರಬಹುದು, ಆದರೆ ಮದುವೆ ಮಾತ್ರ ತಪ್ಪಿದ್ದಲ್ಲ. ಹುಡುಗಿ ಬೆಳೆದುನಿಂತು ಮದುವೆಯಾಗದೆ ಇದ್ದರೆ ವಂಶಕ್ಕೆ ಕಲಂಕ, ನರಕಕ್ಕೆ ದಾರಿ.

ಸಾಧಾರಣ ಜನರಿಗೆ ಮದುವೆ ವಿಹಿತವೆಂಬ ಪದ್ಧತಿ ಕೆಟ್ಟದ್ದೇನಲ್ಲ. ಮದುವೆಯಾಗಲೇಬೇಕೆಂಬ ಈ ವಿಧಿಯಿಂದ ಸಂಘದಲ್ಲಿ ಸಂಪ್ರದಾಯಗಳೂ ಮರ್ಯಾದೆಗಳೂ ಬದಲಾಗುತ್ತವೆ. ಹುಡುಗರು ಹುಡುಗಿಯರು ಎಲ್ಲರಿಗೂ ಮದುವೆ ಆಗಬೇಕಾದದ್ದು ಖಂಡಿತವಾದಾಗ ಅವರಿಗೆ ಯಾವ ವಯಸ್ಸಿನಲ್ಲಿ ಮದುವೆಯಾಗಬೇಕು? ವಯಸ್ಸಾದ ಮೇಲೆ ಮದುವೆ ಆಗಿಯೇ ತೀರುವುದು ಎಂಬ ಸಂಭವ ಕಡಮೆ. ಹುಡುಗ ಪರೀಕ್ಷೆಯಲ್ಲಿ ವಿಫಲನಾಗಬಹುದು. ಹುಡುಗಿ ಸುರೂಪಿಯಲ್ಲದೆ ಹೋಗಬಹುದು. ಹದಿನಾರು ವರ್ಷದ ಹುಡುಗಿ ಸೊಣಕಲಾಗಿ ಕಡ್ಡಿಯ ಹಾಗಿದ್ದರೆ, ಇಲ್ಲವೆ ಮುದುಕಿಯಂತೆ ಸ್ಥೂಲವಾಗಿದ್ದರೆ ಹೇಗೆ! ವಧೂವರರು ಪರಸ್ಪರವಾಗಿ ಒಬ್ಬರನ್ನೊಬ್ಬರು ಆರಿಸಿಕೊಳ್ಳಬೇಕಾದಾಗ, ತಂದೆ ತಾಯಿಗಳು ಆರಿಸಿದವರನ್ನ

ಮೆಚ್ಚಬೇಕಾದಾಗ ಮುಖ್ಯವಾದ ಗುಣ ಸ್ವಭಾವಗಳಿಗಿಂತ ಚಿಲ್ಲರೆ ವಿಷಯಗಳಿಗೆ ಗಮನಕೊಟ್ಟು, ಪೂರ್ಣವಾಗಿ ಅರ್ಥ ಮಾಡಿಕೊಳ್ಳುವುದರ ಬದಲು ಯಾವುದೋ ಒಂದೆರಡು ಅಂಶಕ್ಕೇ ಮಹತ್ವ ಕೊಡುತ್ತಾರೆ. ಎಲ್ಲ ಹುಡುಗ ಹುಡುಗಿಯರಿಗೂ ಮದುವೆಯಾಗಲೇಬೇಕಾದರೆ, ಮದುವೆಯಾಗಬೇಕಾದವರು ಇನ್ನೂ ಪ್ರಬುದ್ಧರಾಗುವುದಕ್ಕೆ ಮೊದಲೇ ತಾಯಿ ತಂದೆಗಳು ಮದುವೆಮಾಡಿ ಬಿಡುವುದೇ ಸೂಕ್ತ. ಬಾಲ್ಯವಿವಾಹ ರೂಢಿಗೆ ಬರಲು ಅದೇ ಕಾರಣ. ಈ ಪದ್ಧತಿಯು ಪರಿಣಾಮವಾದ ಬಾಲ್ಯವೈಧವ್ಯ ಹಿಂದೂ ಸಂಘಕ್ಕೆ ಕಳಂಕವಾಗಿದೆಯೆಂಬುದು ಸ್ಪಷ್ಟವಾಗಿದೆ.

ಕಾಲ ಬದಲಾಗಿದೆ. ಶಾರದಾ ಶಾಸನ ಮಕ್ಕಳಿಗೆ ಮದುವೆ ಮಾಡದ ಅಪರಾಧವನ್ನು ತಂದೆ ತಾಯಿಗಳ ತಲೆಯಮೇಲಿಂದ ಸರಿಸಿ ಸರಕಾರದ ತಲೆಯ ಮೇಲಿಟ್ಟಿದೆ. ಪುರಾತನ ಸಂಪ್ರದಾಯವನ್ನೂ ಧಾರ್ಮಿಕ ವಿಧಿಯನ್ನೂ ಸರಕಾರವೇ ಮುರಿದಿದೆ. ಆದರೂ ರೂಢಿ ಬಲವು ಶಾಸನಜಾಲವನ್ನು ತಪ್ಪಿಸಿಕೊಂಡು ಒಳ ಹಾದಿಗಳನ್ನು ಹುಡುಕುತ್ತಿದೆ. ಶಾಸನವು ಬಲವಾದರೆ ಅದನ್ನು ತಪ್ಪಿಸುವ ಬುದ್ಧಿವಂತಿಕೆಯೂ ಬಲವಾಗುತ್ತದೆ. ಇಷ್ಟೆಲ್ಲ ಆದರೂ ಬಾಲ್ಯವಿವಾಹ ಪದ್ಧತಿ ನಮ್ಮ ನಾಡಿನಲ್ಲಿ ನಿರ್ನಾಮವಾಗಿಲ್ಲ. ಬಹುಶಃ ಆಗುವ ಹಾಗೂ ಇಲ್ಲ. ಆದ್ದರಿಂದ ನಮ್ಮವರೂ ಹೊರಗಿನವರೂ ಈ ಪದತಿಯ ಬಗ್ಗೆ ಸಾನುಭೂತಿ ತೋರಿಸಬೇಕೆಂದು ಕೋರುತ್ತೇನೆ.

ಹಿಂದೂ ಸಮಾಜದಲ್ಲಿ ಮದುವೆ ವೈಯಕ್ತಿಕವಲ್ಲ, ಕೌಟುಂಬಿಕ. ಒಂದು ವ್ಯಕ್ತಿ ಇನ್ನೊಂದು ವ್ಯಕ್ತಿಯನ್ನು ಮದುವೆಯಾಗುವುದಲ್ಲ, ಒಂದು ಕುಟುಂಬ ಇನ್ನೊಂದು ಕುಟುಂಬದೊಡನೆ ಸಂಬಂಧ ಬೆಳೆಸುವುದು. ವಿಲಾಯತಿಯಲ್ಲಿ ಹಾಗಲ್ಲ. ಪ್ರತಿಯೊಬ್ಬ ಕನ್ಯೆಯೂ ಹತ್ತಾರು ಜನ ತರುಣರನ್ನು ಸೆಳೆಯಬೇಕು. ಅವರ ಗೆಳೆತನ ಮಾಡಿ. ಸಹವಾಸ ಮಾಡಿ ಕಡೆಗೆ ಅವರಲ್ಲೊಬ್ಬನನ್ನು ತಂದೆ ತಾಯಿಗಳ ಸಮ್ಮತಿಯ ಅಗತ್ಯವಿಲ್ಲದೆ ತಾನೇ ಆರಿಸಿಕೊಂಡು ಮದುವೆಯಾಗ

ಬೇಕು. ಈ ಸಾಹಸವನ್ನು ಮಾಡಲಾರದ ಹುಡುಗಿ ಪರೀಕ್ಷೆ ಗೆಲ್ಲಲಾರದ ಹುಡುಗನಂತೆ, ತಂದೆ ತಾಯಿಗಳಿಗೆ ಭಾರ. ಆ ತರದ ಸೆಳೆತ, ಗೆಳೆತನ, ಸಹವಾಸ, ಪ್ರೀತಿಗಳಿಗೆ ನಮ್ಮ ದೇಶದಲ್ಲಿ ಅವಕಾಶವಿಲ್ಲ. ಬಹಿರಂಗವಾಗಿ ನಾಲ್ಕು ಜನರ ನಡುವೆ ದಿವಾನಖಾನೆಯಲ್ಲಿ ನಮ್ಮ ಮಹಿಳೆಯರ ಜೊತೆಯಲ್ಲಿ ಕೂತು ಅವರ ಸಹವಾಸ ಸುಖವನ್ನು ನಮ್ಮ ದೇಶದಲ್ಲಿ ಅನುಭವಿಸುವಹಾಗಿಲ್ಲ. ಸ್ತ್ರೀ ಪುರುಷರ ಸಲಿಗೆಯ ಸಲ್ಲಾಪವೆಂದರೆ ತೀರ ಹತ್ತಿರ ಬಳಗದವರಾದರೆಯೇ ಸೈ. ಒಂದು ಸ್ಥಿತಿಯಿಂದ ಮತ್ತೊಂದಕ್ಕೆ ಪರಿವರ್ತನವಾಗುವಾಗ ಆ ಕಾಲದಲ್ಲಿ ಅನೇಕ ತೊಂದರೆಗಳಾಗುತ್ತವೆ. ಎಲ್ಲವೂ ಅತಂತ್ರವಾಗಿ ಗೊಂದಲವಾಗುತ್ತದೆ. ಹಳೆಯ ಹಾದಿ ಬಿಟ್ಟು ಹೊಸದಾರಿ ತುಳಿದು ಮುಂಬರಿದಾಗ ಇಂಥವಕ್ಕೆಲ್ಲ ಸಿದ್ಧರಾಗಿರಬೇಕು. ಬಾಲ್ಯ ವಿವಾಹ ಈಗ ಹೇಗಿದೆ ಎಂಬುದನ್ನು ಹಿಂದಿನ ಪ್ರಕರಣಗಳಿಂದ ಅರ್ಥ ಮಾಡಿಕೊಳ್ಳಬಹುದು. ವಧುವಿಗೆ ಮಗಳು, ಸೊಸೆ, ತಾಯಿ, ಅತ್ತೆ, ಎಲ್ಲ ಅವತಾರಗಳೂ ಆಗಬೇಕು. ವರನಿಗೂ ಅಷ್ಟೆ. ಮಗ ಅಳಿಯ ತಂದೆ ಮಾವ–ಇಷ್ಟು ರೂಪಗಳು. ಇವೆಲ್ಲವನ್ನೂ ಬೇರೆಬೇರೆಯಾಗಿ ವಿಮರ್ಶಿಸಲಾಗಿದೆ. ಮದುವೆ ಸರ್ವರಿಗೂ ಅಗತ್ಯವೆಂಬ ಪದ್ಧತಿ ಜನರ ಸುಖ ಸಾಧನವಾಗಿದೆ. ಸೌಖ್ಯದ ಮಟ್ಟವನ್ನು ಹೆಚ್ಚಿಸಿದೆ. ಆದರೆ ಹಣಕಾಸಿನ ರೀತಿಯಲ್ಲಿ, ಆರ್ಥಿಕವಾಗಿ ಸಂಸಾರಗಳೆಷ್ಟೋ ಹಾಳಾಗಿವೆ. ರಾಜರ ನಿರಂಕುಶ ಪ್ರವರ್ತನೆಗಿಂತ ಸಂಪ್ರದಾಯದ ದಬ್ಬಾಳಿಕೆ ಹೆಚ್ಚು ಕ್ರೂರ. ಪ್ರೇಮದಿಂದ ಹುಟ್ಟಿದ, ಅಥವಾ ಪ್ರೇಮದಲ್ಲಿ ಪರಿಣಾಮವಾದ ಸಾಹಚರ್ಯವನ್ನು ಸಂಬಂಧವನ್ನು ಆಶೀರ್ವದಿಸಿ ಪವಿತ್ರಗೊಳಿಸುವ ಸಂಕೇತವಾಗಲಿ ಮದುವೆ. ಆ ದಿನ ಬೇಗ ಬರಲಿ.

೧

ಬ್ರಿಟಿಷರ ರಾಜಕೀಯ ಸಂಸ್ಥೆ ಕಾಲಕಾಲಕ್ಕೆ ಬೆಳೆದು ಬಂದಿದೆ ಯಂತೆ. ಹಿಂದೂ ಸಮಾಜವೂ ಯುಗ ಯುಗಾಂತರಗಳಿಂದ ಸಂಪ್ರದಾಯಗಳ ಮೂಲಕ ಬೆಳೆದು ಬಂದಿದೆ. ಒಮ್ಮೆ ರಾಜಧರ್ಮ ಒಮ್ಮೆ ಋಷಿ ಮುನಿಗಳ ಪ್ರಭಾವ, ಮತ್ತೊಮ್ಮೆ ಕಾಲಕಾಲಕ್ಕೆ ಆಗಿ ಹೋದ ಮಹಾನುಭಾವರು ಮಾಡಿದ ಪುನರ್ವ್ಯವಸ್ಥೆ, ಹೊರಗಿನಿಂದ ಬಂದ ಪದ್ಧತಿಗಳನ್ನು ಹಂಸ ಕ್ಷೀರದಂತೆ ಸ್ವೀಕರಿಸಿದುದು—ಇವೆಲ್ಲ ಅಗೋಚರವಾದ ರೀತಿಯಲ್ಲಿ ನಮ್ಮ ಸಮಾಜಕ್ಕೆ ಜೀವಕೊಟ್ಟು, ಅದಕ್ಕೆ ಚೇತನವನ್ನೂ ಭಾವವನ್ನೂ ತುಂಬಿ ಕಾಲೋಚಿತವಾಗಿ ನಡೆಯುವ ಶಕ್ತಿಯನ್ನು ನೀಡಿದವು. ಅದರ ಪ್ರಗತಿಯೂ ಪರಿಣಾಮವೂ ಹಲವಾರು ರಾಜಕೀಯ ಆರ್ಥಿಕ ಸಾಂಘಿಕ ಕಾರಣಗಳಿಂದ ಕುಂಠಿತವಾಗಿದೆ. ಈಗ ಸ್ವರಾಜ್ಯ ನಮ್ಮ ಕೈಗೆ ಎಟಕುವ ಹಾಗಿದೆ. ನಮ್ಮ ರಾಷ್ಟ್ರ ಬಹಳ ದಿನಗಳಿಂದ ಮಾಡಿದ ತಪಸ್ಸು ಬೇಗ ಫಲಿಸಬಹುದು. ಆಗ ಸಮಾಜದ ಪುನರ್ವ್ಯವಸ್ಥೆ ಮಾಡಬೇಕಾದ ಕೆಲಸ ನಮ್ಮ ಹಿರಿಯರ ಪಾಲಿಗೆ ಬರುತ್ತದೆ. ಸ್ವರಾಜ್ಯವೆಂದರೆ ವಿಲಾಯತಿಯಿಂದ ಆಡಳಿತವನ್ನು ಇಲ್ಲಿಗೆ ವರ್ಗಾಯಿಸುವುದಲ್ಲ. ಬ್ರಿಟಿಷರ ಕೈ ತಪ್ಪಿಸಿ ಹಿಂದೀ ಜನರಿಗೆ ಕೊಡುವುದಲ್ಲ. ನಮ್ಮ ಸಂಘದ ಪ್ರತಿಯೊಂದು ಗುಂಪೂ ತನ್ನ ತನ್ನ ಜೀವನವನ್ನು ಸರಿಯಾಗಿ ರೂಪುಗೊಳಿಸುವ ವಿಶಾಲ ಪ್ರಮಾಣದ ಪುನರ್ವ್ಯವಸ್ಥೆ. ಬರೀ ಸುಧಾರಣೆಯೇ ಅಲ್ಲ; ನಮ್ಮ ಸಂಸ್ಕೃತಿಯನ್ನೇ ನಾವು ಮತ್ತೆ ಗೆದ್ದುಕೊಂಡಹಾಗೆ. ಹಿಂದಿನ ವರ್ಣಾಶ್ರಮ ಧರ್ಮ ಮತ್ತೆ ನಿಲ್ಲುವುದು ಕಷ್ಟವಾದೀತು. ಆದರೆ ಆ ತತ್ವವೇ ನಮಗೆ ದಾರಿ ತೋರಿಸಬೇಕು. ವಿದ್ಯಾ ಧನಗಳು ನಾಲ್ಕು ಜನರ ಗುತ್ತಿಗೆಯಾಗದಂತೆ—ಇಂಗ್ಲೆಂಡಿನಲ್ಲಿ ಐವತ್ತು ಮನೆ

ತನಗಳಿಗೆ, ಫ್ರಾನ್ಸಿನಲ್ಲಿ ೨೦೦ ಮನೆತನಗಳಿಗೆ ಎಲ್ಲ ಸಂಪತ್ತು ಸೇರಿದೆ—ನೋಡಿಕೊಳ್ಳಬೇಕು. ಈ ತರದ ಧರ್ಮವ್ಯವಸ್ಥೆಯಲ್ಲಿ ಸಮತಾವಾದದ ಅವಗುಣಗಳು, ಅದರ ಹಿಂಸೆ ವಿದ್ವೇಷಗಳು ಮಾತ್ಸರ ವಿರೋಧಗಳು ಇಲ್ಲದೆ ಸಮತಾವಾದದ ಉತ್ತಮ ತತ್ವ ರೂಪುಗೊಂಡೀತು. ಹಾಗೆ ಪುನರ್ನಿರ್ಮಿತವಾದ ಸಮಾಜದಲ್ಲಿ ಹಿಂದೂ ಕುಟುಂಬವು ಮತ್ತೆ ತನ್ನ ಪುರಾತನ ಪಾವಿತ್ರ್ಯವನ್ನು ಪಡೆದು ಸಂಸ್ಕೃತಿಗೆ ಆಧಾರವಾದೀತು. ನೀತಿ ಮರ್ಯಾದೆಗಳ ಮಾದರಿಯಾಗಿ, ಸೌಖ್ಯ ಆರೋಗ್ಯಗಳ ಗಣಿಯಾಗಿ, ಪರಸ್ಪರ ಸಹಾಯದ ಕೇಂದ್ರವಾಗಿ, ಕೌಟುಂಬಿಕ ಪ್ರೇಮದ ಕ್ಷೇತ್ರವಾಗಿ, ಪರಿಶುದ್ಧವಾದ ಸಾರ್ವಜನಿಕ ಜೀವನಕ್ಕೆ ಬೀಜವಾಗಿ ಹಿಂದೂ ಗೃಹ ಮೆರೆದೀತು. ಆಗ ಬಡತನ ಒಂದು ತಪ್ಪಾಗದು. ಸಿರಿವಂತಿಕೆ ಪಾಳೆಯಗಾರತನವಾಗದು.

ಬೆಂಗಳೂರು ಸಿಟಿ ಟೌನ್ ಪ್ರೆಸ್ಸಿನಲ್ಲಿ H. L. ಪ್ರಸಾದ್‌ರಿಂದ ಮುದ್ರಿಸಲ್ಪಟ್ಟಿತು.

ಮತ್ತೊಂದು ಹೊಸ ವಿಜಯ!

ಲೋಕಪ್ರಸಿದ್ಧವಾದ ಕೆ. ರಂಗಪ್ಪನವರ

# ಪ್ರಭಾತ್ ಅಗರ್‌ಬತ್ತಿ

ಸುವಾಸನೆಗೆ ಮೆಚ್ಚಿ ಹಾಸನದಲ್ಲಿ ನಡೆದ ಗ್ರಾಮ ಸುಧಾರಕ ಸಮ್ಮೇ


ವಸ್ತುಪ್ರದರ್ಶನದಲ್ಲಿ ಸಚಿವರಾದ ಶ್ರೀ ಎಂ. ಎ. ಶ್ರೀನಿವಾಸರವರು

ಸುವರ್ಣ ಪದಕವನ್ನು

ಕೊಟ್ಟಿದಾರೆ.

**ಮೈಸೂರು ಪ್ರಭಾತ್ ಸುಗ**

ಅವೆನ್ಯೂ ರೋ



TRADE MARK
Ruby & Co
ದಾಹನಿವಾರಕ
“ರುಬಿ ಜೂಸ್”
ರುಬಿಯವರ ಮಿಶ್ರಫಲರಸಭರಿತ
ಪಾನೀಯ
Ruby & Co
BANGALORE